# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು – 570006

**ದಿನಾಂಕ: 01.12.2023ರಂದು ಪೂರ್ವಾಹ್ನ 11.30** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ಭವನ ಕಟ್ಟಡದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ **175ನೇ** ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು. | **ಪ್ರೊ ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಪ್ರೊ. ಲಕ್ಷ್ಮಿ .ಎನ್**<br>ಡೀನ್(ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ ಮೈಸೂರು. | **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ |
| **ಶ್ರೀ. ಡಿ. ರವಿಶಂಕರ್**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.139/1, ಕೆಸ್ತೂರು ಕೊಪ್ಪಲು ಗ್ರಾಮ,<br>ಕೆಸ್ತೂರು ಅಂಚೆ, ಕೃಷ್ಣರಾಜನಗರ ತಾಲ್ಲೂಕು,<br>ಮೈಸೂರು ಜಿಲ್ಲೆ. | **ಶ್ರೀ. ಬಿ.ಜಿ. ಪಾಟೀಲ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. ಇ/8/862, ಐರಾವಳಿ, ನೆಹರು ಗೂಂಜ್,<br>ಕಲಬುರಗಿ – 585104 |
| | |
| **ಅನುಪಸ್ಥಿತರು** | |
| **ಶ್ರೀ. ಕೆ. ಹರೀಶ್ ಗೌಡ**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.1, ಸಿ.ಹೆಚ್.35, ಕಾಂತರಾಜು ಅರಸ್ ರಸ್ತೆ,<br>ಕೆ.ಜಿ.ಕೊಪ್ಪಲು, ಮೈಸೂರು - 570009 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ<br>ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 |
| ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 | |

ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

ಮಾನ್ಯ ಕುಲಪತಿಗಳು ಮಾತನಾಡಿ, ವಿಷಯಸೂಚಿ ಪ್ರಕಾರ 175ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಲು ಕುಲಸಚಿವರಿಗೆ ಸೂಚಿಸಿದರು. ನಂತರ, ಕುಲಸಚಿವರು 175ನೇ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಿದರು.

**ಕುಲಪತಿಗಳು** **ಕುಲಸಚಿವರು**

ಇಂದಿನ ಸಭೆಯನ್ನು ಕಲ್ಯಾಣ ಕರ್ನಾಟಕ ಭಾಗವಾದ ಪ್ರದೇಶಾಭಿವೃದ್ಧಿ ಭಾಗವಾದ ಕಲಬುರ್ಗಿಯಲ್ಲಿ ಮಾಡಲು ಈಗಾಗಲೇ ತೀರ್ಮಾನಿಸಲಾಗಿತ್ತು. ಆದರೆ ಇಲ್ಲಿಯೇ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ.ಅಡಗೂರು ಹೆಚ್. ವಿಶ್ವನಾಥ್, ಶ್ರೀ. ಬಿ.ಸಿ.ಪಾಟೀಲ್ ರವರು ಸಭೆಯ ಗಮನಕ್ಕೆ ತಂದರು.

ಇಂತಹ ಸಭೆಗಳಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ) ಮತ್ತು ಹಣಕಾಸು ಇಲಾಖೆಯವರು ಹಾಜರಾಗಿರಬೇಕು. ಇದರಿಂದ ಅನುಕೂಲವಾಗುತ್ತದೆಂದು ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಮುಂದಿನ ಸಭೆಯನ್ನು ಕಲಬುರ್ಗಿಯಲ್ಲಿ ಹಮ್ಮಿಕೊಳ್ಳಲಾಗುವುದೆಂದು ಹಾಗೆಯೇ ಅದರ ಮುಂದಿನ ಸಭೆಯನ್ನು ಬೆಂಗಳೂರಿನ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ನಡೆಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

**ವಿಷಯ ಸಂಖ್ಯೆ: 175.01**

**ಅ) ದಿನಾಂಕ: 15.09.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ.**

– * –

**ತೀರ್ಮಾನ:**

**ಅ) ದಿನಾಂಕ: 15.09.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಸ್ಥಿರೀಕರಿಸಲಾಯಿತು.**

*****

**ಆ) ದಿನಾಂಕ: 15.09.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿ ಬಗ್ಗೆ.**

– * –

**ತೀರ್ಮಾನ:**

**ಆ) ದಿನಾಂಕ: 15.09.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 174ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಅನುಮೋದಿಸಲಾಯಿತು.**

#####

**ವಿಷಯ ಸಂಖ್ಯೆ: 175.02**

**ವಿಷಯ: ಶ್ರೀ ಬಿ.ಜಿ ವಿರುಪಾಕ್ಷಯ್ಯ, ಸಹಾಯಕ ಕುಲಸಚಿವ, ಹಣಕಾಸು ವಿಭಾಗ, ಕರಾಮುವಿ, ಇವರ ಮೇಲೆ ಮಾಡಲಾದ ಆರೋಪವನ್ನು ರದ್ದುಪಡಿಸುವ ಬಗೆಗೆ.**

– * –

ಶ್ರೀ ಬಿ.ಜಿ ವಿರುಪಾಕ್ಷಯ್ಯ, ಸಹಾಯಕ ಕುಲಸಚಿವ, ಹಣಕಾಸು ವಿಭಾಗ, ಕರಾಮುವಿ,ಇವರು ದಿನಾಂಕ: 13.03.2023ರ ಪತ್ರದ ಮೂಲಕ ಇವರಿಗೆ 'ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿವಿ ನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 09 ಮತ್ತು 10 ರಂತೆ ದಿನಾಂಕ: 02.04.2019 **'ಷೋಕಾಸ್ ನೋಟಿಸ್'** ಜಾರಿ ಮಾಡಲಾಗಿದ್ದು, ಸದರಿಯವರಿಗೆ ಆರೋಪಪಟ್ಟಿನ್ನು ಸಿದ್ಧಪಡಿಸಿ ಆರೋಪ–01 ರಿಂದ 03ರನ್ನು ಜಾರಿಗೊಳಿಸಲಾಗಿರುತ್ತದೆ. ಸದರಿ ಷೋಕಾಸ್ ನೋಟಿಸ್ ಮೂಲಕ ಮಾಡಲಾದ ಆರೋಪವನ್ನು ರದ್ದು ಪಡಿಸುವಂತೆ ಮನವಿ ಸಲ್ಲಿಸಿರುತ್ತಾರೆ.

ಕುಲಪತಿಗಳು ಕುಲಸಚಿವರು

ಶ್ರೀ ಬಿ.ಜಿ ವಿರುಪಾಕ್ಷಯ್ಯ, ಇವರಿಗೆ ಮೈಸೂರು ವಿವಿ ನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 09 ಮತ್ತು 10 ರಂತೆ ದಿನಾಂಕ: 02.04.2019 ಷೋಕಾಸ್ ನೋಟಿಸ್ ಜಾರಿ ಮಾಡಲಾಗಿದ್ದು,

ಸದರಿಯವರನ್ನು ದಿನಾಂಕ: 07.03.2022ರ ಆದೇಶದ ಮೂಲಕ ಅಮಾನತ್ತುಗೊಳಿಸಲಾಗಿರುತ್ತದೆ. ಸದರಿಯವರು ಅಮಾನತ್ತನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಾನ್ಯ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಹಾಗೂ **ಮಾನ್ಯ ಕುಲಪತಿಗಳು 'Wirhdraw the Suspension order Since Shanumuga One man committee in their report did not mention the name of Virupakshaiah as well as there is a stay on suspension by Honorable Court of Karnataka' ಎಂದು ಆದೇಶಿಸಿರುವುದರಿಂದ, ಸದರಿಯವರ ಅಮಾನತ್ತನ್ನು ರದ್ದುಪಡಿಸಿ, ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಲಾಗಿರುತ್ತದೆ.** ಶ್ರೀ ಬಿ.ಜಿ ವಿರುಪಾಕ್ಷಯ್ಯ, ಇವರು ಅಧೀಕ್ಷಕ ಹುದ್ದೆಯ ಜೇಷ್ಠತೆ ಆಧಾರದನ್ವಯ ನ್ಯಾಯಾಲಯದ ಅಂತಿಮ ತೀರ್ಪಿಗೊಳಪಟ್ಟು ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಲಾಗಿರುತ್ತದೆ ಎಂಬುದನ್ನು ತಮ್ಮ ಅವಗಾಹನೆಗೆ ತರಲಾಗಿದೆ. ಈ ಸಂಬಂಧವಾಗಿ ಸದರಿಯವರು ವಿಶ್ವವಿದ್ಯಾನಿಲಯವು ಮಾಡಲಾದ ಆರೋಪ (Charges) ಅನ್ನು ರದ್ದು ಪಡಿಸುವಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP-14673/2022 ದಾವೆ ಹೂಡಿರುತ್ತಾರೆ, ಪ್ರಸ್ತುತ ಸದರಿ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಹಾಗೂ ಸದರಿಯವರಿಗೆ ದಿನಾಂಕ: 02.04.2019 'ಷೋಕಾಸ್ ನೋಟಿಸ್' ಜಾರಿಗೊಳಿಸಿ ದೋಷರೋಪಣೆ ಪಟ್ಟಿ ಸಿದ್ಧಪಡಿಸಿ ಆರೋಪ ಮಾಡಲಾಗಿದ್ದಾದರೂ ಸಹ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿವಿ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 09(2) ಪ್ರಕಾರ ಕ್ರಮವಹಿಸದಿರುವುದರಿಂದ 'Lapses of Procedure' ಆಗುವ ಸಾಧ್ಯತೆ ಇರುವುದರಿಂದ **"ಶ್ರೀ ಬಿ.ಜಿ ವಿರುಪಾಕ್ಷಯ್ಯ" ಇವರ ಮೇಲೆ ಮಾಡಲಾದ ದೋಷರೋಪಣೆಯನ್ನು ರದ್ದುಗೊಳಿಸುವ ಸಂಬಂಧ 'ಶಿಸ್ತು ಪ್ರಾಧಿಕಾರವಾದ' ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಮುಂದೆ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯ ಮಂಡಿಸಲಾಗಿತ್ತು.**

**ದಿನಾಂಕ: 18.03.2023ರಂದು ನಡೆದ 171ನೇ ಸಭೆಯ ವಿಷಯ ಸಂಖ್ಯೆ 171.10ರಲ್ಲಿ ಶ್ರೀ ಬಿ ಜಿ ವಿರುಪಾಕ್ಷಯ್ಯ ಇವರ ಮೇಲೆ ಮಾಡಲಾದ ಆರೋಪವನ್ನು ರದ್ದುಪಡಿಸುವ ಸಂಬಂಧ ಸಮಿತಿಯನ್ನು ರಚಿಸಿ ನಿಯಮಾನುಸಾರ ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಗಿತ್ತು.**

**ಆದರೆ ಸದರಿಯವರು ಹೂಡಲಾದ ದಾವೆಗಳಿಗೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 30.06.2023 ರಂದು ಅಂತಿಮ ಆದೇಶ ನೀಡಲಾಗಿದ್ದು, ತೀರ್ಮಾನ ಈ ಕೆಳಕಂಡಂತಿದೆ** (W.P No.14673/2022 ಮತ್ತು W.P No.6294/2022).

(i) W.P No. 14673/2022 is hereby allowed.
(ii) The articles of Charges, dated 02.04.2019 passed by the respondent- University, is set aside
(iii) In view of the allowing W.P No. 14673/2022, no further order is required to be passed in W.P No6294/2022 and the same has become inconsequential. According, W.P. No. 6294/2022 is ***disposed of*** in term of the order passed in W.P No 14673/2022 ಎಂದು ಆದೇಶ ಹೊರಡಿಸಲಾರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ಬಿ.ಜಿ ವಿರುಪಾಕ್ಷಯ್ಯ, ಸಹಾಯಕ ಕುಲಸಚಿವ, ಹಣಕಾಸು ವಿಭಾಗ ಇವರ ಮೇಲೆ ಮಾಡಲಾದ ಆರೋಪ ಹಾಗೂ ದೋಷಾರೋಪಣ ಪಟ್ಟಿಯನ್ನು ರದ್ದುಗೊಳಿಸಿ, ಅರ್ಹ ದಿನಾಂಕದಿಂದ ನಿಯಮಾನುಸಾರ ಲಭ್ಯವಾಗಬೇಕಾದ ಆರ್ಥಿಕ ಸೌಲಭ್ಯ ಹಾಗೂ ಸೇವಾ ಜೇಷ್ಠತೆಯನ್ನು ಪರಿಗಣಿಸುವ ಸಂಬಂಧ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯವನ್ನು ಮಂಡಿಸಿದೆ.

*****

ಕುಲಪತಿಗಳು | ಕುಲಸಚಿವರು

ಕುಲಸಚಿವರು ಮಾತನಾಡಿ, ಸದರಿಯವರನ್ನು ದಿನಾಂಕ: 07.03.2022ರ ಆದೇಶದ ಮೂಲಕ ಅಮಾನತ್ತುಗೊಳಿಸಲಾಗಿರುತ್ತದೆ. ಈ ಅಮಾನತ್ತನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೊಡಿದ್ದು, ಮಾನ್ಯ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಹಾಗೂ **ಮಾನ್ಯ ಕುಲಪತಿಗಳು 'Wirhdraw the Suspension order Since Shanumuga One man committee in their report did not mention the name of Virupakshaiah as well as there is a stay on suspension by Honorable Court of Karnataka' ಎಂದು ಆದೇಶಿಸಿರುವ ಹಿನ್ನಲೆಯಲ್ಲಿ** ಸದರಿಯವರಿಗೆ ನ್ಯಾಯಾಲಯದ ಅಂತಿಮ ತೀರ್ಪಿಗೊಳಪಟ್ಟು ಅಧೀಕ್ಷಕ ಹುದ್ದೆಯ ಜೇಷ್ಠತೆ ಆಧಾರದನ್ವಯ ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಲಾಗಿರುತ್ತದೆ. ಸದರಿಯವರ ಅಮಾನತ್ತನ್ನು ರದ್ದುಪಡಿಸಿ, ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸುವ ಸಂಬಂಧ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಿದೆ ಎಂದು ಸಭೆಗೆ ತಿಳಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಸದರಿ ನೌಕರರ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ಅನುಸಾರ ವಿ.ವಿ.ನಿಲಯ ಮಾಡಲಾದ ಆರೋಪವನ್ನು ರದ್ದುಪಡಿಸಿ, ಇವರಿಗೆ ಅರೋಪ ಮುಕ್ತಗೊಳಿಸಿದೆ. ನಿಯಮಾನುಸಾರ ಅರ್ಹ ದಿನಾಂಕದಿಂದ ಜೇಷ್ಠತೆಗೆ ಪರಿಗಣಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**<u>ವಿಷಯ ಸಂಖ್ಯೆ: 175.03</u>**

**ವಿಷಯ: ಶ್ರೀ.ಸಿ.ಬಿ. ಮಂಜುನಾಥ್.ಟಿ.ಸಿಸಿ. (ಅಮಾನತ್ತು) ಕರಾಮುವಿ ಪ್ರಾದೇಶಿಕ ಕೇಂದ್ರ ತುಮಕೂರು. ಇವರ ವಿರುದ್ಧ ಇಲಾಖಾ ವಿಚಾರಣೆಯ ಅಂತಿಮ ವರದಿ ಸಲ್ಲಿಸಿರುವ ಕುರಿತು.**

– * –

ಶ್ರೀ. ಸಿ.ಬಿ.ಮಂಜುನಾಥ್, ಟಿ.ಸಿ.ಸಿ (ಅಮಾನತ್ತು) ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು. ಇವರ ವಿರುದ್ಧ ಕರ್ತವ್ಯಲೋಪ ಹಾಗೂ ಸೇವಾ ನಿಯಮಗಳನ್ನು ಉಲ್ಲಂಘಿಸಿರುವ ಸಂಬಂಧ ಇಲಾಖಾ ವಿಚಾರಣೆ ನಡೆಸಲು ಶ್ರೀ. ಗೋಪಾಲ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು. ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿದ್ದು, ಇವರು ಇಲಾಖಾ ವಿಚಾರಣೆ ನಡೆಸಿ ಅಂತಿಮ ವರದಿಯನ್ನು ದಿನಾಂಕ: 31–08–2023ರಂದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ವರದಿಯನ್ನು ವಿಶ್ವವಿದ್ಯಾನಿಲಯದ ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ಚರ್ಚಿಸಿ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಈ ವಿಷಯದ ಬಗ್ಗೆ ಕುಲಸಚಿವರು ಮಾತನಾಡಿ, ಶ್ರೀ. ಸಿ.ಬಿ.ಮಂಜುನಾಥ್, ಟಿ.ಸಿ.ಸಿ (ಅಮಾನತ್ತು) ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು. ಇವರ ವಿರುದ್ಧ ಕರ್ತವ್ಯಲೋಪ ಹಾಗೂ ಸೇವಾ ನಿಯಮಗಳನ್ನು ಉಲ್ಲಂಘಿಸಿರುವ ಸಂಬಂಧ ಇಲಾಖಾ ವಿಚಾರಣೆ ನಡೆಸಲು ಶ್ರೀ. ಗೋಪಾಲ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು. ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿದ್ದು, ಇವರು ಇಲಾಖಾ ವಿಚಾರಣೆ ನಡೆಸಿ ಅಂತಿಮ ವರದಿಯನ್ನು ದಿನಾಂಕ: 31–08–2023ರಂದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದು, ಸದರಿ ವರದಿಯಲ್ಲಿ ನೌಕರರ ವರ್ತನೆ ಅಶಿಸ್ತಿನಿಂದ ಕೂಡಿರುವುದಾಗಿ ತಿಳಿಸಿರುವ ಹಿನ್ನಲೆಯಲ್ಲಿ, ಈ ನೌಕರನು ಎರಡು ವರ್ಷದಿಂದ ಅಮಾನತ್ತಿನಲ್ಲಿ ಇರುತ್ತಾರೆಂದು ಸಭೆಯ ಗಮನಕ್ಕೆ ತಂದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ.ಸಿ.ಬಿ.ಮಂಜುನಾಥ್, ಟಿ.ಸಿ.ಸಿ (ಅಮಾನತ್ತು) ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು. ಇವರನ್ನು, ಕರ್ತವ್ಯದಿಂದ ನಿಯಮಾನುಸಾರ ಕಡ್ಡಾಯ ನಿವೃತ್ತಿಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ಕುಲಪತಿಗಳು** **ಕುಲಸಚಿವರು**

**ವಿಷಯ ಸಂಖ್ಯೆ: 175.04**

**ವಿಷಯ: ಶ್ರೀಮತಿ ನಾಗರತ್ನ, ಪ್ರಥಮ ದರ್ಜೆ ಗುಮಾಸ್ತೆ, ಪರೀಕ್ಷಾ ವಿಭಾಗ, ಕರಾಮುವಿ, ಇವರ ಮೇಲೆ ಇಲಾಖಾ ವಿಚಾರಣೆ ನೆಡೆಸುವುದನ್ನು ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಗೊಳಿಸಿರುವ ಕುರಿತು.**

– * –

ಶ್ರೀಮತಿ ನಾಗರತ್ನ ಪ್ರಥಮ ದರ್ಜೆ ಗುಮಾಸ್ತೆ, ಪರೀಕ್ಷಾ ವಿಭಾಗ ಕರಾಮುವಿ, ಇವರು ದಿನಾಂಕ : 25.02.2023 ರಿಂದ ಇಂದಿನವರಗೂ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೇ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ಅನಧಿಕೃತ ಗೈರುಹಾಜರಾಗಿದ್ದು, ಸೂಚಿ ನೀಡಿದ್ದರೂ ಕಛೇರಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ ಹಾಗೂ ವಿಶ್ವವಿದ್ಯಾನಿಲಯದ ಸುಸೂತ್ರ ಆಡಳಿತ ದೃಷ್ಠಿಯಿಂದ ಆಡಳಿತ ವಿಭಾಗದಿಂದ ಪರೀಕ್ಷಾ ವಿಭಾಗಕ್ಕೆ ಆಂತರಿಕ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿ ವರ್ಗಾವಣೆಗೊಂಡ ವಿಭಾಗಕ್ಕೂ ಸಹ ಕರ್ತವ್ಯದ ಮೇಲೆ ವರದಿ ಮಾಡಿಕೊಂಡಿರುವುದಿಲ್ಲ, ಈ ಸಂಬಂಧ ವಿಶ್ವವಿದ್ಯಾನಿಲಯದ ವತಿಯಿಂದ ದಿನಾಂಕ :25.05.2023 ರಂದು "ಷೋಕಾಸ್ ನೋಟಿಸ್" ಅನ್ನು ಜಾರಿಮಾಡಲಾಗಿದ್ದು, 07 ದಿನಗಳ ಕಾಲಾವಕಾಶ ನೀಡಿ ಕರ್ತವ್ಯಕ್ಕೆ ಹಾಜರಾಗಲು ಹಾಗೂ ಕಛೇರಿ ಕರ್ತವ್ಯಕ್ಕೆ ಹಾಜರಾಗದೇ ಇದ್ದ ಪಕ್ಷದಲ್ಲಿ ನಿಮ್ಮ ಹೇಳಿಕೆ ಏನು ಇಲ್ಲವೆಂದು ಭಾವಿಸಿ ನಿಯಮಗಳಡಿಯಲ್ಲಿ ಕ್ರಮಕೈಗೊಳ್ಳಲಾಗುದೆಂದು ತಿಳಿಸಲಾಗಿತ್ತು, ಈ ಸಂಬಂಧ ಸದರಿ ಲಕೋಟೆಯು ಸ್ವೀಕೃತವಾಗದೆ ಕಛೇರಿಗೆ ವಾಪಸ್ಸು ಬಂದಿರುತ್ತದೆ.

ವಿಶ್ವವಿದ್ಯಾನಿಲಯದ ವತಿಯಿಂದ ದಿನಾಂಕ:14.07.2023 ರಂದು "ಷೋಕಾಸ್ ನೋಟಿಸ್–2" ಅನ್ನು ಜಾರಿ ಮಾಡಲಾಗಿದ್ದು, 07 ದಿನಗಳ ಕಾಲಾವಕಾಶ ನೀಡಿ ಕರ್ತವ್ಯಕ್ಕೆ ಹಾಜರಾಗಲು ಹಾಗೂ ಕಛೇರಿ ಕರ್ತವ್ಯಕ್ಕೆ ಹಾಜರಾಗದೇ ಇದ್ದ ಪಕ್ಷದಲ್ಲಿ ನಿಮ್ಮ ಹೇಳಿಕೆ ಏನು ಇಲ್ಲವೆಂದು ಭಾವಿಸಿ ನಿಯಮಗಳಡಿಯಲ್ಲಿ ಕ್ರಮಕೈಗೊಳ್ಳಲಾಗುದೆಂದು ತಿಳಿಸಲಾಗಿತ್ತು, ಸದರಿ ನೋಟೀಸ್ ಅನ್ನು ಸ್ವೀಕರಿಸಿ ತಮ್ಮ ವೈಯಕ್ತಿಕ ಕಾರಣ ಹಾಗೂ ಆರ್ಥಿಕ ಸಮಸ್ಯೆಗಳನ್ನು ತಿಳಿಸಿ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಕ್ಕೆ ವರ್ಗಾವಣೆ ಮಾಡಿಕೊಡುವಂತೆ ಅಂಚೆ ಮೂಲಕ ಪತ್ರವನ್ನು ರವಾನಿಸಿರುತ್ತಾರೆ. ಸದರಿಯವರು ಲಿಖಿತ ಹೇಳಿಕೆ ಸಮಂಜಸವಾಗಿಲ್ಲವಾದ್ದರಿಂದ ಖುದ್ದಾಗಿ ಹಾಜರಾಗದೇ ಇರುವುದರಿಂದ ವಿಶ್ವವಿದ್ಯಾನಿಲಯದ ವತಿಯಿಂದ ದಿನಾಂಕ:30.09.2023 ರಂದು "ಷೋಕಾಸ್ ನೋಟೀಸ್–3" ಅನ್ನು ಜಾರಿ ಮಾಡಲಾಗಿದ್ದು, 07 ದಿನಗಳ ಕಾಲಾವಕಾಶ ನೀಡಿ ಕರ್ತವ್ಯಕ್ಕೆ ಹಾಜರಾಗಲು ಹಾಗೂ ನಿಗದಿತ ಅವದಿಯೊಳಗೆ ಕಛೇರಿ ಕರ್ತವ್ಯಕ್ಕೆ ಹಾಜರಾಗದೇ ನಿಮ್ಮ ಲಿಖಿತ ಹೇಳಿಕೆ ಸಲ್ಲಿಕೆಯಾಗದಿದ್ದಲ್ಲಿ ನಿಮ್ಮ ಹೇಳಿಕೆ ಏನು ಇಲ್ಲವೆಂದು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಕೆಲಸವನ್ನು ನಿರ್ವಹಿಸಲು ಆಸಕ್ತಿ ಇಲ್ಲವೆಂದು ಭಾವಿಸಿ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ವರ್ತನೆ) ಪರಿಯಮದನ್ವಯ ನಿಯಮಾನುಸಾರ ಕ್ರಮಕೈಗೊಳ್ಳಲಾಗುದೆಂದು ತಿಳಿಸಲಾಗಿತ್ತು.

ಆದರೆ ಸದರಿ ಷೋಕಾಸ್ ನೋಟಿಸ್ ಗೆ ಯಾವುದೇ ಪ್ರತಿಕ್ರಿಯೆ ನೀಡದೇ ಇರುವುದಿರಂದ ಅನಧಿಕೃತ ಗೈರುಹಾಜರಿ/ ಕರ್ತವ್ಯಲೋಪ/ಕಛೇರಿ ಸಭ್ಯತೆಯನ್ನು ಕಾಪಾಡುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿರುವ ಸಂಬಂಧ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ವರ್ತನೆ) ಪರಿನಿಯಮದನ್ವಯ ನಿಯಮ–3ಅನ್ನು ಉಲ್ಲಂಘಿಸಿದಂತಾಗಿದ್ದು, ಇವರ ವಿರುದ್ಧ ನಡೆಸಲು ಉದ್ದೇಶಿರುವ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ವಿಶ್ವವಿಸ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ವರ್ತನೆ) ಪರಿನಿಯಮಗಳ ನಿಯಮ–7(1)(ಎ) ರೀತ್ಯಾ ದಿನಾಂಕ:19.10.2023 ರಂದು ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶ ಹೊರಡಿಸಲಾಗಿದೆ (ಪ್ರತಿ ಲಗತ್ತಿಸಿದೆ)

ಸದರಿ ವಿಷಯವನ್ನು ಅವಗಾಹನೆಗೆ ತರುತ್ತಾ, ವಿಶ್ವವಿದ್ಯಾನಿಲಯದ ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಗೆ ಅನುಸಮರ್ಥನೆ ಕೋರಿ ವಿಷಯ ಮಂಡಿಸಿದೆ.

*****

ಕುಲಪತಿಗಳು　　　　　　　　　　　　　　　　　　ಕುಲಸಚಿವರು

ಕುಲಸಚಿವರು ಮಾತನಾಡಿ ಸದರಿ ನೌಕರರು ದಿನಾಂಕ: 25.02.2023 ರಿಂದ ಇಂದಿನವರೆಗೂ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ದಿನಾಂಕ: 25.05.2023, ಷೋಕಾಸ್ ನೋಟಿಸ್ ಅನ್ನು ಜಾರಿ ಮಾಡಲಾಗಿತ್ತು, ಅನಂತರ ದಿನಾಂಕ: 14.07.2023ರಂದು ಷೋಕಾಸ್ ನೋಟಿಸ್–2 ಮತ್ತು ದಿನಾಂಕ: 30.09.2023 ರಂದು ಷೋಕಾಸ್ ನೋಟಿಸ್–3 ಅನ್ನು ಜಾರಿ ಮಾಡಿದ್ದರೂ ಸಹ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲವೆಂದು ಸಭೆಗೆ ವಿವರಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀಮತಿ. ನಾಗರತ್ನ, ಪ್ರಥಮ ದರ್ಜೆ ಗುಮಾಸ್ತೆ, ಪರೀಕ್ಷಾ ವಿಭಾಗ, ಕರಾಮುವಿ, ಇವರನ್ನು ಅಮಾನತ್ತುಗೊಳಿಸಿರುವ ಪ್ರಕ್ರಿಯೆಗೆ ವ್ಯವಸ್ಥಾಪನಾ ಮಂಡಳಿ ಸಭೆಯು ಅನುಸಮರ್ಥಿಸಿತು. ಮುಂದುವರೆದು ನಿಯಮಾನುಸಾರ ಕ್ರಮವಹಿಸಲು ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 175.05**

**ವಿಷಯ: ವಿಶ್ವವಿದ್ಯಾನಿಲಯವು Prof.K.S.Rangappa, Prof.M.G.Krishnan, Prof.P.S.Naik, Prof.B.S.Vishwanath ಮತ್ತು Dr. V.L.Kamalesh ಇವರುಗಳ ವಿರುದ್ಧ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆ, ಮೈಸೂರು ಇಲ್ಲಿ ಸಲ್ಲಿಸಿದ್ದ ಪಿರ್ಯಾದು ಸಂಬಂಧ ದಾಖಲಾಗಿದ್ದ FIR.No.53/2019ರ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯ, ನವದೆಹಲಿ SLP Nos. 3781-3784/ 2021ಗಳಲ್ಲಿ ದಿನಾಂಕ: 29.08.2023 ರಂದು ಹೊರಡಿಸಿರುವ ಆದೇಶದ ಬಗ್ಗೆ.**

– * –

ವಿಶ್ವವಿದ್ಯಾನಿಲಯದಲ್ಲಿ ನಡೆಯಲಾಗಿದೆ ಎನ್ನಲಾದ ವಿವಿಧ ಅಕ್ರಮಗಳ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ಘನತೆವೆತ್ತ ಕುಲಾಧಿಪತಿಗಳಿಂದ ನೇಮಕಗೊಂಡಿದ್ದ Retd., Justice Dr.K.Bhakthavatsala, ಏಕ ಸದಸ್ಯ ಸತ್ಯಶೋಧನಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಘನತೆವೆತ್ತ ಕುಲಾಧಿಪತಿಗಳು ಕರಾಮುವಿ ಅಧಿನಿಯಮ 1992ರ ಕಲಂ–8(8)ರನ್ವಯ ನೀಡಿದ್ದ ಅಂತಿಮ ನಿರ್ದೇಶನಗಳನ್ನು ಅನುಷ್ಠಾನಗೊಳಿಸಲು **ದಿನಾಂಕ:15.10.2019ರಂದು** ನಡೆದ ವ್ಯವಸ್ಥಾಪನಾ ಮಂಡಳಿಯ 158ನೇ ಸಾಮಾನ್ಯ ಸಭೆಯ (ವಿ.ಸಂ.158.17) ತೀರ್ಮಾನದ ಮೇರೆಗೆ ಮತ್ತು The Karnataka State Universities and Colleges Backward Classes & Minority Teachers Association (Regd.), Mysuru ಇವರು ವಿಶ್ವವಿದ್ಯಾನಿಲಯದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಿಸಿದ್ದ Writ Petition No.17068 of 2018(GM-RES)ರ **ದಿನಾಂಕ:18.10.2019ರ** ಮಧ್ಯಂತರ ಆದೇಶದಂತೆ ಕ್ರಮವಹಿಸಿ ವಿಶ್ವವಿದ್ಯಾನಿಲಯವು **ದಿನಾಂಕ:20.11.2019ರಂದು** ಮೈಸೂರಿನ ಜಯಲಕ್ಷ್ಮೀಪುರಂ ಪೋಲಿಸ್ ಠಾಣೆ ಇಲ್ಲಿ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪಿರ್ಯಾದನ್ನು ಸಲ್ಲಿಸಲಾಗಿರುತ್ತದೆ.

ಸದರಿ ಪಿರ್ಯಾದು ಮೇರೆಗೆ ಜಯಲಕ್ಷ್ಮೀಪುರಂ ಪೋಲಿಸ್ ಠಾಣೆ, ಮೈಸೂರು ಇವರು ವಿಶ್ರಾಂತ ಕುಲಪತಿಗಳಾದ Prof.K.S.Rangappa, Prof.M.G.Krishnan ಹಾಗೂ ಮಾಜಿ ಕುಲಸಚಿವರುಗಳಾದ Prof.P.S.Naik ಮತ್ತು Prof.B.S.Vishwanath ಹಾಗೂ ಮಾಜಿ ಐಟಿ ನಿರ್ದೇಶಕರಾದ Dr.V.L.Kamalesh ಇವರುಗಳ ವಿರುದ್ಧ **FIR.No53/2019ಅನ್ನು ದಿನಾಂಕ: 19.12.2019 ರಂದು** ದಾಖಲಿಸಿರುತ್ತಾರೆ.

**ಕುಲಪತಿಗಳು** **ಕುಲಸಚಿವರು**

ಮಾಜಿ ಐಟಿ ನಿರ್ದೇಶಕರಾದ Dr.V.L.Kamalesh ಇವರನ್ನು ಹೊರತುಪಡಿಸಿ ಸದರಿಯವರುಗಳು FIR Cr.No53/2019ಅನ್ನು ರದ್ದುಗೊಳಿಸುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ Criminal Petition Nos.8762/2019, 8752/2019, 8768/2019 ಮತ್ತು 8772/2019ಗಳನ್ನು ಕ್ರಮವಾಗಿ ದಾಖಲಿಸಿರುತ್ತಾರೆ. **ಸದರಿ ಪ್ರಕರಣಗಳು Common Judgement ಮೂಲಕ ದಿನಾಂಕ:15.09.2020ರಂದು Allowed ಆಗಿದ್ದು, FIR Cr.No53/2019ಅನ್ನು ರದ್ದುಗೊಳಿಸಿ ಆದೇಶಿಸಿರುತ್ತದೆ.**

ಸದರಿ CriminalPetitionsಗಳನ್ನು ವಿಶ್ವವಿದ್ಯಾನಿಲಯದ ಪರವಾಗಿ ಪ್ರತಿನಿಧಿಸಿರುವ ವಿಶ್ವವಿದ್ಯಾನಿಲಯದ ವಕೀಲರಾದ Sri.Santhosh.S.Nagarale ಇವರು ಸದರಿ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯ, ನವದೆಹಲಿ ಇಲ್ಲಿ Special Leave Petitions ಮೂಲಕ ಮೇಲ್ಮನವಿ ಸಲ್ಲಿಸಲು **ದಿನಾಂಕ:24.09.2020ರಂದು** ಕಾನೂನು ಅಭಿಪ್ರಾಯ (legal opinion) ಸಲ್ಲಿಸಿದ್ದ ಕಾರಣ ಮತ್ತು **ದಿನಾಂಕ:23.10.2020ರಂದು** ನಡೆದ ವ್ಯವಸ್ಥಾಪನಾ ಮಂಡಳಿ 162ನೇ ಸಾಮಾನ್ಯ ಸಭೆ (ವಿ.ಸಂ-162.13) ತೀರ್ಮಾನದ ಮೇರೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯ, ನವದೆಹಲಿ ಇಲ್ಲಿ ವಿ.ವಿ ವಕೀಲರಾದ Sri.Shekhar.G.Devasa ಇವರ ಮೂಲಕ Special Leave to Appeal (Criminal) No.3781-3784/ 2021ಅನ್ನು ದಾಖಲಿಸಲಾಗಿತ್ತು.

**ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸದರಿ Special Leave to Appeal (Criminal) No.3781-3784/ 2021ಗಳಲ್ಲಿ ದಿನಾಂಕ:29.08.2023ರಂದು ಕೆಳಕಂಡಂತೆ ಆದೇಶಿಸಿ ಇತ್ಯರ್ಥಗೊಳಿಸಿರುತ್ತದೆ.**

> ***"...After hearing learned senior counsel for the parties, we find no error in the impugned judgment passed by the High Court in coming to the conlusion that the allegations are similar and the issue are pending before jurisdictional Court.***
>
> ***The Special Leave Petitions are, accordingly, dismissed.***
>
> ***Pending application(s), if any, shall disposed of..."***
>
> **(ಆದೇಶದ ಪ್ರತಿ ಲಗತ್ತಿಸಿದೆ)**

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮೇಲ್ಕಂಡ Special Leave to Appeal (Criminal) No.3781-3784/2021ರಲ್ಲಿ ಹೊರಡಿಸಿರುವ ಆದೇಶದ ಸಂಬಂಧ ಮುಂದಿನ ಕ್ರಮದ ಬಗ್ಗೆ ಮಾರ್ಗದರ್ಶನ ಕೋರಿ ಘನತೆವೆತ್ತ ಕುಲಾಧಿಪತಿಗಳು ಮತ್ತು ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಇವರುಗಳಿಗೆ **ದಿನಾಂಕ**:30.09.2023**ರಂದು** ಪತ್ರಗಳನ್ನು ಸಲ್ಲಿಸಲಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮೇಲ್ಕಂಡ Special Leave to Appeal (Criminal) No.3781-3784/2021ರಲ್ಲಿ ಹೊರಡಿಸಿರುವ ಆದೇಶವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅವಗಾಹನೆ ಮತ್ತು ಮುಂದಿನ ಕ್ರಮದ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

*****

ಕುಲಸಚಿವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ನಡೆಯಲಾಗಿದೆ ಎನ್ನಲಾದ ವಿವಿಧ ಅಕ್ರಮಗಳ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ಘನತೆವೆತ್ತ ಕುಲಾಧಿಪತಿಗಳಿಂದ ನೇಮಕಗೊಂಡಿದ್ದ Retd., Justice Dr.K.Bhakthavatsala, ಏಕ ಸದಸ್ಯ ಸತ್ಯಶೋಧನಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳ ಬಗ್ಗೆ ಜಯಲಕ್ಷ್ಮೀಪುರಂ ಪೋಲಿಸ್ ಠಾಣೆ, ಮೈಸೂರು ಇವರು ವಿಶ್ರಾಂತ ಕುಲಪತಿಗಳಾದ Prof.K.S.Rangappa,

ಕುಲಪತಿಗಳು ಕುಲಸಚಿವರು

Prof.M.G.Krishnan ಹಾಗೂ ಮಾಜಿ ಕುಲಸಚಿವರುಗಳಾದ Prof.P.S.Naik ಮತ್ತು Prof.B.S.Vishwanath ಹಾಗೂ ಮಾಜಿ ಐಟಿ ನಿರ್ದೇಶಕರಾದ Dr.V.L.Kamalesh ಇವರುಗಳ ವಿರುದ್ಧ **FIR.No.53/2019ಅನ್ನು ದಿನಾಂಕ:19.12.2019 ರಂದು** ದಾಖಲಿಸಿದ್ದು, ಈ ಸಂಬಂಧ ಸದರಿ **ಮಾನ್ಯ ಸರ್ವೋಚ್ಛ ನ್ಯಾಯಾಲಯವು** ಸದರಿ **Special Leave to Appeal (Criminal) No.3781-3784/2021ಗಳಲ್ಲಿ ದಿನಾಂಕ:29.08.2023ರಂದು** ***"…After hearing learned senior counsel for the parties, we find no error in the impugned judgment passed by the High Court in coming to the conlusion that the allegations are similar and the issue are pending before jurisdictional Court.***

***The Special Leave Petitions are, accordingly, dismissed.***

***Pending application(s), if any, shall disposed of…"***
ಎಂದು ಆದೇಶಿಸಿ ಇತ್ಯರ್ಥಗೊಳಿಸಿರುತ್ತದೆ.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸದರಿ Special Leave to Appeal (Criminal) No.3781-3784/ 2021ಗಳಲ್ಲಿ ದಿನಾಂಕ: 29.08.2023ರ ತೀರ್ಮಾನವನ್ನು ಅನುಷ್ಠಾನಗೊಳಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 175.06**

**ವಿಷಯ: Sri.Shekhar.G.Devasa, Advocate and Sri.Basava Prabhu.S. Patil, Senior Designated Counsel, New Delhi ಇವರುಗಳು Special Leave to Appeal (Criminal) No.3781-3784/2021ಗಳನ್ನು ವಿಶ್ವವಿದ್ಯಾನಿಲಯದ ಪರ ಪ್ರತಿನಿಧಿಸಿರುವ ಸಂಬಂಧ ಕೋರಿರುವ ವಕೀಲಿ ಶುಲ್ಕದ ಬಗ್ಗೆ.**

– * –

ವಿಶ್ವವಿದ್ಯಾನಿಲಯದಲ್ಲಿ ನಡೆಯಲಾಗಿದೆ ಎನ್ನಲಾದ ವಿವಿಧ ಅಕ್ರಮಗಳ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ಘನತೆವೆತ್ತ ಕುಲಾಧಿಪತಿಗಳಿಂದ ನೇಮಕಗೊಂಡಿದ್ದ Retd., Justice Dr.K.Bhakthavatsala, ಏಕ ಸದಸ್ಯ ಸತ್ಯಶೋಧನಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಘನತೆವೆತ್ತ ಕುಲಾಧಿಪತಿಗಳು ಕರಾಮುವಿ ಅಧಿನಿಯಮ 1992ರ ಕಲಂ-8(8)ರನ್ವಯ ನೀಡಿದ್ದ ಅಂತಿಮ ನಿರ್ದೇಶನಗಳನ್ನು ಅನುಷ್ಠಾನಗೊಳಿಸಲು **ದಿನಾಂಕ:15.10.2019 ರಂದು** ನಡೆದ ವ್ಯವಸ್ಥಾಪನಾ ಮಂಡಳಿಯ 158ನೇ ಸಾಮಾನ್ಯ ಸಭೆಯ ತೀರ್ಮಾನದ ಮೇರೆಗೆ ಮತ್ತು The Karnataka State Universities and Colleges Backward Classes & Minority Teachers Association (Regd.), Mysuru ಇವರು ವಿಶ್ವವಿದ್ಯಾನಿಲಯದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಿಸಿದ್ದ WP.No.17068/2018 (GM-RES)ರ **ದಿನಾಂಕ:18.10.2019ರ** ಮಧ್ಯಂತರ ಆದೇಶದಂತೆ ಕ್ರಮವಹಿಸಿ ವಿಶ್ವವಿದ್ಯಾನಿಲಯವು **ದಿನಾಂಕ:20.11.2019 ರಂದು** ಮೈಸೂರಿನ ಜಯಲಕ್ಷ್ಮೀಪುರಂ ಪೋಲಿಸ್ ಠಾಣೆ ಇಲ್ಲಿ .

ಕುಲಪತಿಗಳು ಕುಲಸಚಿವರು

ವಿಶ್ರಾಂತ ಕುಲಪತಿಗಳಾದ Prof. K.S. Rangappa, Prof. M.G. Krishnan ಹಾಗೂ ಮಾಜಿ ಕುಲಸಚಿವರುಗಳಾದ Prof. P.S. Naik ಮತ್ತು Prof. B.S. Vishwanath ಹಾಗೂ ಮಾಜಿ ಐಟಿ ನಿರ್ದೇಶಕರಾದ Dr.V.L.Kamalesh ಇವರುಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸಲ್ಲಿಸಿದ್ದ ಪಿರ್ಯಾದು ಮೇರೆಗೆ, ಸದರಿ ಪೊಲೀಸ್ ಠಾಣೆಯವರು ಸದರಿಯವರುಗಳ ವಿರುದ್ಧ **FIR.No.53/2019ಅನ್ನು ದಿನಾಂಕ:19.12.2019 ರಂದು** ದಾಖಲಿಸಿರುತ್ತಾರೆ.

ಮಾಜಿ ಐಟಿ ನಿರ್ದೇಶಕರಾದ Dr.V.L.Kamalesh ಇವರನ್ನು ಹೊರತುಪಡಿಸಿ ಸದರಿಯವರುಗಳು ಸದರಿ FIR ಅನ್ನು ರದ್ದುಪಡಿಸುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ Criminal Petition Nos.8762/2019, 8752/2019, 8768/2019 ಮತ್ತು 8772/2019ಗಳನ್ನು ದಾಖಲಿಸಿದ್ದು, ಸದರಿ ಪ್ರಕರಣಗಳು Common Judgment ಮೂಲಕ **ದಿನಾಂಕ: 15.09.2020ರಂದು** Allowed ಆಗಿದ್ದು, FIR Cr.No53/2019ಅನ್ನು ರದ್ದುಗೊಳಿಸಿ ಆದೇಶಿಸಿರುತ್ತದೆ.

ವಿಶ್ವವಿದ್ಯಾನಿಲಯದ ವಕೀಲರಾದ Sri.Santhosh.S.Nagarale ಇವರು **ದಿನಾಂಕ: 24.09.2020 ರಂದು** ನೀಡಿದ ಕಾನೂನು ಅಭಿಪ್ರಾಯ (legal opinion) ಮತ್ತು **ದಿನಾಂಕ:23.10.2020ರಂದು** ನಡೆದ ವ್ಯವಸ್ಥಾಪನಾ ಮಂಡಳಿ 162ನೇ ಸಾಮಾನ್ಯ ಸಭೆ (ವಿ.ಸಂ-162.13) ತೀರ್ಮಾನದ ಮೇರೆಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯ, ನವದೆಹಲಿ ಇಲ್ಲಿ ವಿ.ವಿ ವಕೀಲರಾದ Sri.Shekhar.G.Devasa ಇವರ ಮೂಲಕ Special Leave to Appeal (Criminal) No.3781-3784/2021ಅನ್ನು ದಾಖಲಿಸಲಾಗಿತ್ತು.

**ಸದರಿ Special Leave to Appeal (Criminal) No.3781-3784/2021ಗಳು ದಿನಾಂಕ: 29.08.2023ರಂದು ಇತ್ಯರ್ಥಗೊಂಡಿರುತ್ತದೆ.**

Sri.Shekhar.G.Devasa, ವಕೀಲರು ಇವರು ಮಾನ್ಯ ಸರ್ವೋಚ್ಛ ನ್ಯಾಯಾಲಯ, ನವದೆಹಲಿ ಇಲ್ಲಿ Special Leave to Appeal (Criminal) No.3781-3784/2021ಗಳನ್ನು various attending the hearing dates, including filing of rejoinder, filing of additional documents, etc., ಬಗ್ಗೆ Professional Fees and Expenses **ರೂ.1,10,000/- (ಒಂದು ಲಕ್ಷದ ಹತ್ತು ಸಾವಿರ ರೂಪಾಯಿಗಳು ಮಾತ್ರ)**ಗಳನ್ನು ಪಾವತಿಗಾಗಿ ಹುಂಡಿಯಲ್ಲಿ ಕೋರಿರುತ್ತಾರೆ. **(ಅನುಬಂಧ-ಅ)**

ಮುಂದುವರೆದು, ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಸದರಿ Special Leave Petition (Crl) ಅನ್ನು Admit ಮಾಡಿ ಪ್ರತಿನಿಧಿಸುವ ಸಂಬಂಧ **Sri.Basava Prabhu.S.Patil, Senior Designated Counsel, NewDelhi** ಇವರ ಸೇವೆಯನ್ನ ಪಡೆಯಲು ವಿ.ವಿ.ನಿಲಯವು ದಿನಾಂಕ:30.06.2021ರಂದು ವಿ.ವಿ.ನಿಲಯದ ಪರವಾಗಿ ಪ್ರಕರಣಗಳನ್ನು ಪ್ರತಿನಿಧಿಸುತ್ತಿರುವ **Sri.Shekhar.G.Devasa, ವಕೀಲರು, ನವದೆಹಲಿ** ಇವರಿಗೆ ಅನುಮತಿ ಪತ್ರವನ್ನು ನೀಡಲಾಗಿರುತ್ತದೆ.

ಅದರಂತೆ Sri.Basava Prabhu.S.Patil, Senior Designated Counsel ಇವರು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಅಂತಿಮ ವಿಚಾರಣೆ/ವಾದಕ್ಕಾಗಿ ನಿಗಧಿಗೊಂಡಿದ್ದ ದಿನಾಂಕ:29.08.2023ರಂದು ಮೇಲ್ಕಂಡ ಪ್ರಕರಣಗಳಲ್ಲಿ ವಿ.ವಿ.ನಿಲಯದ ಪರವಾಗಿ ಹಾಜರಾಗಿ Appearance and Conference ಮಾಡಿರುವ ಸಂಬಂಧ ಒಟ್ಟು ವಕೀಲಿ ಶುಲ್ಕ ರೂ.3,50,000/- (ಮೂರು ಲಕ್ಷದ ಐವತ್ತು ಸಾವಿರ ರೂಪಾಯಿ ಮಾತ್ರ)ಗಳ ಪಾವತಿಗಾಗಿ ಹುಂಡಿಯಲ್ಲಿ ಕೋರಿರುತ್ತಾರೆ. **(ಅನುಬಂಧ-ಆ)**

**ಕುಲಪತಿಗಳು** **ಕುಲಸಚಿವರು.**

Sri.Shekhar.G.Devasa, ವಕೀಲರು ಇವರಿಗೆ **ದಿನಾಂಕ:12.02.2021ರಂದು** ಮತ್ತು Sri.Basava Prabhu.S.Patil, ಹಿರಿಯ ವಕೀಲರು ಇವರಿಗೆ **ದಿನಾಂಕ:07.09.2021ರಂದು** ಕ್ರಮವಾಗಿ ರೂ.1,26,000/- ಮತ್ತು ರೂ.3,30,000/-ಗಳನ್ನು ಈಗಾಗಲೇ ಪಾವತಿಸಲಾಗಿರುತ್ತದೆ ಎಂಬ ಅಂಶವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅವಗಾಹನೆಗೆ ತರಲಾಗಿದೆ.

ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಮೇರೆಗೆ ರಚಿತಗೊಂಡಿರುವ "KSOU Conduct of Litigation Guidelines-2019"ರ Annexure-1A-Fee Structures, Sl.No.12ರಲ್ಲಿ Supreme Court Casesರಲ್ಲಿ "To be determined on the basis of merit of the case by the Vice Chancellor" ಎಂಬುದಾಗಿ ನಿಯಮ ಇರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯ, ನವದೆಹಲಿ ಇಲ್ಲಿ Special Leave to Appeal (Criminal) No.3781-3784/2021ಗಳನ್ನು ವಿಶ್ವವಿದ್ಯಾನಿಲಯದ ಪರವಾಗಿ ಪ್ರತಿನಿಧಿಸಿರುವ Sri.Shekhar.G.Devasa, ವಕೀಲರು ಇವರು ಕೋರಿರುವ ವಕೀಲಿ ಶುಲ್ಕ ರೂ.1,10,000/- (ಒಂದು ಲಕ್ಷದ ಹತ್ತು ಸಾವಿರ ರೂಪಾಯಿಗಳು ಮಾತ್ರ) ಮತ್ತು Sri.Basava Prabhu.S.Patil, Senior Designated Counsel ಇವರು ಕೋರಿರುವ ವಕೀಲಿ ಶುಲ್ಕ ರೂ.3,50,000/- (ಮೂರು ಲಕ್ಷದ ಐವತ್ತು ಸಾವಿರ ರೂಪಾಯಿ ಮಾತ್ರ)ಗಳನ್ನು ಸದರಿಯವರುಗಳಿಗೆ ಪಾವತಿಸುವ ಬಗ್ಗೆ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

*****

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, Sri.Shekhar.G.Devasa, ವಕೀಲರು ಇವರು ಕೋರಿರುವ ವಕೀಲಿ ಶುಲ್ಕ ರೂ.1,10,000/- ಮತ್ತು Sri.Basava Prabhu.S.Patil, Senior Designated Counsel ಇವರು ಕೋರಿರುವ ವಕೀಲಿ ಶುಲ್ಕ ರೂ.3,50,000/- ಒಟ್ಟಾರೆ ಶುಲ್ಕ ರೂ.4,60,000/- (ನಾಲ್ಕು ಲಕ್ಷದ ಅರವತ್ತು ಸಾವಿರ ರೂಪಾಯಿ ಮಾತ್ರ)ಗಳನ್ನು ಪಾವತಿಸಲು ಸಭೆಯು ಅನುಮೋದಿಸಿತು..**

#####

**ವಿಷಯ ಸಂಖ್ಯೆ: 175.07**

**ವಿಷಯ: ಕುಮಾರಿ. ದೀಕ್ಷಾ .ಎಸ್, D/o ಲೇಟ್ ಶಿವಣ್ಣ .ಎನ್ ಇವರು ಅನುಕಂಪದ ಆಧಾರದ ಮೇಲೆ ಉದ್ಯೋಗ ಕೋರಿ ಸಲ್ಲಿಸಿರುವ ಮನವಿ ಪತ್ರ ದಿನಾಂಕ: 21.10.2023ರ ಬಗೆಗೆ.**

– * –

ಕುಮಾರಿ. ದೀಕ್ಷಾ .ಎಸ್, D/o ಲೇಟ್ ಶಿವಣ್ಣ .ಎನ್, ಇವರು ದಿನಾಂಕ: 21.10.2023 ರಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ ತಮ್ಮ ತಂದೆಯವರಾದ ಶ್ರೀ ಶಿವಣ್ಣ .ಎನ್, ವಿಶ್ವವಿದ್ಯಾನಿಲಯದ ಖಾಯಂ ನೌಕರರಾಗಿದ್ದು ದಿನಾಂಕ: 25.02.2023ರಂದು ಮರಣ ಹೊಂದಿರುವುದಾಗಿ ಹಾಗೂ ನಾವುಗಳು ಅವರ ಅವಲಂಬಿತರಾಗಿದ್ದೇವೆಂದು ತಿಳಿಸಿ, ನಮ್ಮ ತಂದೆಯವರ ಸೇವೆಯನ್ನು ಪರಿಗಣಿಸಿ ನಮ್ಮ ಕುಟುಂಬವು ಮುಂದೆ ಜೀವನ ನಡೆಸಲು ಅನುವಾಗುವಂತೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಬೇಕಾಗಿ ಕೋರಿ ಮನವಿ ಪತ್ರ ಸಲ್ಲಿಸಿರುತ್ತಾರೆ.

ಕುಲಪತಿಗಳು

ಕುಲಸಚಿವರು

ಮೃತರ ಪತ್ನಿಯಾದ ಶ್ರೀಮತಿ. ವಸಂತರವರು ನನ್ನ ಮಗಳಿಗೆ ಅನುಕಂಪದ ಆಧಾರದ ನೌಕರಿಯನ್ನು ಕೊಡಬೇಕೆಂದು ದಿನಾಂಕ: 21.10.2023ರಂದು ಒಪ್ಪಿಗೆಯ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಕುಮಾರಿ. ದೀಕ್ಷಾ .ಎಸ್, D/o ಲೇಟ್ ಶಿವಣ್ಣ .ಎನ್, ಇವರು ಅನುಕಂಪದ ಆಧಾರದ ಮೇಲಿನ ನೌಕರಿಗೆ ಅರ್ಜಿ ಸಲ್ಲಿಸಿದ ದಿನಾಂಕಕ್ಕೆ 21 ವರ್ಷ 08 ತಿಂಗಳು ಪೂರೈಸಿದ್ದು, ವಿದ್ಯಾರ್ಹತೆಯಾಗಿ ಬಿ.ಎಸ್ಸಿ ಪದವಿಯಲ್ಲಿ ತೇರ್ಗಡೆ ಹೊಂದಿದ್ದು, ಅಂತಿಮ ವರ್ಷದ ಫಲಿತಾಂಶದ ಅಂತರ್ಜಾಲದ ಪ್ರತಿಯನ್ನು ಲಗತ್ತಿಸಿರುತ್ತಾರೆ.

ಮೂಲ ಅಂಕಪಟ್ಟಿಯ ಛಾಯಾ ಪ್ರತಿ ಹಾಗೂ ಪದವಿ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಿರುವುದಿಲ್ಲ ಎಂಬುದು ದಾಖಲೆಗಳ ಪ್ರಕಾರ ತಿಳಿದು ಬಂದಿರುತ್ತದೆ.

ಮುಂದುವರೆದು, (1) ದಿ. ಶಿವಣ್ಣ .ಎನ್, ಮರಣ ಸಮರ್ಥನಾ ಪತ್ರ (2) ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ (3) ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಛಾಯಾ ಪ್ರತಿ (4) ಪಿ.ಯು.ಸಿ. ಅಂಕಪಟ್ಟಿಯ ಛಾಯಾ ಪ್ರತಿ, ಪಿ.ಯು.ಸಿ ಅಂಕಪಟ್ಟಿಯ ಛಾಯಾ ಪ್ರತಿ, (5) ಬಿ.ಎಸ್ಸಿ. ಪದವಿಯ 1 ರಿಂದ 5ನೇ ಸೆಮಿಸ್ಟರ್ ಅಂಕಪಟ್ಟಿಗಳ ಛಾಯಾ ಪ್ರತಿ ಹಾಗೂ 6ನೇ ಸೆಮಿಸ್ಟರ್ ಅಂತರ್ಜಾಲದ ಪ್ರತಿ (6) ಆದಾಯ ಮತ್ತು ಜಾತಿ ದೃಢೀಕರಣ ಪತ್ರ (7) ಓಟರ್ ಐಡಿಯ ಛಾಯಾ ಪ್ರತಿ (08) ಆಧಾರ್ ಕಾರ್ಡ್‌ನ ಛಾಯಾ ಪ್ರತಿ (09) ರೇಷನ್ ಕಾರ್ಡ್‌ನ ಛಾಯಾ ಪ್ರತಿ (10) ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ (11) ಪಾನ್ ಕಾರ್ಡ್‌ನ ಛಾಯಾ ಪ್ರತಿಯನ್ನು ಮನವಿ ಅರ್ಜಿಯೊಂದಿಗೆ ಸದರಿ ದಾಖಲೆಗಳನ್ನು ದೃಢೀಕರಣ ಮಾಡಿ ಸಲ್ಲಿಸಿರುತ್ತಾರೆ. ಸದರಿ ದಾಖಲೆಗಳನ್ನು ತಮ್ಮ ಅವಗಾಹನೆಗಾಗಿ ಕಡತದಲ್ಲಿ ಲಗತ್ತಿಸಿದೆ.

ಶ್ರೀ. ಶಿವಣ್ಣ .ಎನ್, ಇವರು ನೇರ ನೇಮಕಾತಿ ಅಧಿಕೃತ ಜ್ಞಾಪನ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ2/ಸೇ.ನೇ/9/538/2007-08, ದಿನಾಂಕ: 21.11.2007ರ ಮೂಲಕ ಸೇವಕ ಹುದ್ದೆಗೆ ನೇಮಕಗೊಂಡು ದಿನಾಂಕ: 22.11.2007 ರಂದು ಪೂರ್ವಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ದಿನಾಂಕ: 25.02.2023ರಂದು ಅಕಾಲಿಕ ಮರಣ ಹೊಂದಿರುತ್ತಾರೆ. ಮರಣದ ಸಂದರ್ಭದಲ್ಲಿ ದ್ವಿತೀಯ ದರ್ಜೆ ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಲೇಟ್ ಶಿವಣ್ಣ. ಎನ್, ರವರು ತಮ್ಮ ಸೇವಾ ವಹಿಯಲ್ಲಿ ನೀಡಿರುವ ಅವಲಂಬಿತರ ಮಾಹಿತಿಯಲ್ಲಿ ಪತ್ನಿಯಾಗಿ ಶ್ರೀಮತಿ. ವಸಂತ, ಮಗಳಾಗಿ ದೀಕ್ಷಾ .ಎಸ್, ಇವರುಗಳ ಮಾಹಿತಿಯನ್ನು ನೀಡಿರುತ್ತಾರೆ. ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಸಂಬಂಧ ಕರಾಮುವಿ ನಿಲಯವು ಪರಿನಿಯಮಾವಳಿಯನ್ನು ರಚಿಸಿಕೊಂಡಿರುತ್ತಾರೆ.

ಕರ್ನಾಟಕ ನಾಗರೀಕ ಸೇವೆಗಳು (Appointment on Compassionate Grounds) ನಿಯಮ 1996 ರಲ್ಲಿ ಅನುಕಂಪದ ಆದಾರದ ಮೇಲೆ ಉದ್ಯೋಗ ನೀಡುವ ಕುರಿತು ತಿಳಿಸಲಾಗಿರುವ ಅರ್ಹತೆ ಮತ್ತು ಷರತ್ತುಗಳು ಹಾಗೂ ತತ್ಸಂಬಂಧ ಲೇಟ್ ಶ್ರೀ. ಶಿವಣ್ಣ .ಎನ್, ರವರ ಮಗಳ ಸಂಬಂಧಿಸಿದ ಮಾಹಿತಿಯು ಈ ಕೆಳಕಂಡಂತಿರುತ್ತದೆ.

ಕುಲಪತಿಗಳು

ಕುಲಸಚಿವರು

| ಕ್ರ.ಸಂ. | ಕೆ.ಸಿ.ಎಸ್. ನಿಯಮದಲ್ಲಿ ತಿಳಿಸಲಾಗಿರುವ ಅರ್ಹತೆ ಮತ್ತು ಷರತ್ತುಗಳು | ತತ್ಸಂಬಂಧ ಮಾಹಿತಿ |
|---|---|---|
| | **Eligibility for appointment**<br>1. Appointment on compassionate ground under these rules shall not be claimed as a matter of right and shall not be given as a matter of course.<br>2. Appointment under these rules shall be restricted to the dependent of a deceased Government servant in the following order of preference namely-<br>[(i) in the case of the deceased female Government servant<br>(a) a son;<br><br>3. An adopted son or daughter a deceased Government servant shall not be eligible for appointment under these rules [2][(4) A person against whom at the time of making application a criminal case is under investigation or trial, on the charge of having committed murder of the deceased Government servant or for abetting the commission of such offence shall not be eligible for appointment under these rules.]<br>4.Conditions of appointment – Appointment on compassionate grounds under these rules shall vi subject to the following conditions namely<br>(1) The family of the deceased Government servant should be in a financial crisis or destitution.<br>(2) Person seeking appointment shall be within the age limit specified for the post in the relevant rules of recruitment specially made in respect of any service or post read with sub-rule (3) of Rule ^ of the Karnataka Civil Serves ( General Recruitment) Rules, 1977 and where it is not so specified such person shall be within the age limits specified in the Karnataka Civil Services ( General Recruitment) Rules, 1977<br><br>(3) Person seeking appointment should possess the minimum qualification specified for the post in the relevant rules of recruitment specially made in respect of any service or post; | 1. --<br><br>2.(a) ಕುಮಾರಿ. ದೀಕ್ಷಾ .ಎಸ್ ಇವರು ಲೇಟ್ ಶ್ರೀ. ಶಿವಣ್ಣ .ಎನ್, ರವರ ಮಗಳಾಗಿರುತ್ತಾರೆ.<br><br>3. ಅನ್ವಯಿಸುವುದಿಲ್ಲ<br><br>4. ಕುಮಾರಿ. ದೀಕ್ಷಾ .ಎಸ್, ಇವರು ಸಲ್ಲಿಸಿರುವ ಕುಟುಂಬದ ಆದಾಯ ದೃಡೀಕರಣ ಪತ್ರದಲ್ಲಿ ವಾರ್ಷಿಕ ರೂ.80,000/- ಮತ್ತು ಹಾಗೂ ಹಿಂದುಳಿದ ವರ್ಗ ಪ್ರವರ್ಗ-II(ಎ) ರಲ್ಲಿ ಬರುವ ಕುರುಬ ಜಾತಿಗೆ ಸೇರಿರುತ್ತಾರೆಂದು ದಾಖಲಿಸಲಾಗಿರುತ್ತದೆ (ತಹಶೀಲ್ದಾರರು, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರು ನೀಡಿರುವ ದೃಢೀಕರಣ ಪತ್ರ.<br>ಸಂಖ್ಯೆ:RD1218882035424ದಿನಾಂಕ:20.10.2023).<br>ಕುಮಾರಿ. ದೀಕ್ಷಾ .ಎಸ್, ಇವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿಯವರ ಜನ್ಮ ದಿನಾಂಕ: 19.01.2002(ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ) ಆಗಿದ್ದು, ಅರ್ಜಿ ಸಲ್ಲಿಸಿದ ದಿನಾಂಕಕ್ಕೆ 21 ವರ್ಷ 08 ತಿಂಗಳು ಪೂರೈಸಿರುತ್ತಾರೆ ಕ್ರಮ ಸಂಖ್ಯೆ 3 ಮತ್ತು 4ರ ಷರತ್ತುಗಳಿಗೆ ಸಂಬಂಧಿಸಿದಂತೆ ಕುಮಾರಿ. ದೀಕ್ಷಾ .ಎಸ್, ಇವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ,<br><br>ಸದರಿಯವರು ಶೈಕ್ಷಣಿಕ ವಿದ್ಯಾರ್ಹತೆ ಬಿ.ಎಸ್ಸಿ. ಪದವಿಯನ್ನು ಪ್ರಸ್ತುತ ತೇರ್ಗಡೆ ಹೊಂದಿದ್ದು, ಅಂತಿಮ ವರ್ಷದ ಫಲಿತಾಂಶದ ಅಂತರ್ಜಾಲದ ಪ್ರತಿಯನ್ನು ಲಗತ್ತಿಸಿರುತ್ತಾರೆ. ಮೂಲ ಅಂಕಪಟ್ಟಿಯ |



ಕುಲಪತಿಗಳು

ಕುಲಸಚಿವರು

(4) Appointment shall be confide to any post in Group 'C' or Group 'D' depending upon the qualification specified for the post but excluding the posts carrying the pay scales higher than the scale of pay of the post of Assistant in the Karnataka Government Secretariat as may be revised from time to time and any other post in either of the groups as may be specified by the Government from time to time

(5) Appointment shall be made only against a direct recruitment vacancy.

(6) Appointment shall be made in the department in which the deceased Government servant was working.

ಛಾಯ ಪ್ರತಿ ಹಾಗೂ ಪದವಿ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಿರುವುದಿಲ್ಲ ಎಂಬುದು ಕಂಡು ಬಂದಿರುತ್ತದೆ. ಕರಾಮುವಿ ನಿಲಯವು ರಚಿಸಿಕೊಂಡಿರುವ C&R ನಿಯಮದ ಪ್ರಕಾರ ಕುಮಾರಿ. ದೀಕ್ಷಾ .ಎಸ್, ಇವರ ಶೈಕ್ಷಣಿಕ ವಿದ್ಯಾರ್ಹತೆಯನ್ನು ಪರಿಗಣಿಸಿ ಕರಾಮುವಿ ನಿಲಯದಲ್ಲಿ ನೇರ ನೇಮಕಾತಿಯಡಿಯಲ್ಲಿನ ಗ್ರೂಪ್ "ಸಿ" ವರ್ಗದ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ:

| ವಿವರ | ದ್ವಿದಗು | ಪ್ರದಗು |
|---|---|---|
| ಸೃಜನೆಯಾದ ಹುದ್ದೆಗಳು | 138 | 77 |
| 371 ಜೆ ರಡಿ ಮೀಸಲಾದ ಹುದ್ದೆಗಳು | 11 | 07 |
| 371 ಜೆ ರಡಿ ಮೀಸಲಾದ ಹುದ್ದೆಗಳನ್ನುಹೊರತುಪಡಿಸಿ ಉಳಿಯುವ ಹುದ್ದೆಗಳು | 127 | 70 |
| ಹಾಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು | 76 | 69 |
| ಖಾಲಿ ಇರುವ ಹುದ್ದೆಗಳು | 62 | 08 |

ಪ್ರಥಮ ದರ್ಜೆ ಗುಮಾಸ್ತ ಒಟ್ಟು 77 ಹುದ್ದೆಗಳು ಸೃಜನೆಯಾಗಿದ್ದು, 50ರ ಅನುಪಾತದಲ್ಲಿ ನೇರ ನೇಮಕಾತಿಗೆ 38 ಹಾಗೂ ಪದೋನ್ನತಿಗೆ 39 ಹುದ್ದೆಗಳನ್ನು ಮೀಸಲಿರಿಸಿದ್ದು, ಇದರಲ್ಲಿ 371(ಜೆ)ಗೆ ಸೇರಿದ 03 ಪದೋನ್ನತಿ ಹುದ್ದೆಗಳು ಸೇರಿದಂತೆ 39 ಪದೋನ್ನತಿ ಹುದ್ದೆಗಳಿಗೆ ಪದೋನ್ನತಿ ನೀಡಲಾಗಿರುತ್ತದೆ. 38 ನೇರ ನೇಮಕಾತಿ ಹೊಂದಿ ಮತ್ತು 27 ನೇರ ನೇಮಕಾತಿ ಹುದ್ದೆಗಳಲ್ಲಿ ಪದೋನ್ನತಿ ಪಡೆದು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಬಾಕಿ 08 ಹುದ್ದೆಗಳು ಉಳಿದಿದ್ದು, ಇದರಲ್ಲಿ 371(ಜೆ)ಗೆ 04 ಹುದ್ದೆಗಳನ್ನು ಮೀಸಲಿರಿಸಿದ್ದು, ಬಾಕಿ 04 ನೇರ ನೇಮಕಾತಿ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗಳು ಖಾಲಿ ಇರುತ್ತದೆ.

ದ್ವಿತೀಯ ದರ್ಜೆ ಗುಮಾಸ್ತ ಒಟ್ಟು 138 ಹುದ್ದೆಗಳು ಸೃಜನೆಯಾಗಿದ್ದು, 371(ಜೆ) ಗೆ ಒಟ್ಟು 11 ಹುದ್ದೆಗಳನ್ನು ಮೀಸಲಿರಿಸಲಾಗಿರುತ್ತದೆ. ಉಳಿಕೆ 127 ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳನ್ನು 50:25ರ ಅನುಪಾತದಲ್ಲಿ ನೇರ ನೇಮಕಾತಿಗೆ 95 ಹಾಗೂ ಪದೋನ್ನತಿಗೆ 32 ಹುದ್ದೆಗಳನ್ನು ಮೀಸಲಿರಿಸಿದ್ದು, ಬಾಕಿ 13 ಪದೋನ್ನತಿ ಹುದ್ದೆಗಳು ಖಾಲಿ ಇರುತ್ತದೆ ಹಾಗೂ 95 ನೇರ ನೇಮಕಾತಿ ಹುದ್ದೆಗಳಲ್ಲಿ 54 ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಹಾಗೂ ಅನುಕಂಪದ ಆಧಾರದ ಮೇಲೆ 03 ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಬಾಕಿ 38 ನೇರ ನೇಮಕಾತಿ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳು ಖಾಲಿ ಇರುತ್ತದೆ.

ಸದರಿಯವರು ಬಿ.ಎಸ್ಸಿ. ಪದವಿಯಲ್ಲಿ ತೇರ್ಗಡೆ ಹೊಂದಿದ್ದು, ಅಂತಿಮ ವರ್ಷದ ಫಲಿತಾಂಶದ ಅಂತರ್ಜಾಲದ ಪ್ರತಿಯನ್ನು ಲಗತ್ತಿಸಿರುತ್ತಾರೆ. ಮೂಲ ಅಂಕಪಟ್ಟಿಯ ಛಾಯಾ ಪ್ರತಿ ಹಾಗೂ ಪದವಿ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಿರುವುದಿಲ್ಲ.

ಕುಲಪತಿಗಳು                                                                                    ಕುಲಸಚಿವರು

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ದ್ವಿತೀಯ ದರ್ಜೆ ಸಹಾಯಕ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ದಿವಂಗತ ಶ್ರೀ. ಶಿವಣ್ಣ .ಎನ್, ಇವರ ಮಗಳಾದ ಕುಮಾರಿ. ದೀಕ್ಷಾ .ಎಸ್, ಇವರು ತಮ್ಮ ತಂದೆಯವರ ಮರಣದ ಹಿನ್ನಲೆಯಲ್ಲಿ ಅನುಕಂಪದ ಅಧಾರದ ಮೇಲೆ ನೇಮಕಾತಿ ಕೋರಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿರುವ ಮನವಿಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ದಿವಂಗತ ಶ್ರೀ. ಶಿವಣ್ಣ .ಎನ್, ಇವರು ಕರಾಮುವಿಯ ಕಾರವಾರ ಪ್ರಾದೇಶಿಕ ಕೇಂದ್ರದಲ್ಲಿ ದ್ವಿತೀಯ ದರ್ಜೆ ಸಹಾಯಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅಕಾಲಿಕ ಮರಣ ಹೊಂದಿರುತ್ತಾರೆ. ಇವರ ಮಗಳಾದ ಕುಮಾರಿ. ದೀಕ್ಷಾ .ಎಸ್, ಇವರಿಗೆ ತಂದೆಯವರ ಮರಣದ ಹಿನ್ನಲೆಯಲ್ಲಿ ಅನುಕಂಪದ ಅಧಾರದ ಮೇಲೆ ನೇಮಕಾತಿ ಮಾಡಬೇಕಾಗಿರುತ್ತದೆಂದು ಮಾನ್ಯ ಕುಲಸಚಿವರು ಸಭೆಗೆ ವಿವರಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕುಮಾರಿ. ದೀಕ್ಷಾ .ಎಸ್, D/o ಲೇಟ್ ಶಿವಣ್ಣ .ಎನ್, ಇವರಿಗೆ ತಂದೆಯವರ ಮರಣದ ಹಿನ್ನಲೆಯಲ್ಲಿ ಅನುಕಂಪದ ಅಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ನೇಮಕಾತಿ ಮಾಡಲು ಸಭೆಯು ತೀರ್ಮಾನಿಸಲಾಯಿತು.**

\#\#\#\#\#

**ವಿಷಯ ಸಂಖ್ಯೆ: 175.08**

**ವಿಷಯ: ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ Data Centre ನ Storage Upgrade ಮಾಡುವ ಸಂಬಂಧ 173ನೇ ವ್ಯವಸ್ಥಾಪನಾ ಮಂಡಳಿ ಸಭೆಯ ನಡಾವಳಿಯಲ್ಲಿ ವಿಷಯ ಸಂಖ್ಯೆ ತಿದ್ದುಪಡಿ ಮಾಡುವ ಬಗೆಗೆ.**

*****

ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ Data Centre ನ Storage Enhance ಮಾಡುವ ಸಂಬಂಧ ವ್ಯವಸ್ಥಾಪನಾ ಮಂಡಳಿಯ 173ನೇ ಸಾಮಾನ್ಯ ಸಭೆಯಲ್ಲಿ, ವಿಷಯ ಸಂಖ್ಯೆ 173.18 ರಲ್ಲಿ ವಿಷಯ ಮಂಡಿಸಲಾಗಿದ್ದು, ಸದರಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನವಾಗಿರುತ್ತದೆ.

**ವ್ಯವಸ್ಥಾಪನಾ ಮಂಡಳಿಯ ತೀರ್ಮಾನ**

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ Data Centre ನ 10TB Storage ಕಡಿಮೆಯಾಗಿರುವ ಹಿನ್ನೆಲೆಯಲ್ಲಿ Data Centre Storage Enhance ಮಾಡುವ ಸಂಬಂಧ Technical Experts Committee ಸಭೆಯ ಶಿಫಾರಸ್ಸಿನನ್ವಯ ಪ್ರಸ್ಥಾಪಿಸಿರುವ ಉಪಕರಣ/ತಂತ್ರಾಂಶಗಳನ್ನು ಖರೀದಿಸಿ GEM Portal/ Public Prcurement Portal ರ ಮುಖಾಂತರ ಅಳವಡಿಸಲು ಸಭೆಯು ಒಪ್ಪಿತು.

ಸದರಿ ಸಭೆಯ ತೀರ್ಮಾನದ ನಡಾವಳಿಯಲ್ಲಿ ವಿಷಯ ಸಂಖ್ಯೆ 173.18 ಎಂದು ನಮೂದಿಸುವ ಬದಲಾಗಿ 170.18 ಎಂದು ನಮೂದಿಸಲಾಗಿದ್ದು, ಸದರಿ ನಡಾವಳಿಯಲ್ಲಿ ವಿಷಯ ಸಂಖ್ಯೆ 173.18 ಎಂದು ತಿದ್ದುಪಡಿಯಾಗ ಬೇಕಿರುವುದರಿಂದ ಈ ಅಂಶವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

*****

ಕುಲಪತಿಗಳು ಕುಲಸಚಿವರು

ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಆಗಿರುವ ಸಣ್ಣ–ಪುಟ್ಟ ತಪ್ಪುಗಳನ್ನು ಮಾನ್ಯ ಕುಲಪತಿಗಳ ಹಂತದಲ್ಲಿಯೇ ಸರಿಪಡಿಸಿಕೊಳ್ಳಬಹುದಾಗಿರುತ್ತದೆ. ಅದನ್ನು ಹೊರತುಪಡಿಸಿ ಈ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸುವ ಅಗತ್ಯವಿರಲಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀ. ಡಿ. ರವಿಶಂಕರ್‌ರವರು ತಿಳಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವ್ಯವಸ್ಥಾಪನಾ ಮಂಡಳಿ ವಿಷಯ ಸಂಖ್ಯೆ 173.18 ಎಂದು ನಮೂದಿಸುವ ಬದಲಾಗಿ 170.18 ಎಂದು ನಮೂದಿಸಲಾಗಿದ್ದು, ಸದರಿ ನಡಾವಳಿಯಲ್ಲಿ ವಿಷಯ ಸಂಖ್ಯೆ 173.18 ಎಂದು ತಿದ್ದುಪಡಿ ಮಾಡಿಕೊಳ್ಳಲು ಸಭೆಯು ತೀರ್ಮಾನಿಸಿತು.**

#####

**ವಿಷಯ ಸಂಖ್ಯೆ: 175.09**

**ವಿಷಯ: ಕರಾಮುವಿಯಲ್ಲಿ ಗ್ರೇಡೆಡ್ ಪೇ ನೌಕರರುಗಳಲ್ಲಿ 10 ವರ್ಷಗಳಿಗಿಂತ ಹೆಚ್ಚಿನ ಕಾಲ ಸೇವೆ ಸಲ್ಲಿಸಿರುವ ನೌಕರರುಗಳಿಗೆ ಸರ್ಕಾರದಲ್ಲಿ ನೀಡುವ ಇತರೆ ಸೌಲಭ್ಯಗಳನ್ನು ನೀಡುವ ಬಗ್ಗೆ.**

– * –

ಕರಾಮುವಿಯಲ್ಲಿ ವಿವಿದ ಪದನಾಮದಲ್ಲಿ ಗ್ರೇಡೆಡ್ ಪೇ ನೌಕರರು 10 ವರ್ಷ ಪೂರ್ಣಗೊಂಡಿರುವ ಹಾಗೂ ಹೆಚ್ಚಿನ ಸೇವಾವಧಿ ಹೊಂದಿರುವ ಒಟ್ಟು 121 ಗ್ರೇಡೆಡ್ ಪೇ ನೌಕರರುಗಳಿಗೆ ಮೂಲ ವೇತನದ ಶೇಕಡ 17 ರಷ್ಟು ಮಧ್ಯಂತರ ಪರಿಹಾರ ಭತ್ಯೆ, ತುಟ್ಟಿಭತ್ಯೆ ಹಾಗೂ ಗಳಿಕೆ ರಜೆ ಸೌಲಭ್ಯವನ್ನು ನೀಡುವ ಸಂಬಂಧದ ಬಗೆಗೆ ನೌಕರರು ಮನವಿಯನ್ನು ಸಲ್ಲಿಸಿ ಸೌಲಭ್ಯವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನೌಕರರಿಗೆ ಕೋರಿರುವ ಸೌಲಭ್ಯಗಳನ್ನು ನೀಡುವ ಸಂಬಂಧವಾಗಿ ಈ ಕೆಳಕಂಡಂತೆ ವಿವಿಧ ವರ್ಗದ ಪದನಾಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿವರಗಳು

| ಕ್ರ. ಸಂ. | ಹುದ್ದೆಗಳ ವಿವರ | ಒಟ್ಟು ಸಂಖ್ಯೆ |
|---|---|---|
| 1. | ಡಿ.ಇ.ಓ. | 24 |
| 2. | ದ್ವಿ.ದ.ಗು. | 40 |
| 3. | ಪರಿಚಾರಕ | 32 |
| 4. | ಗಾರ್ಡನರ್ | 09 |
| 5. | ಸ್ವೀಪರ್ | 12 |
| 6. | ಶೌಚಾಲಯ ಸ್ವಚ್ಚತಗಾರರು | 03 |
| 7. | ಸೆಕ್ಯೂರಿಟಿ | 01 |
| | **ಒಟ್ಟು** | **121** |

ಮುಂದುವರೆದು, ಕ.ರಾ.ಮು.ವಿ. ಯಲ್ಲಿ ವಿವಿದ ಪಧನಾಮದಲ್ಲಿ **07** ವರ್ಷ ಪೂರ್ಣಗೊಳಿಸಿ 10 ವರ್ಷದ ಒಳಗೆ ಸೇವೆ ಸಲ್ಲಿಸಿಸುತ್ತಿರುವ ಒಟ್ಟು 75 ಗ್ರೇಡೆಡ್ ಪೇ ನೌಕರರುಗಳಿಗೆ ಕಾಲಕಾಲಕ್ಕೆ ತುಟ್ಟಿಭತ್ಯೆ ನೀಡುವ ಸಂಬಂಧ 174ನೇ ವ್ಯವಸ್ಥಾಪನ ಮಂಡಳಿಯ ವಿಷಯ ಸಂಖ್ಯೆ: 174.11 ರಲ್ಲಿ ವಿಷಯ ಮಂಡಿಸಲಾಗಿತ್ತು, ಈ ಸಂಬಂಧ ಸಭೆಯಲ್ಲಿ ಈ ಕೆಳಕಂಡಂತೆ ಚರ್ಚಿಸಲಾಗಿದೆ.

ಕುಲಪತಿಗಳು ಕುಲಸಚಿವರು

- ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ರವರು ಮಾತನಾಡಿ 10 ವರ್ಷ ಪೂರ್ಣಗೊಂಡಿರುವ ತಾತ್ಕಾಲಿಕ ನೌಕರರುಗಳಿಗೆ ರೋಸ್ಟರ್ ನಿಯಮಗಳನ್ನು ಅನುಸರಿಸಿರುವುದರ ಬಗ್ಗೆ ಪ್ರಸ್ತಾಪಿಸಿದರು. ನಂತರ ಮಾತನಾಡಿ, ತಾತ್ಕಾಲಿಕ ನೌಕರರುಗಳಿಗೆ ಆಯಾ ಹುದ್ದೆಗೆ ಅನುಗುಣವಾಗಿ ಇರುವ ಮೂಲ ವೇತನದಲ್ಲಿ ರೂ. 10/-ಗಳನ್ನು ಕಡಿತಗೊಳಿಸಿ ವೇತನ ನೀಡಬಹುದಾಗಿರುತ್ತದೆಂದು ತಿಳಿಸಿದರು.
- ಮಾನ್ಯ ಹಣಕಾಸು ಅಧಿಕಾರಿಗಳು ಮಾತನಾಡಿ ವಿಶ್ವವಿದ್ಯಾನಿಲದಲ್ಲಿ 10 ವರ್ಷಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ತಾತ್ಕಾಲಿಕ ನೌಕರರುಗಳಿಗೆ ಗ್ರೇಡೆಡ್ ಪೇ ನೀಡುತ್ತಿದ್ದು, ಅವರುಗಳಿಗೂ ಸರ್ಕಾರದ ಇತರೆ ಸವಲತ್ತುಗಳನ್ನು ನೀಡಲು ವ್ಯವಸ್ಥಾಪನಾ ಮಂಡಳಿ ಅನುಮೋದನೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು.
- ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್ ರವರು ಮಾತನಾಡಿ ಈ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿ 10 ವರ್ಷಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ತಾತ್ಕಾಲಿಕ ನೌಕರರುಗಳಿಗೆ ಗ್ರೇಡೆಡ್ ಪೇ ನೀಡುತಿದ್ದು, ಈ ಸಂಬಂಧ ಸರ್ಕಾರದ ಇತರೆ ಸೌಲಭ್ಯಗಳನ್ನು ನೀಡಲು ಸರ್ಕಾರದಿಂದ ಮಾರ್ಗದರ್ಶನ ಪಡೆದು ನಿರ್ವಹಣೆ ಮಾಡವುದು ಸೂಕ್ತವೆಂದು ಸಭೆಗೆ ತಿಳಿಸಿದರು.
- ಸದರಿ ವಿಷಯದ ಬಗ್ಗೆ ಶ್ರೀ ಕೆ. ಹರೀಶ್‌ಗೌಡರು ಮಾತನಾಡಿ ಸದರಿ ವಿಷಯದ ಬಗ್ಗೆ ನಿಯಮಾನುಸಾರ ಕ್ರಮವಹಿಸುವುದು ಸೂಕ್ತವೆಂದು ಸಭೆಗೆ ತಿಳಿಸಿದರು.
- ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯಗಳಲ್ಲಿ 10 ವರ್ಷಕ್ಕಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ತಾತ್ಕಾಲಿಕ ನೌಕರರುಗಳಿಗೆ ಗ್ರೇಡೆಡ್ ಪೇ ನೀಡುವ ಬಗ್ಗೆ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ತೀರ್ಮಾನಗಳಿದ್ದು, ಅದರಂತೆ ಕ್ರಮವಹಿಸಲಾಗುವುದು ಎಂದು ಜಂಟಿ ಕಾರ್ಯದರ್ಶಿ, ಹಣಕಾಸು ಇಲಾಖೆ ರವರಿಗೆ ತಿಳಿಸಿದರು.

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಷಯವನ್ನು ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಯ ಅನುಮೋದನೆಗಾಗಿ ವಿಷಯವನ್ನು ಮರು ಮಂಡಿಸಿದೆ.

*****

ಮಾನ್ಯ ಕುಲಸಚಿವರು ಮಾತನಾಡಿ ವಿಶ್ವವಿದ್ಯಾನಿಲಯಗಳಲ್ಲಿ 10 ವರ್ಷಕ್ಕಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ತಾತ್ಕಾಲಿಕ ನೌಕರರುಗಳಿಗೆ ಗ್ರೇಡೆಡ್ ಪೇ ನೀಡುತ್ತದ್ದು, 121 ಗ್ರೇಡೆಡ್ ಪೇ ನೌಕರರುಗಳಿಗೆ ಮೂಲ ವೇತನದ ಶೇಕಡ 17 ರಷ್ಟು ಮಧ್ಯಂತರ ಪರಿಹಾರ ಭತ್ಯೆ, ತುಟ್ಟಿಭತ್ಯೆ ಹಾಗೂ ಗಳಿಕೆ ರಜೆ ಸೌಲಭ್ಯವನ್ನು ನೀಡುವ ಸಂಬಂಧದ ಬಗೆಗೆ ನೌಕರರು ಮನವಿಯನ್ನು ಸಲ್ಲಿಸಿ ಸೌಲಭ್ಯವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆಂದು ವಿವರಿಸಿದರು

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಮೇಲ್ಕಂಡ 121 ಗ್ರೇಡೆಡ್ ಪೇ ನೌಕರರುಗಳಿಗೆ ಮೂಲ ವೇತನದ ಶೇಕಡ 17 ರಷ್ಟು ಮಧ್ಯಂತರ ಪರಿಹಾರ ಭತ್ಯೆಯನ್ನು 2023ರ ಡಿಸೆಂಬರ್ ಮಾಹೆಯಿಂದ ಜಾರಿಗೆ ಬಂದಂತೆ ನೀಡಲು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ಕುಲಪತಿಗಳು**

**ಕುಲಸಚಿವರು**

**ವಿಷಯ ಸಂಖ್ಯೆ: 175.10**

**ವಿಷಯ: ಶ್ರೀ ಎಂ. ಶಿವರಾಮಕೃಷ್ಣ, ಹಿರಿಯ ಸಹಾಯಕ, ಪರೀಕ್ಷಾ ವಿಭಾಗ, ಕರಾಮುವಿ, ಇವರ ಮೇಲೆ ಇಲಾಖಾ ವಿಚಾರಣೆ ನಡೆಸುವುದನ್ನು ಕಾಯ್ದಿರಿಸಿ, ಸೇವೆಯಿಂದ ಅಮಾನತ್ತುಗೊಳಿಸುವ ಕುರಿತು.**

– * –

ಶ್ರೀ ಎಂ. ಶಿವರಾಮಕೃಷ್ಣ, ಹಿರಿಯ ಸಹಾಯಕ, ಪರೀಕ್ಷಾ ವಿಭಾಗ, ಕರಾಮುವಿ, ಇರುವ ದಿನಾಂಕ: 02.04.2023ರಿಂದ ಇಂದಿನವರೆಗೂ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೇ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ಕಛೇರಿಗೆ ಅನಧಿಕೃತ ಗೈರುಹಾಜರಾಗಿದ್ದು, ಇದರಿಂದ ಕಛೇರಿ ಕೆಲಸ ಕುಂಟಿತವಾಗಿರುತ್ತದೆ ಹಾಗೂ ಅನಾನುಕೂಲವಾಗಿದೆ ಎಂಬುದನ್ನು ತಿಳಿಸಿ ಉಲ್ಲೇಖ–1ರ ಪತ್ರದಲ್ಲಿ ಕುಲಸಚಿವ(ಪರೀಕ್ಷಾಂಗ) ರವರು ವರದಿಸಿರುತ್ತಾರೆ. ಸದರಿ ವಿಷಯವಾಗಿ ಶ್ರೀ. ಎಂ. ಶಿವರಾಮಕೃಷ್ಣ, ಇವರಿಗೆ ಅನಧಿಕೃತ ಗೈರುಹಾಜರಿಯು ಕಛೇರಿ ನಿಯಮವನ್ನು ಪಾಲಿಸುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದ್ದು, ವಿಶ್ವವಿದ್ಯಾನಿಲಯದ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುತ್ತೀರಿ ಎಂದು ತಿಳಿಸಿ ವಿಶ್ವವಿದ್ಯಾನಿಲಯವು ಪ್ರಸ್ತುತ ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಯದ ಉದ್ಯೋಗಿಗಳ (ವರ್ತನೆ) ಪರಿನಿಯಮದ ನಿಯಮ–3ಅನ್ನು ಉಲ್ಲಂಘಿಸಿದಂತ್ತಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿ.ವಿ.ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿ.ವಿ.ಉದ್ಯೋಗಿಗಳ (ಸಿಸಿಎ) ಪರಿನಿಯಮದನ್ವಯ ಶಿಸ್ತುಕ್ರಮವಹಿಸಬಾರದೇಕೆ? ಎಂಬುದರ ಕುರಿತು ದಿನಾಂಕ:20.05.2023ರಂದು "ಷೋಕಾಸ್ ನೋಟಿಸ್" ಜಾರಿ ಮಾಡಿ ಷೋಕಾಸ್ ನೋಟಿಸ್ ತಲುಪಿದ ಏಳು(7) ದಿನಗಳೊಳಗಾಗಿ ಲಿಖಿತ ಸಮರ್ಥನೆಯನ್ನು ಕುಲಸಚಿವರಿಗೆ ಸಲ್ಲಿಸಿ ಕರ್ತವ್ಯಕ್ಕೆ ಹಾಜರಾಗಲು ತಿಳಿಸಲಾಗಿತ್ತು, ಈ ಸಂಬಂಧ ಸದರಿ ಲಕೋಟೆಯು ಸ್ವೀಕೃತವಾಗದೆ ಕಛೇರಿಗೆ ವಾಪಸ್ಸು ಬಂದಿರುತ್ತದೆ.

ವಿಶ್ವವಿದ್ಯಾನಿಲಯದ ವತಿಯಿಂದ ದಿನಾಂಕ: 26.06.2023 ಮತ್ತು ದಿನಾಂಕ: 15.07.2023ರನ್ವಯ ಕ್ರಮವಾಗಿ "ಷೋಕಾಸ್ ನೋಟಿಸ್–2 ಮತ್ತು 3" ಗಳನ್ನು ಜಾರಿ ಮಾಡಲಾಗಿದ್ದು, ವಿ.ವಿ.ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿ.ವಿ ಉದ್ಯೋಗಿಗಳ (ಸಿಸಿಎ) ಪರಿನಿಯಮದನ್ವಯ ಶಿಸ್ತುಕ್ರಮ ವಹಿಸಬಾರದೇಕೆ? ಎಂಬುದರ ಕುರಿತು "ಷೋಕಾಸ್ ನೋಟಿಸ್" ತಲುಪಿದ ಏಳು (7) ದಿನಗಳೊಳಗಾಗಿ ಲಿಖಿತ ಸಮರ್ಥನೆಯನ್ನು ಕುಲಸಚಿವರಿಗೆ ಸಲ್ಲಿಸಿ ಕರ್ತವ್ಯಕ್ಕೆ ಹಾಜರಾಗಲು ತಿಳಿಸಿ ಅಂಚೆ ಮೂಲಕ ರವಾನಿಸಲಾಗಿತ್ತು. ಈ ಸಂಬಂಧ ಸದರಿ ಲಕೋಟೆಗಳು ಸ್ವೀಕೃತವಾಗದೇ ಕಛೇರಿಗೆ ವಾಪಸ್ಸು ಬಂದಿರುತ್ತದೆ.

ಮುಂದುವರಿದಂತೆ, ವಿಶ್ವವಿದ್ಯಾನಿಲಯದ ವತಿಯಿಂದ ಅನಧಿಕೃತ ಗೈರುಹಾಜರಿ ಕುರಿತು ದಿನಾಂಕ:28.09.2023ರಂದು ರಾಜ್ಯ ಪತ್ರಿಕೆಯಾದ ಕನ್ನಡ ಪ್ರಭ ಹಾಗೂ ಸ್ಥಳೀಯ ಪತ್ರಿಕೆಯಾದ ಮೈಸೂರು ಮಿತ್ರ ದಿನಪತ್ರಿಕೆಯಲ್ಲಿ ಶ್ರೀ ಎಂ. ಶಿವರಾಮಕೃಷ್ಣ, ಇವರು ಕಛೇರಿಗೆ ಗೈರಾದ ಬಗ್ಗೆ ವಿಸ್ತೃತವಾಗಿ ವಿವರಿಸಲಾಗಿದ್ದು, ಪತ್ರಿಕೆಯಲ್ಲಿ ಪ್ರಕಟಣೆಗೊಂಡ ಒಂದು ವಾರದೊಳಗೆ ಆಡಳಿತ ವಿಭಾಗ, ಕರಾಮುವಿ, ಮೈಸೂರು, ಇಲ್ಲಿ ಹಾಜರಾಗಿ ನಿಮ್ಮ ಸೂಕ್ತ ಸಮಜಾಯಿಷಿಯನ್ನು ಸಲ್ಲಿಸದಿದ್ದಲ್ಲಿ ಇದೇ ಅಂತಿಮ ಸೂಚನೆಯೆಂದು ಪರಿಗಣಿಸಿ ವಿಶ್ವವಿದ್ಯಾನಿಲಯದ ಕೆಲಸವನ್ನು ನಿರ್ವಹಿಸಲು ನಿಮಗೆ ಆಸಕ್ತಿ ಇಲ್ಲವೆಂದು ಭಾವಿಸಿ, ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ವರ್ತನೆ) ಪರಿನಿಯಮದನ್ವಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಕಟಿಸಲಾಗಿತ್ತು.

ಸದರಿ ಪತ್ರಿಕಾ ಪ್ರಕಟಣೆಗೂ ಸಹ ಯಾವುದೇ ಪ್ರತಿಕ್ರಿಯೆ ನೀಡದೇ ಇರುವುದರಿಂದ ಅನಧಿಕೃತ ಗೈರುಗಾಜರಿ/ಕರ್ತವ್ಯಲೋಪ/ಕಛೇರಿ ಸಭ್ಯತೆಯನ್ನು ಕಾಪಾಡುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದ್ದು, ವಿಶ್ವವಿದ್ಯಾನಿಲಯದ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಯದಉದ್ಯೋಗಿಗಳ (ವರ್ತನೆ) ಪರಿನಿಯಮದ ನಿಯಮ–3ಅನ್ನು ಉಲ್ಲಂಘಿಸಿದಂತ್ತಾಗಿದ್ದು, ಉಲ್ಲಂಘಿಸಿದಂತ್ತಾಗಿದ್ದು, ಈ ಹಿನ್ನೆಲೆಯಲ್ಲಿ ಅನಧಿಕೃತ ಗೈರುಹಾಜರಿ / ಕರ್ತವ್ಯಲೋಪದ ದುರ್ನಡತೆ ಎಸಗಿರುವ ಶ್ರೀ ಎಂ. ಶಿವರಾಮಕೃಷ್ಣ, ಇವರನ್ನು ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಕರಾಮುವಿ ಅಳವಡಿಸಿಕೊಂಡಿರುವ ಮೈಸೂರು ವಿ.ವಿ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ–7(1)(ಎ)ರ ರೀತ್ಯ ದಿನಾಂಕ:08.11.2023 ರಂದು ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶ ಹೊರಡಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಕುಲಪತಿಗಳು ಕುಲಸಚಿವರು

ವಿಶ್ವವಿದ್ಯಾನಿಲಯವು ಕೈಗೊಂಡ ಪ್ರಕ್ರಿಯೆಗೆ ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಗೆ ಅನುಸಮರ್ಥನೆ ಕೋರಿ ವಿಷಯ ಮಂಡಿಸಿದೆ.

*****

ಕುಲಸಚಿವರು ಮಾತನಾಡಿ ಶ್ರೀ.ಎಂ.ಶಿವರಾಮಕೃಷ್ಣ, ಹಿರಿಯ ಸಹಾಯಕ, ಪರೀಕ್ಷಾ ವಿಭಾಗ, ಕರಾಮುವಿ, ಇವರು ದಿನಾಂಕ: 02.04.2023ರಿಂದ ಇಂದಿನವರೆಗೂ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ದಿನಾಂಕ: 20.05.2023, ಷೋಕಾಸ್ ನೋಟಿಸ್ ಅನ್ನು ಜಾರಿ ಮಾಡಲಾಗಿತ್ತು, ಅನಂತರ ದಿನಾಂಕ: 26.06.2023ರಂದು ಷೋಕಾಸ್ ನೋಟಿಸ್–2 ಮತ್ತು ದಿನಾಂಕ: 15.07.2023 ರಂದು ಷೋಕಾಸ್ ನೋಟಿಸ್–3 ಅನ್ನು ಜಾರಿ ಮಾಡಿದ್ದರೂ ಸಹ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲವೆಂದು ಸಭೆಗೆ ವಿವರಿಸಿದರು.

ಸದರಿ ನೌಕರರು ವಿಶ್ವವಿದ್ಯಾನಿಲಯಕ್ಕೆ ಅನಧಿಕೃತ ಗೈರುಹಾಜರಾಗಿದ್ದು, 3 ಷೋಕಾಸ್ ನೋಟಿಸ್‌ಗಳಿಗೂ ಯಾವುದೇ ಪ್ರತಿಕ್ರಿಯೆಗಳು ಬಾರದ ಹಿನ್ನಲೆಯಲ್ಲಿ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿದ್ದರೂ ಸಹ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಈ ನೌಕರರು ಅನಧಿಕೃತ ಗೈರುಗಾಜರಿ/ಕರ್ತವ್ಯಲೋಪ/ಕಛೇರಿ ಸಭ್ಯತೆಯನ್ನು ಕಾಪಾಡುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದ್ದು, ವಿಶ್ವವಿದ್ಯಾನಿಲಯದ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವುದರಿಂದ ಇವರ ಮೇಲೆ ಶಿಸ್ತು ಕ್ರಮ ಜರುಗಿಸಲು ವಿಷಯವನ್ನು ಸಭೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ ಎಂ. ಶಿವರಾಮಕೃಷ್ಣ, ಹಿರಿಯ ಸಹಾಯಕ, ಪರೀಕ್ಷಾ ವಿಭಾಗ, ಕರಾಮುವಿ, ಇವರನ್ನು ಅಮಾನತ್ತುಗೊಳಿಸಿರುವ ಪ್ರಕ್ರಿಯೆಗೆ ವ್ಯವಸ್ಥಾಪನಾ ಮಂಡಳಿ ಸಭೆಯು ಅನುಸಮರ್ಥಿಸಿತು. ಮುಂದುವರೆದು ನಿಯಮಾನುಸಾರ ಕ್ರಮವಹಿಸಲು ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 175.11**

**ವಿಷಯ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಮೊದಲನೇ ಹಂತವಾಗಿ ಯಾದಗಿರಿ, ಕಲಬುರ್ಗಿ, ಬೀದರ್ ಜಿಲ್ಲೆಗಳಲ್ಲಿ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡಗಳನ್ನು ನಿರ್ಮಿಸುವುದರ ಬಗ್ಗೆ.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ಜಿಲ್ಲೆಗಳಾದ ಬೀದರ್, ಕಲಬುರ್ಗಿ, ರಾಯಚೂರು, ಕೊಪ್ಪಳ, ಯಾದಗಿರಿ, ವಿಜಯನಗರ ಜಿಲ್ಲೆಗಳಲ್ಲಿ ವಿವಿನಿಲಯದ ಪ್ರಾದೇಶಿಕ ಕೇಂದ್ರ ಕಟ್ಟಡಗಳನ್ನು ನಿರ್ಮಿಸಲು ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ವಿವಿನಿಲಯದ ವತಿಯಿಂದ ನಿವೇಶನವನ್ನು ಖರೀದಿಸಿದ್ದು, ಉಳಿದಂತೆ ಇನ್ನು ಕೆಲವು ಜಿಲ್ಲೆಗಳಲ್ಲಿ ನಿವೇಶನಗಳನ್ನು ಖರೀದಿಸುವುದರ ಕೆಲಸವು ಪ್ರಕ್ರಿಯೆಯಲ್ಲಿರುತ್ತದೆ. ಪ್ರಸ್ತುತ ಪ್ರಾದೇಶಿಕ ಕೇಂದ್ರ ಕಟ್ಟಡವನ್ನು ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ನಿರ್ಮಿಸಲು ಸರ್ಕಾರವು ಕಲ್ಯಾಣ ಕರ್ನಾಟಕಕ್ಕೆ ಘೋಷಿಸಿರುವ ಅನುದಾನದ ಅನುಗುಣವಾಗಿ ಕಟ್ಟಡಗಳನ್ನು ನಿರ್ಮಿಸಬಹುದಾಗಿರುತ್ತದೆ.

ಕುಲಪತಿಗಳು　　　　　　　　　　　　ಕುಲಸಚಿವರು

ಮುಂದುವರೆದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮೊದಲನೇ ಹಂತವಾಗಿ ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿ, ಕಲಬುರ್ಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ನಿರ್ಮಿಸಬೇಕಿದ್ದು, ಪ್ರಸ್ತುತ ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಹಳಿಸಗರ ಗ್ರಾಮದ ಕರ್ನಾಟಕ ಸರ್ಕಾರದ ಸರ್ವೆ ನಂ:599/*/* ರಲ್ಲಿ ವಿವಿನಿಲಯಕ್ಕೆ 2.00 ಎಕರೆ ಸ್ಥಳ ಮಂಜೂರಾಗಿರುತ್ತದೆ. ಕಲಬುರ್ಗಿ ಜಿಲ್ಲೆಯಲ್ಲಿ ಕಲಬುರ್ಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಗೊಂಡ ಖಾಸಗಿ ಬಡಾವಣೆಯಾದ ಕಾಳಗನೂರ ಗ್ರಾಮದ ಸರ್ವೆ ನಂ: 97/1,2,3,4,5, 96ರಲ್ಲಿಯ ಸಿ.ಎ ನಿವೇಶನ ಸಂಖ್ಯೆ: ಪಿ.ಎಲ್. 01 ಕ್ಷೇತ್ರದ ಸರಿಸುಮಾರು 5459.10 ಚ.ಮೀ ವಿಸ್ತೀರ್ಣದ ಪ್ರದೇಶವು ವಿವಿನಿಲಯಕ್ಕೆ ಮಂಜೂರಾಗಿದ್ದು, ಬೀದರ್ ಜಿಲ್ಲೆಯ ಸ್ಥಳ ಮಂಜೂರಾತಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳೊಂದಿಗೆ ಪತ್ರ ವ್ಯವಾಹಾರವು ಪ್ರಕ್ರಿಯೆಯಲ್ಲಿದ್ದು, ಶೀಘ್ರವಾಗಿ ಸ್ಥಳ ಮಂಜೂರು ಮಾಡುವುದರ ಬಗ್ಗೆ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಆದುದರಿಂದ ಪ್ರಸ್ತುತ ಮೊದಲ ಹಂತವಾಗಿ ಈ ಮೂರು ಜಿಲ್ಲೆಗಳಲ್ಲಿ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡಗಳನ್ನು ನಿರ್ಮಿಸಲು ಅಂದಾಜಿಸಬಹುದಾದ ವೆಚ್ಚವು ಈ ಕೆಳಕಂಡಂತಿರುತ್ತದೆ.

1. ಯಾದಗಿರಿ ಜಿಲ್ಲೆಯ ಪ್ರಾದೇಶಿಕ ಕೇಂದ್ರ – 1650.00 ಲಕ್ಷಗಳು
2. ಕಲಬುರ್ಗಿ ಜಿಲ್ಲೆಯ ಪ್ರಾದೇಶಿಕ ಕೇಂದ್ರ – 1650.00 ಲಕ್ಷಗಳು
3. ಬೀದರ್ ಜಿಲ್ಲೆಯ ಪ್ರಾದೇಶಿಕ ಕೇಂದ್ರ – 1650.00 ಲಕ್ಷಗಳು

ಈ ಸಂಬಂಧ ಯಾದಗಿರಿ, ಕಲಬುರ್ಗಿ, ಬೀದರ್ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಕಟ್ಟಡಗಳನ್ನು ನಿರ್ಮಿಸಲು ಪ್ರತಿ ಜಿಲ್ಲೆಗೆ ಅಂದಾಜಿಸಬಹುದಾದ ಮೊತ್ತ ರೂ. 1650.00 ಲಕ್ಷಗಳಂತೆ ಒಟ್ಟು ಮೂರು ಜಿಲ್ಲೆಗಳಿಗೆ **ರೂ.4950.00** ಲಕ್ಷಗಳು ವೆಚ್ಚವಾಗಬಹುದಾಗಿರುತ್ತದೆ. ಅಂತೆಯೇ ಸದರಿ ಕಾಮಗಾರಿಗಳಿಗೆ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರವರಿಂದ ನಿವೇಶನ/ಜಾಗ/ ಸ್ಥಳಗಳಿಗೆ ಅನುಗುಣವಾಗಿ ನಕ್ಷೆ ಹಾಗೂ ಅಂದಾಜನ್ನು ಸಿದ್ಧಪಡಿಸಿಕೊಂಡು ಇದರ ಅನುಸಾರ ಗುತ್ತಿಗೆದಾರರು ನಿರ್ವಹಿಸುವ ಕಾಮಗಾರಿಯನ್ನು ಹಂತ ಹಂತವಾಗಿ ಗುಣಮಟ್ಟದ ಪರಿವೀಕ್ಷಣೆಗೆ ಸಂಬಂಧಿಸಿದಂತೆ Project Management Consultancy (PMC) ರವರಿಂದ ನಿರ್ವಹಿಸಬೇಕಾಗಿರುತ್ತದೆ.

ಆದುದರಿಂದ ಈ ಎಲ್ಲಾ ಅಂಶಗಳನ್ನು ಸಭೆಯ ಗಮನಕ್ಕೆ ತರಬಯಸುತ್ತಾ, ಸದರಿ ಕಾಮಗಾರಿಗಳನ್ನು ವಿವಿನಿಲಯದ ವತಿಯಿಂದಲೇ ಅಂದಾಜು ಮತ್ತು ನಕ್ಷೆಗಳಿಗೆ ಅನುಮೋದನೆಯನ್ನು ಪಡೆದು, ಆಗತ್ಯಕ್ರಮ ಕೈಗೊಂಡು ಕೆಲಸವನ್ನು ನಿಯಮಾನುಸಾರ ಟೆಂಡರ್ ಮುಖಾಂತರ ನಿರ್ವಹಿಸುವುದರ ಬಗ್ಗೆ ಸದರಿ ವಿಷಯವನ್ನು ಘನ ವ್ಯವಾಸ್ಥಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

*****

ಸದರಿ ವಿಷಯದ ಬಗ್ಗೆ ಶ್ರೀ. ಬಿ.ಜಿ. ಪಾಟೀಲ್‌ರವರು ಮಾತನಾಡಿ ಇತೀಚಿನ ದಿನಗಳಲ್ಲಿ ಕಲಬುರ್ಗಿಯಲ್ಲಿ ಕರಾಮುವಿಯು ರೂ.68 ಲಕ್ಷ ರೂಪಾಯಿಗಳಿಗೆ 30 ವರ್ಷಕ್ಕೆ ಗುತ್ತಿಗೆ ಆಧಾರದ ಮೇಲೆ 2 ಎಕರೆ ಜಾಗವನ್ನು ಪಡೆದಿರುವುದು ಸಮಂಜಸವಾಗಿರುವುದಿಲ್ಲವೆಂದು ಪ್ರತಿಕ್ರಿಯಿಸಿದರು.

ಈ ಸಂಬಂಧ ಮಾನ್ಯ ಕುಲಪತಿಗಳು ಮಾತನಾಡಿ, 2 ವರ್ಷದ ಹಿಂದೆ ನೋಡಿದ ಜಾಗವಾದ 2 ಗುಂಟೆ ಸಮಂಜಸವಾದ ಸ್ಥಳದಲ್ಲಿದ್ದು, ಅದನ್ನು ಹೊರತುಪಡಿಸಿ ಬೇರೆ ಜಾಗವನ್ನು ನೀಡಿರುತ್ತಾರೆ. ಈ ಸಂಬಂಧ ಆಡಿಟ್ ಆಕ್ಷೇಪಣೆಗಳು ಸಹ ಬಂದಿದ್ದು, ಜಾಗ ಖರೀದಿ/ಗುತ್ತಿಗೆ ಆಧಾರದ ಮೇಲೆ ಜಾಗ ತೆಗೆದುಕೊಳ್ಳಲು ಈಗಾಗಲೇ ಹಣ ಪಾವತಿ ಮಾಡಲಾಗಿದ್ದು. ಇದುವರೆವಿಗೂ ಯಾವುದೇ ಕ್ರಮವಹಿಸದೇ ಇರುವ ಬಗ್ಗೆ ಆಡಿಟ್ ಆಕ್ಷೇಪಣೆಗಳು ಬರುತ್ತಿದ್ದರಿಂದ ಈ ಸಂಬಂಧ ಬೇರೆ 2 ಎಕರೆ ಜಾಗವನ್ನು ಈ ಮೇಲ್ಕಂಡ ಮೊತ್ತಕ್ಕೆ 30 ವರ್ಷಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.

ಕುಲಪತಿಗಳು ಕುಲಸಚಿವರು

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರುಗಳಾದ ಶ್ರೀ. ಅಡಗೂರು ಹೆಚ್. ವಿಶ್ವನಾಥ್ ಮತ್ತು ಶ್ರೀ. ಡಿ. ರವಿಶಂಕರ್ ರವರು ಆಕ್ಷೇಪಿಸಿದರು.

ಸದರಿ ವಿಷಯದ ಬಗ್ಗೆ ಮಾನ್ಯ ಶ್ರೀ. ದರ್ಶನಾಪುರ್ ರವರು ಯಾವುದೇ ಹಣ ಇಲ್ಲದೇ ಫ್ರೀ ಯಾಗಿ ಯಾದಗಿರಿ ಜಿಲ್ಲೆಯಲ್ಲಿ 2 ಎಕರೆ ಜಾಗ, ಕಲಬುರ್ಗಿ ವಿಶ್ವವಿದ್ಯಾನಿಲಯದ ಮುಂದಿನ ಗೇಟ್ ಪಕ್ಕದಲ್ಲೇ 1 ಎಕರೆ ಜಾಗ ಮತ್ತು ಬೀದರ್ ನಲ್ಲಿ ಕಲಬುರ್ಗಿ ವಿಶ್ವವಿದ್ಯಾನಿಲಯದ ಪಿ.ಜಿ. ಸೆಂಟರ್ ಬಳಿ 1 ಎಕರೆ ಜಾಗವನ್ನು ಈಗಾಗಲೇ ನೀಡಿರುವುದರಿಂದ ಈ ವಿಷಯವಾಗಿ ಶ್ರೀ. ದರ್ಶನಾಪುರ್ ರವರಿಗೆ ಸನ್ಮಾನ ಮಾಡಬೇಕೆಂದು ಎಲ್ಲಾ ಸದಸ್ಯರು ಸಭೆಗೆ ತಿಳಿಸಿದರು.

ಈ ಸ್ಥಳಗಳಲ್ಲಿ ವಿಶ್ವವಿದ್ಯಾನಿಲಯದ ಕಟ್ಟಡ ನಿರ್ಮಾಣ ಸಂಬಂಧ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ನಿಗಮದಿಂದ ಅನುದಾನವನ್ನು ಪಡೆದು ಕಟ್ಟದ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯ ಪ್ರಾದೇಶಿಕ ಕೇಂದ್ರಗಳ ಸ್ಥಾಪನೆ ಸಂಬಂಧ ಈಗಾಗಲೇ ಉಚಿತವಾಗಿ ಜಾಗವನ್ನು ನೀಡಿರುವ ಸ್ಥಳಗಳಲ್ಲಿ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಲು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ನಿಗಮದಿಂದ ಅನುದಾನ ಮಂಜೂರಾದ ಮೇಲೆ ಕಾಮಗಾರಿಗಳನ್ನು ನಿಯಮಾನುಸಾರ ಟೆಂಡರ್ ಕರೆದು ನಿರ್ವಹಣೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 175.12**

**ವಿಷಯ: ವಿ.ವಿ.ನಿಲಯದ ಮಾನ್ಯ ಕುಲಪತಿಗಳು ವಾಸಿಸಲು ಅಧಿಕೃತ ನಿವಾಸವನ್ನು ನೂತನವಾಗಿ ನಿರ್ಮಿಸುವುದರ ಬಗ್ಗೆ.**

- * -

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 1994ನೇ ಇಸವಿಯಂದು ಸ್ವತಂತ್ರ ವಿವಿನಿಲಯವಾಗಿ ಸ್ಥಾಪನೆಗೊಂಡಿದ್ದು ವಿವಿನಿಲಯವು ತನ್ನದೇ ಆದ ಕಾಯ್ದೆ ಮತ್ತು ಪರಿನಿಯಮಗಳನ್ನು ರಚಿಸಿಕೊಂಡು ಕಾರ್ಯವನ್ನು ನಿರ್ವಹಿಸುತ್ತಿದೆ.

ಕರಾಮುವಿ ನಿಲಯದ 1994ರ ಕಾಯ್ದೆಯನ್ವಯ ಘನತೆವೆತ್ತ ರಾಜ್ಯಪಾಲರು / ಕುಲಾಧಿಪತಿಗಳು ವಿವಿನಿಲಯದ ಉಪಕುಲಪತಿಯವರನ್ನು ನೇಮಕ ಮಾಡಲಿದ್ದು ವಿವಿನಿಲಯದ 1994ರ ಕಾಯ್ದೆಯ ಎರಡನೇ ಅನುಸೂಚಿಯ ಅನುಸಾರ (23ನೇ ಪ್ರಕರಣ) ಮೊದಲನೇ ಪರಿನಿಯಮ 5(i) ರಲ್ಲಿ ತಿಳಿಸಿರುವಂತೆ ವಿವಿನಿಲಯದ ಕುಲಪತಿಯವರು ನಿರ್ಧರಿಸಬಹುದಾದ ವೇತನವನ್ನು ವಿವಿನಿಲಯವು ಉಪಕುಲಪತಿಯವರಿಗೆ ಸಂದಾಯ ಮಾಡತಕ್ಕದ್ದು ಮತ್ತು ಅವರು ತಮ್ಮ ಇಡೀ ಪದಾವಧಿಯಲ್ಲಿ ವಿಶ್ವವಿದ್ಯಾನಿಲಯದ ಕಾರನ್ನು ಉಚಿತವಾಗಿ ಬಳಸಲು ಮತ್ತು ಬಾಡಿಗೆಯನ್ನು ಸಂದಾಯ ಮಾಡದೇ ಸುಸಜ್ಜಿತವಾದ ನಿವಾಸವನ್ನು ಬಳಸಲು ಹಕ್ಕುಳ್ಳವರಾಗತಕ್ಕದ್ದು ಮತ್ತು ಅಂಥ ನಿವಾಸದ ನಿರ್ವಹಣೆಯ ಸಂಬಂಧದಲ್ಲಿ ಉಪಕುಲಪತಿಯವರಿಗೆ ವೈಯಕ್ತಿಕವಾಗಿ ಯಾವುದೇ ವೆಚ್ಚ ತಗಲತಕ್ಕುದಲ್ಲ ಎಂಬುದಾಗಿ ತಿಳಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಕರಾಮುವಿ ನಿಲಯಕ್ಕೆ ಈ ಹಿಂದೆ ನೇಮಕ ಗೊಂಡಿರುವಂತಹ ಎಲ್ಲಾ ಉಪಕುಲಪತಿಗಳಿಗೆ ಸುಸಜ್ಜಿತವಾದ ನಿವಾಸವನ್ನು ಬಾಡಿಗೆಯ ಆಧಾರದ ಮೇಲೆ ಪಡೆದು ಒದಗಿಸಲಾಗುತ್ತಿದ್ದು ಮತ್ತು ಇದರ ಸಂಪೂರ್ಣ ನಿರ್ವಹಣೆಯನ್ನು ವಿವಿನಿಲಯದಿಂದಲೇ ನಿರ್ವಹಿಸಲಾಗುತ್ತಿದೆ. ಮುಂದುವರೆದು ಹೀಗೆ ಪ್ರತಿ ಬಾರಿ ಹೊಸದಾಗಿ ನೇಮಕಗೊಳ್ಳುವಂತಹ ಮಾನ್ಯ ಕುಲಪತಿಗಳಿಗೆ ವಿವಿನಿಲಯದಿಂದ ಸುಸಜ್ಜಿತವಾದ ನಿವಾಸವನ್ನು ಬಾಡಿಗೆರೂಪದಲ್ಲಿ ಒದಗಿಸಲು ವಿವಿನಿಲಯದ ಸಮೀಪವಿರುವ ಬಡಾವಣೆಗಳಲ್ಲಿ ಪರೀಶೀಲಿಸಬೇಕಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಸುಸಜ್ಜಿತ ನಿವಾಸಗಳು ವಿವಿನಿಲಯದ ಸಮೀಪ ಬಾಡಿಗೆಗೆ ಲಭ್ಯವಾಗುವುದು ಸಹ ಕಷ್ಟ ಸಾಧ್ಯವಾಗಿರುತ್ತದೆ.

ಕುಲಪತಿಗಳು ಕುಲಸಚಿವರು

ಈ ಸಂಬಂಧ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (MUDA) ವತಿಯಿಂದ ಮೈಸೂರಿನ ವಿಜಯನಗರದ 4ನೇ ಹಂತದಲ್ಲಿ 15.00 mt x 24.00 mt ಅಳತೆಯ ನಿವೇಶನವನ್ನು (ಸೈಟ್ ನಂ: 831) ವಿವಿನಿಲಯದಿಂದ ಖರೀದಿಸಲಾಗುತ್ತಿದೆ. ಪ್ರಸ್ತುತ ಖರೀದಿಸಲಾಗುತ್ತಿರುವ ನಿವೇಶನಕ್ಕೆ ಅನುಗುಣವಾಗಿ ಸುಸಜ್ಜಿತವಾದ (Lift, Interior, Electric appliances, Furniture's, Utensils ಹಾಗೂ ಇನ್ನಿತರೆ ಕೆಲಸಗಳು/ಉಪಕರಣಗಳು ಒಳಗೊಂಡಂತೆ) ಮೂರು ಅಂತಸ್ತಿನ ಕಟ್ಟಡವನ್ನು ನಿರ್ಮಿಸಲು ಅಂದಾಜು ರೂ. 500.00 ಲಕ್ಷಗಳಾಗಬಹುದೆಂದು ಉದ್ದೇಶೀಸಲಾಗಿರುತ್ತದೆ.

ವಿವಿನಿಲಯವು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (MUDA) ವತಿಯಿಂದ ಖರೀದಿ ಮಾಡಿರುವ ನಿವೇಶನದಲ್ಲಿ ಮಾನ್ಯ ಕುಲಪತಿರವರಿಗೆ ಅಧಿಕೃತ ನಿವಾಸವನ್ನು ನಿರ್ಮಿಸುವ ಕೆಲಸಕ್ಕೆ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರವರಿಂದ ನಿವೇಶನ ಅನುಗುಣವಾಗಿ ನಕ್ಷೆ ಹಾಗೂ ಅಂದಾಜನ್ನು ಸಿದ್ದಪಡಿಸಿಕೊಂಡು ಇದರ ಅನುಸಾರ ಗುತ್ತಿಗೆದಾರರು ನಿರ್ವಹಿಸುವ ಕಾಮಗಾರಿಯನ್ನು ಹಂತ ಹಂತವಾಗಿ ಗುಣಮಟ್ಟದ ಪರಿವೀಕ್ಷಣೆಗೆ ಸಂಬಂಧಿಸಿದಂತೆ Project Management Consultancy (PMC) ರವರಿಂದ ನಿರ್ವಹಿಸಬೇಕಾಗಿರುತ್ತದೆ.

ಆದುದರಿಂದ ಈ ಎಲ್ಲಾ ಅಂಶಗಳನ್ನು ಸಭೆಯ ಗಮನಕ್ಕೆ ತರಬಯಸುತ್ತಾ, ಸದರಿ ಕಾಮಗಾರಿಯನ್ನು ವಿವಿನಿಲಯದ ವತಿಯಿಂದಲೇ ಅಂದಾಜು ಮತ್ತು ನಕ್ಷೆಗಳಿಗೆ ಅನುಮೋದನೆಯನ್ನು ಪಡೆದು, ಆಗತ್ಯಕ್ರಮ ಕೈಗೊಂಡು ಕೆಲಸವನ್ನು ನಿಯಮಾನುಸಾರ ಟೆಂಡರ್ ಮುಖಾಂತರ ನಿರ್ವಹಿಸುವುದರ ಬಗ್ಗೆ ಸದರಿ ವಿಷಯವನ್ನು ಘನ ವ್ಯವಾಸ್ಥಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

*****

ಮಾನ್ಯ ಕುಲಪತಿಗಳಿಗೆ ವಿವಿನಿಲಯದಿಂದ ಸುಸಜ್ಜಿತವಾದ ನಿವಾಸವನ್ನು ಬಾಡಿಗೆ ರೂಪದಲ್ಲಿ ಒದಗಿಸಲು ವಿವಿನಿಲಯದ ಸಮೀಪವಿರುವ ಬಡಾವಣೆಗಳಲ್ಲಿ ಪರೀಶೀಲಿಸಿ, ಈ ಸಂಬಂಧ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (MUDA) ವತಿಯಿಂದ ಮೈಸೂರಿನ ವಿಜಯನಗರದ 4ನೇ ಹಂತದಲ್ಲಿ 15.00 mt x 24.00 mt ಅಳತೆಯ ನಿವೇಶನವನ್ನು (ಸೈಟ್‌ನಂ: 831) ವಿವಿನಿಲಯದಿಂದ ಖರೀದಿಸಲಾಗುತ್ತಿದೆ. ಪ್ರಸ್ತುತ ಖರೀದಿಸಲಾಗುತ್ತಿರುವ ನಿವೇಶನಕ್ಕೆ ಅನುಗುಣವಾಗಿ ಸುಸಜ್ಜಿತವಾದ (Lift, Interior, Electric appliances, Furniture's, Utensils ಹಾಗೂ ಇನ್ನಿತರೆ ಕೆಲಸಗಳು/ಉಪಕರಣಗಳು ಒಳಗೊಂಡಂತೆ) ಮೂರು ಅಂತಸ್ತಿನ ಕಟ್ಟಡವನ್ನು ನಿರ್ಮಿಸಲು ಅಂದಾಜು ರೂ. 500.00 ಲಕ್ಷಗಳಾಗಬಹುದೆಂದು ಉದ್ದೇಶೀಸಲಾಗಿರುತ್ತದೆಂದು ತಿಳಿಸಿರುತ್ತೀರಿ. ಆದರೆ ನಿರ್ಮಾಣ ವೆಚ್ಚದಲ್ಲಿ ಕಡಿಮೆ ಮಾಡಿಕೊಳ್ಳವುದು ಉತ್ತಮ ಎಂದು ಅಭಿಪ್ರಾಯಿಸಲಾಗಿದೆ ಎಂದು ಸದಸ್ಯರು ತಿಳಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಈಗಾಗಲೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (MUDA) ವತಿಯಿಂದ ಮೈಸೂರಿನ ವಿಜಯನಗರದ 4ನೇ ಹಂತದಲ್ಲಿ 15.00 mt x 24.00 mt ಅಳತೆಯ ನಿವೇಶನವನ್ನು (ಸೈಟ್ ನಂ: 831) ವಿವಿನಿಲಯದಿಂದ ಖರೀದಿಸಲಾಗಿದ್ದು, ನೂತನವಾಗಿ ಕಟ್ಟಡ ನಿರ್ಮಿಸುವುದರ ಸಂಬಂಧ ನಿಯಮಾನುಸಾರ ಟೆಂಡರ್ ಕರೆಯಲು ಅನುಮೋದಿಸಿತು. ಸದರಿ ಕೆಲಸಕ್ಕೆ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರಿಂದ ಹಾಗೂ Project Management Consultancy (PMC) ರವರಿಂದ ನಕ್ಷೆ ಹಾಗೂ ವಿನ್ಯಾಸವನ್ನು ಪಡೆಯಲು GEM/KPPP ಮುಖಾಂತರ ನಿಯಮನುಸಾರ ಟೆಂಡರ್ ಕರೆದು ಕಾರ್ಯ ನಿರ್ವಹಣೆ ಮಾಡಲು ಸಭೆಯು ತೀರ್ಮಾನಿಸಲಾಯಿತು.**

#####

<u>ವಿಷಯ ಸಂಖ್ಯೆ: 175.13</u>

ವಿಷಯ: ಕಲ್ಯಾಣ ಕರ್ನಾಟಕ ಭಾಗದಲ್ಲಿನ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಕಟ್ಟಡಗಳ ನಿರ್ಮಾಣ ಹಾಗೂ ವಿವಿನಿಲಯವು ಕೈಗೊಳ್ಳಲು ಉದ್ದೇಶಿಸಬಹುದಾದ ವಿವಿಧ ಕಾಮಗಾರಿಗಳಿಗೆ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರನ್ನು ನೇಮಿಸಿಕೊಳ್ಳುವ ಬಗ್ಗೆ.

*****

ಕುಲಪತಿಗಳು ಕುಲಸಚಿವರು

ಕಲ್ಯಾಣ ಕರ್ನಾಟಕ ಭಾಗದಲ್ಲಿನ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಕಟ್ಟಡಗಳು, ಮಾನ್ಯ ಕುಲಪತಿಯವರು ಅಧಿಕೃತ ನಿವಾಸ, ವಿವಿನಿಲಯದ ಆವರಣದಲ್ಲಿರುವ ಗ್ರಂಥಾಲಯ, ಅತಿಥಿಗೃಹ, ವಿಜ್ಞಾನ ಭವನ ಕಟ್ಟಡಗಳ ಮೇಲ್ಭಾಗದಲ್ಲಿ ಹೆಚ್ಚುವರಿ ಕಟ್ಟಡಗಳು, Student Alumini Association ಕಟ್ಟಡ, ಹಾಗು ರಾಜ್ಯದ ಇತರೆ ಜಿಲ್ಲೆಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಲಭ್ಯವಿರುವ ಜಾಗದಲ್ಲಿ ಪ್ರಾದೇಶಿಕ ಕೇಂದ್ರ / ವಿದ್ಯಾರ್ಥಿಗಳ ಕಲಿಕಾ ಸಲಹಾ ಕೇಂದ್ರ ಕಟ್ಟಡಗಳು (Regional Center/Student Learning Support Center) ಹಾಗೂ ವಿವಿನಿಲಯದಲ್ಲಿ ಇತರೆ ಕಾಮಗಾರಿಗಳನ್ನು ಕೈಗೊಳ್ಳುವ ಉದ್ದೇಶದಿಂದ ವಿವಿನಿಲಯಕ್ಕೆ ಎರಡು ವರ್ಷಗಳ ಅವಧಿಗೆ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರನ್ನು (Architectural consultancy and services for construction of Buildings and other related works) ನಿಯಮನುಸಾರ ಟೆಂಡರ್ ಕರೆದು GEM/KPPP ಮುಖಾಂತರ ನೇಮಿಸಿಕೊಳ್ಳುವುದರ ಸಂಬಂಧದ ವಿಷಯವನ್ನು ಘನ ವ್ಯವಾಸ್ಥಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

*****

ಸದರಿ ವಿಷಯದ ಬಗ್ಗೆ ಮಾನ್ಯ ಶ್ರೀ.ಅಡಗೂರು ಹೆಚ್. ವಿಶ್ವನಾಥ್‌ರವರು ಮಾತನಾಡಿ ಕಾಮಗಾರಿಗಳಿಗೆ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರನ್ನು (Architectural consultancy and services for construction of Buildings and other related works) ನಿಯಮನುಸಾರ ಟೆಂಡರ್ ಕರೆದು GEM/KPPP ಮುಖಾಂತರ ನೇಮಿಸಿಕೊಳ್ಳುವುದರ ಬದಲು PWDನಲ್ಲಿ ಇಂಜಿನಿಯರ್‌ಗಳ ಸೇವೆಯನ್ನು ಬಳಸಿಕೊಂಡು ಅವರುಗಳ ಮುಖಾಂತರ ಮಾಡಿಸುವುದು ಸೂಕ್ತವೆಂದು ಅಭಿಪ್ರಾಯಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕಲ್ಯಾಣ ಕರ್ನಾಟಕ ಭಾಗದಲ್ಲಿನ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಕಟ್ಟಡಗಳ ನಿರ್ಮಾಣ ಹಾಗೂ ವಿವಿನಿಲಯವು ಕೈಗೊಳ್ಳಲು ಉದ್ದೇಶಿಸಬಹುದಾದ ವಿವಿಧ ಕಾಮಗಾರಿಗಳಿಗೆ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರನ್ನು (Architectural consultancy and services for construction of Buildings and other related works) GEM/KPPP ಮುಖಾಂತರ ನಿಯಮನುಸಾರ ಟೆಂಡರ್ ಕರೆದು ಕಾರ್ಯ ನಿರ್ವಹಣೆ ಮಾಡಲು ಸಭೆಯು ತೀರ್ಮಾನಿಸಲಾಯಿತು.**

#####

<u>ವಿಷಯ ಸಂಖ್ಯೆ: 175.14</u>

**ವಿಷಯ: ವಿ.ವಿ.ನಿಲಯದ ಘಟಿಕೋತ್ಸವ ಭವನ ಮತ್ತು ಇತರೆ ಸಭಾಂಗಣಗಳನ್ನು ಸರ್ಕಾರದ ವಿವಿಧ ಇಲಾಖೆ ಹಾಗೂ ಸ್ಥಳೀಯ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳ ಕಾರ್ಯಕ್ರಮಗಳಿಗೆ ನೀಡುವುದರ ಬಗ್ಗೆ**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನ ಮುಕ್ತಗಂಗೋತ್ರಿ ಆವರಣದಲ್ಲಿ ಘಟಿಕೋತ್ಸವ ಭವನ, ಕಾವೇರಿ ಸಭಾಂಗಣ, ಗಂಗಾ ಸಭಾಂಗಣ, ನಳ ಸಭಾಂಗಣ, ಅತಿಥಿಗೃಹ, ಪುರುಷರ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳನ್ನು ಒಳಗೊಂಡಂತೆ ವಿವಿಧ ಕಟ್ಟಡಗಳನ್ನು ವಿವಿನಿಲಯದ ಸ್ವಂತ ಹಣದಲ್ಲಿ ಈ ಹಿಂದೆ ನಿರ್ಮಿಸಿದ್ದು, ಸದರಿ ಸಭಾಂಗಣಗಳು/ಕಟ್ಟಡಗಳನ್ನು ವಿವಿನಿಲಯವು ತನ್ನ ಸ್ವಂತ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳುವುದರ ಜೊತೆಗೆ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಇತರೇ ಸಂಸ್ಥೆಗಳಿಗೆ ಶೈಕ್ಷಣಿಕ ಹಾಗೂ ಶೈಕ್ಷಣಿಕೇತರ ಕಾರ್ಯಕ್ರಮಗಳಿಗೆ ಬಾಡಿಗೆಯ ಆಧಾರದ ಮೇಲೆ ನೀಡುತ್ತಿದೆ.

ಕುಲಪತಿಗಳು　　　　　　　　　　　　ಕುಲಸಚಿವರು

ಮುಂದುವರೆದು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆ ಹಾಗೂ ಸ್ಥಳೀಯ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳು ತಮ್ಮ ಇಲಾಖೆ/ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿವಿಧ ಅಧಿಕೃತ ಕಾರ್ಯಕ್ರಮಗಳನ್ನು ನಡೆಸಲು ವಿವಿನಿಲಯದ ಘಟಿಕೋತ್ಸವ ಭವನ ಮತ್ತು ಇತರೇ ಸಭಾಂಗಣಗಳು ಹಾಗೂ ವಿವಿನಿಲಯದ ಅತಿಥಿಗೃಹದ ಕೊಠಡಿಗಳನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ನೀಡುವಂತೆ ಪತ್ರಗಳನ್ನು ಸಲ್ಲಿಸುತ್ತದೆ. ಈ ಸಂಬಂಧ ವಿವಿನಿಲಯದ ವಿವಿಧ ಸಭಾಂಗಣಗಳಿಗೆ ವಿಶ್ವವಿದ್ಯಾನಿಲಯವು ಸದರಿ ಭವನ/ಸಭಾಂಗಣಗಳ ಸಾಮರ್ಥ್ಯದ ಅನುಸಾರ ಬಾಡಿಗೆಯನ್ನು ನಿಗದಿಪಡಿಸಿ ಅಧಿಕೃತ ಆದೇಶವನ್ನು ಹೊರಡಿಸಿರುತ್ತದೆ ಮತ್ತು ಸಂಬಂಧಪಟ್ಟ ಸಭಾಂಗಣಗಳಿಂದ ಬರುವ ಆದಾಯಗಳನ್ನು ವಿವಿನಿಲಯವು ಪ್ರತಿ ಆರ್ಥಿಕ ವರ್ಷಗಳಲ್ಲಿ ಲೆಕ್ಕ ತಪಾಸಣೆಗೆ ಒಳಪಡಿಸಿ ಇದರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತಿದೆ.

ಆದ್ದರಿಂದ ಕೇಂದ್ರ/ರಾಜ್ಯ ಸರ್ಕಾರದ ವಿವಿಧ ಇಲಾಖೆ ಹಾಗೂ ಸ್ಥಳೀಯ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳು ತಮ್ಮ ಇಲಾಖೆ/ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿವಿಧ ಅಧಿಕೃತ ಕಾರ್ಯಕ್ರಮಗಳನ್ನು ನಡೆಸಲು ಘಟಿಕೋತ್ಸವ ಭವನ ಮತ್ತು ಇತರೇ ಸಭಾಂಗಣಗಳನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ನೀಡುವಂತೆ ಪತ್ರಗಳನ್ನು ಸಲ್ಲಿಸಿದ್ದಲ್ಲಿ ಸದರಿ ಇಲಾಖೆಗಳು ಕೋರಿರುವ ಸಭಾಂಗಣ/ಭವನಗಳನ್ನು ಸಂಬಂಧಪಟ್ಟವರಿಗೆ ನೀಡುವುದರ ಬಗ್ಗೆ ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಸದರಿ ವಿಷಯವನ್ನು ವಿವಿನಿಲಯದ ಘನ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಾಯಕ್ಕಾಗಿ ಮಂಡಿಸಿದೆ.

*****

ಮಾನ್ಯ ಕುಲಸಚಿವರು ಮಾತನಾಡಿ ವಿ.ವಿ.ನಿಲಯದ ಘಟಿಕೋತ್ಸವ ಭವನ ಮತ್ತು ಇತರೆ ಸಭಾಂಗಣಗಳನ್ನು ಸರ್ಕಾರದ ವಿವಿಧ ಇಲಾಖೆ ಹಾಗೂ ಸ್ಥಳೀಯ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳ ಕಾರ್ಯಕ್ರಮಗಳಿಗೆ ನೀಡುವುದರ ಜೊತೆಗೆ ಇತರೇ ಸಂಸ್ಥೆಗಳಿಗೆ ಶೈಕ್ಷಣಿಕ ಹಾಗೂ ಶೈಕ್ಷಣಿಕೇತರ ಕಾರ್ಯಕ್ರಮಗಳಿಗೆ ಬಾಡಿಗೆಯ ಆಧಾರದ ಮೇಲೆ ನೀಡುತ್ತಿದ್ದು, ಇದರಲ್ಲಿ ಸರ್ಕಾರಿ ಸಂಸ್ಥೆಗಳಿಗೆ ಶೇ.50 ರಿಯಾಯಿತಿ ದರದಲ್ಲಿ ಮತ್ತು ಅರೆ ಸರ್ಕಾರಿ ಸಂಸ್ಥಗಳಿಗೆ ಶೇ.25 ರಿಯಾಯಿತಿ ದರದಲ್ಲಿ ನೀಡುವ ಸಂಬಂಧ ಸಭೆಗೆ ವಿವರಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿ.ವಿ.ನಿಲಯದ ಘಟಿಕೋತ್ಸವ ಭವನ ಮತ್ತು ಇತರೆ ಸಭಾಂಗಣಗಳನ್ನು ಸರ್ಕಾರದ ವಿವಿಧ ಇಲಾಖೆ ಹಾಗೂ ಸ್ಥಳೀಯ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳ ಕಾರ್ಯಕ್ರಮಗಳಿಗೆ ನೀಡುವುದರ ಜೊತೆಗೆ ಇತರೇ ಸಂಸ್ಥೆಗಳಿಗೆ ಶೈಕ್ಷಣಿಕ ಹಾಗೂ ಶೈಕ್ಷಣಿಕೇತರ ಕಾರ್ಯಕ್ರಮಗಳಿಗೆ ಬಾಡಿಗೆಯ ಆಧಾರದ ಮೇಲೆ ನೀಡುತ್ತಿದ್ದು, ಇದರಲ್ಲಿ ಸರ್ಕಾರಿ ಸಂಸ್ಥೆಗಳಿಗೆ ಶೇ.50 ರಿಯಾಯಿತಿ ದರದಲ್ಲಿ ಮತ್ತು ಅರೆ ಸರ್ಕಾರಿ ಸಂಸ್ಥಗಳಿಗೆ ಶೇ.25 ರಿಯಾಯಿತಿ ದರದಲ್ಲಿ ನೀಡುವುದು. ಕರಾಮುವಿಯ ಸಹಭಾಗಿತ್ವ ಸಂಸ್ಥೆಗಳ ಕಾರ್ಯಕ್ರಮಗಳಿಗೆ ಪೂರ್ಣ ರಿಯಾಯಿತಿ ದರದಲ್ಲಿ ಮತ್ತು ಖಾಸಗಿಯವರಿಗೆ ಪೂರ್ಣ ಪ್ರಮಾಣದ ಬಾಡಿಗೆಯನ್ನು ಪಡೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 175.15**

**ವಿಷಯ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ವಿ.ವಿ.ನಿಲಯಕ್ಕೆ ಮಾನ್ಯ ಕುಲಪತಿಗಳ ಅಧಿಕೃತ ನಿವಾಸವನ್ನು ನಿರ್ಮಿಸಲು ಮಂಜೂರು ಮಾಡಲಾಗಿರುವ ಸಿ.ಎ. ನಿವೇಶನದ ಹುಂಡಿಯ ಮೊತ್ತವನ್ನು ಪಾವತಿಸಿರುವ ಬಗ್ಗೆ ಅನುಸಮರ್ಥನೆಯನ್ನು ಕೋರಿ.**

– * –

ಕರಾಮುವಿ ನಿಲಯದ ಮಾನ್ಯ ಕುಲಪತಿಗಳು ವಾಸಿಸಲು ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಥವಾ ಹೊರಭಾಗದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ಯಾವುದೇ ಅಧಿಕೃತ ನಿವಾಸವಿಲ್ಲದೇ, ಇರುವುದರಿಂದ

ಕುಲಪತಿಗಳು ಕುಲಸಚಿವರು

ಮಾನ್ಯ ಕುಲಪತಿಗಳಿಗೆ ಮೈಸೂರು ನಗರದಲ್ಲಿ ಬಾಡಿಗೆಗೆ ನಿವಾಸವನ್ನು ಪಡೆದು ಒದಗಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ ಮಾನ್ಯ ಕುಲಪತಿಗಳಿಗೆ ವಾಸಿಸಲು ಅಗತ್ಯವಿರುವ ಅಧಿಕೃತ ನಿವಾಸವನ್ನು ವಿಶ್ವವಿದ್ಯಾನಿಲಯದಿಂದ ನಿರ್ಮಿಸುವ ಸಲುವಾಗಿ ಸೂಕ್ತ ನಿವೇಶನವನ್ನು ವಿವಿನಿಲಯಕ್ಕೆ ಸಮೀಪವಿರುವ ಪ್ರದೇಶದಲ್ಲಿ ಮಂಜೂರು ಮಾಡಿಕೊಡುವಂತೆ ಕೋರಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರಿಗೆ ದಿನಾಂಕ: 26-12-2022 ರಂದು ವಿ.ವಿ.ನಿಲಯದಿಂದ ಪತ್ರ ಬರೆದು ಕೋರಲಾಗಿತ್ತು.

ವಿ.ವಿ.ನಿಲಯವು ನೀಡಿರುವ ಮನವಿ ಪತ್ರದ ಆಧಾರದ ಮೇಲೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಅಲ್ಲಿನ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ದಿನಾಂಕ: 07-01-2023 ರಂದು ಚರ್ಚಿಸಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಮೈಸೂರಿನ ವಿಜಯನಗರ 4ನೇ ಹಂತ 2ನೇ ಫೇಸ್ ರಲ್ಲಿ ನಿವೇಶನ ಸಂಖ್ಯೆ 831 ರಲ್ಲಿನ 15x24 ಮೀಟರ್ ಅಳತೆಯ ಒಂದು ನಿವೇಶನವನ್ನು ಪ್ರಸ್ತುತ ಹರಾಜು ದರದಲ್ಲಿ ಮಂಜೂರು ಮಾಡಿ ಸದರಿ ನಿವೇಶನಕ್ಕೆ ಸಂಬಂಧಿಸಿದ ಒಟ್ಟು ಶುಲ್ಕ ರೂ. 2,34,19,080/-ಗಳನ್ನು ಪಾವತಿಸುವಂತೆ ತಿಳಿಸಿ ಮಂಜೂರಾತಿ ಪತ್ರವನ್ನು ನೀಡಿರುತ್ತಾರೆ.

ಈ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಸೂಕ್ತ ನಿವೇಶನವನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಮಂಜೂರು ಮಾಡಿದ್ದು, ಸಂಬಂಧಪಟ್ಟ ನಿವೇಶನದ ಒಟ್ಟು ಶುಲ್ಕ ರೂ. 2,34,19,080/-ಗಳನ್ನು ತುರ್ತಾಗಿ ಪಾವತಿಸಬೇಕಾಗಿದ್ದ ಹಿನ್ನಲೆಯಲ್ಲಿ ಸದರಿ ಮೊತ್ತವನ್ನು ವಿವಿನಿಲಯದ ಘನ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಕಾಯ್ದಿರಿಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಈಗಾಗಲೇ ಪಾವತಿಸಿರುವುದರಿಂದ ಸದರಿ ವಿಷಯವನ್ನು ಘನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಸಮರ್ಥನೆಯನ್ನು ಕೋರಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

ಸದರಿ ವಿಷಯದ ಬಗ್ಗೆ ಮಾನ್ಯ ಶ್ರೀ.ಅಡಗೂರು ಹೆಚ್. ವಿಶ್ವನಾಥ್‌ರವರು ಮಾತನಾಡಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಮೈಸೂರಿನ ವಿಜಯನಗರ 4ನೇ ಹಂತ 2ನೇ ಫೇಸ್ ರಲ್ಲಿ ನಿವೇಶನ ಸಂಖ್ಯೆ 831 ರಲ್ಲಿನ 15x24 ಮೀಟರ್ ಅಳತೆಯ ಒಂದು ನಿವೇಶನವನ್ನು ಪ್ರಸ್ತುತ ಹರಾಜು ದರದಲ್ಲಿ ಮಂಜೂರು ಮಾಡಿ ಸದರಿ ನಿವೇಶನಕ್ಕೆ ಸಂಬಂಧಿಸಿದ ಒಟ್ಟು ಶುಲ್ಕ ರೂ. 2,34,19,080/-ಗಳನ್ನು ಪಾವತಿಸುವಂತೆ ತಿಳಿಸಿದ್ದು,ಅದನ್ನು ಪಾವತಿಸಲಾಗಿದೆ.ಸರ್ಕಾರದ ಸಂಸ್ಥೆಗಳಿಗೆ ಅನಾವಶ್ಯಕವಾಗಿ ಇಷ್ಟು ಹಣವನ್ನು ಪಾವತಿಸಿರುವುದು ಸೂಕ್ತವಲ್ಲ. ಸರ್ಕಾರಿ ಸಂಸ್ಥೆಗಳಿಗೆ ಕಡಿಮೆ ದರದಲ್ಲಿ ನಿವೇಶವನ್ನು ನೀಡಬೇಕು.ಸರ್ಕಾರಿ ಸಂಸ್ಥೆಯಿಂದಲೇ ಇಷ್ಟೊಂದು ಹಣವನ್ನು ಪಾವತಿಸಿಕೊಂಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಈಗಾಗಲೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಮೈಸೂರಿನ ವಿಜಯನಗರ 4ನೇ ಹಂತ 2ನೇ ಫೇಸ್‌ರಲ್ಲಿ ನಿವೇಶನ ಸಂಖ್ಯೆ 831 ರಲ್ಲಿನ 15x24 ಮೀಟರ್ ಅಳತೆಯ ಒಂದು ನಿವೇಶನವನ್ನು ಪ್ರಸ್ತುತ ಹರಾಜು ದರದಲ್ಲಿ ಮಂಜೂರು ಮಾಡಿ ಸದರಿ ನಿವೇಶನಕ್ಕೆ ಸಂಬಂಧಿಸಿದ ಒಟ್ಟು ಶುಲ್ಕ ರೂ.2,34,19,080/-ಗಳನ್ನು ಪ್ರಾಧಿಕಾರಕ್ಕೆ ಈಗಾಗಲೇ ಪಾವತಿಸಿರುವುದನ್ನು ಸಭೆಯು ಅನುಸಮರ್ಥಿಸಿತು.**

#####

**ವಿಷಯ ಸಂಖ್ಯೆ: 175.16**

**ವಿಷಯ: ಕ.ರಾ.ಮು.ವಿ.ಯ ಪರೀಕ್ಷೆಗೆ ಸಂಬಂಧಿಸಿದಂತೆ ಚಾಮರಾಜನಗರ ಪ್ರಾದೇಶಿಕ ಕೇಂದ್ರದಲ್ಲಿ ನಡೆದಿರುವ ಪರೀಕ್ಷಾ ಕೇಂದ್ರದಿಂದ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಬಗ್ಗೆ ಪರಿಶೀಲನಾ ತಂಡವು ಪರಿಶೀಲಿಸಿ ನೀಡಿರುವ ವರದಿಯನ್ನು ಪರಿಶೀಲಿಸಿ, ಚರ್ಚಿಸಿ ಮತ್ತು ತೀರ್ಮಾನಿಸುವ ಬಗ್ಗೆ.**

– * –

ಕುಲಪತಿಗಳು ಕುಲಸಚಿವರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬಿ.ಕಾಂ. ತೃತೀಯ ವರ್ಷದ Computer in Business ವಿಷಯದ ಪರೀಕ್ಷೆಗೆ ಸಂಬಂಧಿಸಿದಂತೆ ಚಾಮರಾಜನಗರ ಪ್ರಾದೇಶಿಕ ಕೇಂದ್ರದ ಪರೀಕ್ಷಾ ಕೇಂದ್ರದಿಂದ ಪ್ರಶ್ನೆಪತ್ರಿಕೆ ಸೋರಿಕೆಯಾಗಿ ವಿವಿಧ ಮಾಧ್ಯಮಗಳಲ್ಲಿ ಪ್ರಸಾರವಾಗಿರುವ ಹಿನ್ನೆಲೆಯಲ್ಲಿ, ಪ್ರಕರಣವನ್ನು ವಿಶ್ವವಿದ್ಯಾನಿಲಯವು ಗಂಭೀರವಾಗಿ ಪರಿಗಣಿಸಿ, ಈ ವಿಚಾರವಾಗಿ ಸತ್ಯಾಸತ್ಯತೆಯನ್ನು ತಿಳಿಯಲು ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು. ಈಗಾಗಲೇ ಸಮಿತಿಯು ಪರಿಶೀಲನಾ ವರದಿಯನ್ನು ಕುಲಸಚಿವರಿಗೆ ಸಲ್ಲಿಸಿದ್ದು, ಸದರಿ ವರದಿಯನ್ನೇ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳ ಅವಗಾಹನೆಗೆ, ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

*****

ಕುಲಸಚಿವರು ಮಾತನಾಡಿ ಬಿ.ಕಾಂ. ತೃತೀಯ ವರ್ಷದ Computer in Business ವಿಷಯದ ಪರೀಕ್ಷೆಗೆ ಚಾಮರಾಜನಗರ ಪ್ರಾದೇಶಿಕ ಕೇಂದ್ರದ ಪರೀಕ್ಷಾ ಕೇಂದ್ರದಿಂದ ಪ್ರಶ್ನೆಪತ್ರಿಕೆ ಸೋರಿಕೆಯಾಗಿ ವಿವಿಧ ಮಾಧ್ಯಮಗಳಲ್ಲಿ ಪ್ರಸಾರವಾಗಿರುವ ಹಿನ್ನೆಲೆಯಲ್ಲಿ, ಪ್ರಕರಣವನ್ನು ವಿಶ್ವವಿದ್ಯಾನಿಲಯವು ಗಂಭೀರವಾಗಿ ಪರಿಗಣಿಸಿ, ಈ ವಿಚಾರವಾಗಿ ಸತ್ಯಾಸತ್ಯತೆಯನ್ನು ತಿಳಿಯಲು ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು. ಈಗಾಗಲೇ ಸಮಿತಿಯು ಪರಿಶೀಲನಾ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯು ಮುಚ್ಚಿದ ಲಕೋಟೆಯಲ್ಲಿದ್ದು, ಅದನ್ನು ಸಭೆಯ ಸಮ್ಮುಖದಲ್ಲಿ ತೆರೆದು ವಿವರಿಸಿದರು. ಇದಕ್ಕೆ ಸಂಬಂಧಪಟ್ಟಂತೆ ಕೆಲವು ತಾತ್ಕಾಲಿಕ ನೌಕರರುಗಳಿಗೆ FIR ಆಗಿದ್ದು, ಅಲ್ಲಿನ ಗಂಭೀರ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಆ ಪ್ರಾದೇಶಿಕ ಕೇಂದ್ರದ ಪ್ರಾದೇಶಿಕ ನಿರ್ದೇಶಕರನ್ನು ಮೈಸೂರಿಗೆ ವರ್ಗಾಯಿಸಿಕೊಳ್ಳಲಾಗುವುದು ಎಂದು ತಿಳಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಷಯಕ್ಕೆ ಬರುವಂತಹ ಕೆಟ್ಟ ಹೆಸರು ಪ್ರವೇಶಾತಿ ಪ್ರಕ್ರಿಯೆಯ ಮೇಲೂ ಪರಿಣಾಮ ಬೀರುವುದನ್ನು ಮನಗಂಡು, ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುವುದು ಕುಲಸಚಿವರು (ಪರೀಕ್ಷಾಂಗ)ರವರ ಕರ್ತವ್ಯವಾಗಿರುತ್ತದೆ. ಇನ್ನು ಮುಂದೆ ಈ ರೀತಿ ಆದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಆಯಾ ಪ್ರದೇಶವಾರು ಇರತಕ್ಕ ಪ್ರಾದೇಶಿಕ ನಿರ್ದೇಶಕರುಗಳನ್ನೂ ಸಹ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 175.17**

**ವಿಷಯ: ಕ.ರಾ.ಮು.ವಿ.ಯ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಚಿತ್ರದುರ್ಗ, ದಾವಣಗೆರೆ ಮತ್ತು ಬಳ್ಳಾರಿ ಪರೀಕ್ಷಾ ಕೇಂದ್ರಗಳಲ್ಲಿ ನಡೆದಿದೆ ಎನ್ನಲಾದ ಪರೀಕ್ಷಾ ಅಕ್ರಮಗಳ ಬಗ್ಗೆ ಪರಿಶೀಲನಾ ತಂಡವು ಪರಿಶೀಲಿಸಿ ನೀಡಿರುವ ವರದಿಯನ್ನು ಪರಿಶೀಲಿಸಿ, ಚರ್ಚಿಸಿ ಮತ್ತು ತೀರ್ಮಾನಿಸುವ ಬಗ್ಗೆ.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಚಿತ್ರದುರ್ಗ, ದಾವಣಗೆರೆ ಮತ್ತು ಬಳ್ಳಾರಿ ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮ ನಡೆದಿದೆ ಎನ್ನಲಾದ ಘಟನೆಗಳು ದೃಶ್ಯ ಹಾಗೂ ಶ್ರವ್ಯ ಮಾಧ್ಯಮಗಳಲ್ಲಿ ಪ್ರಕಟವಾಗಿದ್ದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾನಿಲಯವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ,

ಈ ವಿಚಾರವಾಗಿ ಸತ್ಯಾಸತ್ಯತೆಯನ್ನು ತಿಳಿಯಲು ಪರಿಶೀಲನಾ ಸಮಿತಿಯನ್ನು ರಚಿಸಿರುತ್ತದೆ. ಸದರಿ ಸಮಿತಿಯು ಈಗಾಗಲೇ ಪರಿಶೀಲನಾ ವರದಿಯನ್ನು ಕುಲಸಚಿವರಿಗೆ ಸಲ್ಲಿಸಿದ್ದು, ವರದಿಯನ್ನು ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳ ಅವಗಾಹನೆಗೆ, ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

*****

**ಕುಲಪತಿಗಳು** **ಕುಲಸಚಿವರು**

ಕುಲಸಚಿವರು ಮಾತನಾಡಿ ಕ.ರಾ.ಮು.ವಿ.ಯ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಚಿತ್ರದುರ್ಗ, ದಾವಣಗೆರೆ ಮತ್ತು ಬಳ್ಳಾರಿ ಪರೀಕ್ಷಾ ಕೇಂದ್ರಗಳಲ್ಲಿ ನಡೆದಿದೆ ಎನ್ನಲಾದ ಪರೀಕ್ಷಾ ಅಕ್ರಮಗಳ ಬಗ್ಗೆ ಪರಿಶೀಲನಾ ತಂಡವು ಪರಿಶೀಲಿಸಿ ನೀಡಿರುವ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯು ಮುಚ್ಚಿದ ಲಕೋಟೆಯಲ್ಲಿದ್ದು, ಅದನ್ನು ಸಭೆಯ ಸಮ್ಮುಖದಲ್ಲಿ ತೆರೆಯಲಾಗುವುದೆಂದು ತೆರೆದು ವಿವರಿಸಿದರು. ಈ ಕೇಂದ್ರಗಳಲ್ಲಿ ಇರುವ ಪರೀಕ್ಷಾ ಕೇಂದ್ರಗಳಿಗೆ ಮುಂದಿನ ದಿನಗಳಲ್ಲಿ ಆಗುವ ಅನಾಹುತಗಳಿಗೆ ಆಯಾ ಭಾಗದ ಪ್ರಾದೇಶಿಕ ನಿರ್ದೇಶಕರುಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸಭೆಗೆ ವಿವರಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಷಯಕ್ಕೆ ಬರುವಂತಹ ಕೆಟ್ಟ ಹೆಸರು ಪ್ರವೇಶಾತಿ ಪ್ರಕ್ರಿಯೆಯ ಮೇಲೂ ಪರಿಣಾಮ ಬೀರುವುದನ್ನು ಮನಗಂಡು, ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುವುದು ಕುಲಸಚಿವರು (ಪರೀಕ್ಷಾಂಗ)ರವರ ಕರ್ತವ್ಯವಾಗಿರುತ್ತದೆ. ಇನ್ನು ಮುಂದೆ ಈ ರೀತಿ ಆದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಆಯಾ ಪ್ರದೇಶವಾರು ಇರತಕ್ಕ ಪ್ರಾದೇಶಿಕ ನಿರ್ದೇಶಕರುಗಳನ್ನೂ ಸಹ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 175.18**

**ವಿಷಯ: ಶ್ರೀ ಟಿ. ರವೀಂದ್ರ, ದ್ವಿ.ದ.ಗು, ಇವರು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಸಂಬಂಧ ವೈದ್ಯಕೀಯ ವೆಚ್ಚ ಪಾವತಿಸಿರುವ ಸಲುವಾಗಿ ಅನುಸಮರ್ಥನೆ ಪಡೆಯುವ ಬಗೆಗೆ.**

– * –

ಶ್ರೀ ಟಿ. ರವೀಂದ್ರ, ದ್ವಿ.ದ.ಗು, ಪರೀಕ್ಷಾ ವಿಭಾಗ, ಇವರು ದಿನಾಂಕ: 27–10–2023ರಂದು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು, ಆಸ್ಪತ್ರೆಯಲ್ಲಿ ಹೃದಯ ಸಂಬಂಧ ಒಳ ಮತ್ತು ಹೊರ ರೋಗಿಯಾಗಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಈ ಸಂಬಂಧ ಆಸ್ಪತ್ರೆಯವರು ಒಳ ರೋಗಿಯಾಗಿ ಚಿಕಿತ್ಸೆ ನೀಡಿರುವ ಹುಂಡಿಯ ಮೊತ್ತ ರೂ.1,05,243/–(ಒಂದು ಲಕ್ಷದ ಐದು ಸಾವಿರದ ಇನ್ನೂರ ನಲವತ್ತಮೂರು ರೂಪಾಯಿಗಳು ಮಾತ್ರ)ಗಳನ್ನು ಹಾಗೂ ಹೊರ ರೋಗಿಯಾಗಿ ಚಿಕಿತ್ಸೆ ನೀಡಿರುವ ಹುಂಡಿಯ ಮೊತ್ತ ರೂ. 2,009/– (ಎರಡು ಸಾವಿರದ ಒಂಬತ್ತು ರೂಪಾಯಿಗಳು ಮಾತ್ರ)ಗಳ ಒಟ್ಟಾರೆ ಎರಡು ಹುಂಡಿಯ ಮೊತ್ತ ರೂ. 1.07,252/– (ಒಂದು ಲಕ್ಷದ ಏಳು ಸಾವಿರದ ಇನ್ನೂರ ಐವತ್ತೆರಡು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸುವ ಸಂಬಂಧ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ಅವರ ಅವಲಂಬಿತ ಕುಟುಂಬದವರಿಗೆ KMAR ನಿಯಮ 1963ರ CGHS ದರಗಳನ್ವಯ ನಗದು ರಹಿತ ವೈದ್ಯಕೀಯ ಸೌಲಭ್ಯ ನೀಡುವ ಸಂಬಂಧ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇವರ ಜೊತೆ ಪರಸ್ಪರ ಒಪ್ಪಿಗೆಯ ಮೇರೆಗೆ 01 (ಒಂದು) ವರ್ಷದ ಅವಧಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ (ಸದರಿ ಆದೇಶವು ದಿನಾಂಕ: 16–10–2023ರಿಂದ ಜಾಲ್ತಿಯಲ್ಲಿರುತ್ತದೆ) ಹಾಗೂ ಒಂದು ಹಣಕಾಸಿನ ವರ್ಷದಲ್ಲಿ (Financial Year) ಒಬ್ಬ ನೌಕರನಿಗೆ 01 (ಒಂದು) ಲಕ್ಷ ಮೀರಿದ ಸಂದರ್ಭದಲ್ಲಿ ಹುಂಡಿಯ ಮೊತ್ತವನ್ನು ಪಾವತಿಸಿದ ನಂತರ ಮಾನ್ಯ ವ್ಯವಸ್ಥಾಪನಾ ಮಂಡಳಿಸಭೆಗೆ ಅನುಸಮರ್ಥನೆ ಪಡೆಯುವ ಸಂಬಂಧ ವಿಷಯವನ್ನು ಮಂಡಿಸಲು ಅನುಮೋದನೆ ನೀಡಲಾಗಿದ್ದು, ಈ ಸಂಬಂಧ ಸ್ಥಾಯಿ ಆದೇಶವನ್ನು ದಿನಾಂಕ: 07-11-2023ರಂದು ಹೊರಡಿಸಿರುವ ವಿಷಯವನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ.

ಕುಲಪತಿಗಳು ಕುಲಸಚಿವರು

ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು, ಇವರು ಶ್ರೀ ಟಿ. ರವೀಂದ್ರ, ದ್ವಿ.ದ.ಗು, ಪರೀಕ್ಷಾ ವಿಭಾಗ, ಇವರಿಗೆ ಹೃದಯ ಸಂಬಂಧ ಒಳ ಮತ್ತು ಹೊರ ರೋಗಿಯಾಗಿ ಚಿಕಿತ್ಸೆ ನೀಡಿರುವ ಸಲುವಾಗಿ ಪಾವತಿಗಾಗಿ ಸಲ್ಲಿಸಿರುವ ಎರಡು ಹುಂಡಿಗಳ ಒಟ್ಟಾರೆ ಮೊತ್ತ ರೂ. 1.07,252/– (ಒಂದು ಲಕ್ಷದ ಏಳು ಸಾವಿರದ ಇನ್ನೂರ ಐವತ್ತೆರಡು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಿರುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ಅನುಸಮರ್ಥನೆಗಾಗಿ ವಿಷಯವನ್ನು ಮಂಡಿಸಿದೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ಅವರ ಅವಲಂಬಿತ ಕುಟುಂಬದವರಿಗೆ KMAR ನಿಯಮ 1963ರ CGHS ದರಗಳನ್ವಯ ನಗದು ರಹಿತ ವೈದ್ಯಕೀಯ ಸೌಲಭ್ಯ ನೀಡುವ ಸಂಬಂಧ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇವರ ಜೊತೆ ಪರಸ್ಪರ ಒಪ್ಪಿಗೆಯ ಮೇರೆಗೆ 01 (ಒಂದು) ವರ್ಷದ ಅವಧಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ. (ಸದರಿ ಆದೇಶವು ದಿನಾಂಕ: 16–10–2023ರಿಂದ ಜಾಲ್ತಿಯಲ್ಲಿರುತ್ತದೆ) ಹಾಗೂ ಒಂದು ಹಣಕಾಸಿನ ವರ್ಷದಲ್ಲಿ (Financial Year) ಒಬ್ಬ ನೌಕರನಿಗೆ 01 (ಒಂದು) ಲಕ್ಷ ಮೀರಿದ ಸಂದರ್ಭದಲ್ಲಿ ಹುಂಡಿಯ ಮೊತ್ತವನ್ನು ಪಾವತಿಸಿದ ನಂತರ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ಅನುಸಮರ್ಥನೆ ವಿಷಯವನ್ನು ಮಂಡಿಸಲಾಗಿದೆ ಎಂದು ಕುಲಸಚಿವರು ಸಭೆಗೆ ವಿವರಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ ಟಿ. ರವೀಂದ್ರ, ದ್ವಿ.ದ.ಗು, ಪರೀಕ್ಷಾ ವಿಭಾಗ, ಇವರು ದಿನಾಂಕ: 27–10–2023ರಂದು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು, ಆಸ್ಪತ್ರೆಯಲ್ಲಿ ಹೃದಯ ಸಂಬಂಧ ಒಳ ಮತ್ತು ಹೊರ ರೋಗಿಯಾಗಿ ಚಿಕಿತ್ಸೆಯನ್ನು ಪಡೆದು ಒಟ್ಟಾರೆ ಎರಡು ಹುಂಡಿಯ ಮೊತ್ತ ರೂ. 1.07,252/– (ಒಂದು ಲಕ್ಷದ ಏಳು ಸಾವಿರದ ಇನ್ನೂರ ಐವತ್ತೆರಡು ರೂಪಾಯಿಗಳು ಮಾತ್ರ)ಗಳನ್ನು ಪಾವತಿಲಾಗಿರುವುದರಿಂದ ವ್ಯವಸ್ಥಾಪನಾ ಮಂಡಳಿ ಸಭೆಯು ಅನುಸಮರ್ಥಿಸಿತು.**

#####

**<u>ವಿಷಯ ಸಂಖ್ಯೆ: 175.19</u>**

**ವಿಷಯ: ರಾಜ್ಯದ ವಿಜಯನಗರ ಜಿಲ್ಲೆಯಲ್ಲಿ ಮತ್ತು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ಕ.ರಾ.ಮು.ವಿ.ಯ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಹಾಗೂ ಈಗಾಗಲೇ ಸ್ಥಾಪಿಸಲಾಗಿರುವ ಮಲೈಮಹದೇಶ್ವರ ಬೆಟ್ಟದ ಪ್ರಾದೇಶಿಕ ಕೇಂದ್ರವನ್ನು ಕೊಳ್ಳೆಗಾಲ ಪಟ್ಟಣಕ್ಕೆ ಸ್ಥಳಾಂತರಿಸುವ ಬಗ್ಗೆ.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು "ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ" ಎಂಬ ಧ್ಯೇಯ ವಾಕ್ಯದಂತೆ ಉನ್ನತ ಶಿಕ್ಷಣದಿಂದ ವಂಚಿತರಾದವರಿಗೆ ಹಾಗು ಬಡಮಕ್ಕಳಿಗೆ ದೂರಶಿಕ್ಷಣದ ಮೂಲಕ ಉನ್ನತ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ನೀಡುವ ಸದುದ್ದೇಶದಿಂದ ಈಗಾಗಲೇ 33 ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಅದೇ ಸದುದ್ದೇಶದಿಂದ ಉತ್ತರ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ವಿಜಯನಗರ ಜಿಲ್ಲೆಯಲ್ಲಿ ಹಾಗೂ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ಹೆಚ್ಚಿನ ವಿದ್ಯಾಸಂಸ್ಥೆಗಳಿದ್ದು ಆ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳನ್ನು ನೂತನವಾಗಿ ಪ್ರಾರಂಭಿಸುವ ವಿಚಾರವಾಗಿ ಮತ್ತು ಈಗಾಗಲೇ ಮಲೈಮಹದೇಶ್ವರ ಬೆಟ್ಟದಲ್ಲಿ ಸ್ಥಾಪಿತವಾಗಿರುವ ಪ್ರಾದೇಶಿಕ ಕೇಂದ್ರವನ್ನು ಕೊಳ್ಳೇಗಾಲ ಪಟ್ಟಣಕ್ಕೆ ಸ್ಥಳಾಂತರಿಸುವ ಸಂಬಂಧ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

*****

ಕುಲಪತಿಗಳು　　　　　　　　　　　　　　　　ಕುಲಸಚಿವರು

ಕುಲಸಚಿವರು ಮಾತನಾಡಿ ಕರಾಮುವಿಯ ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಹಾಗೂ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ಹೆಚ್ಚಿನ ವಿದ್ಯಾಸಂಸ್ಥೆಗಳಿದ್ದು ಆ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಿವ ದೃಷ್ಟಿಯಿಂದ ಹಾಗೂ ಈಗಾಗಲೇ ಸ್ಥಾಪಿಸಲಾಗಿರುವ ಮಲೈಮಹದೇಶ್ವರ ಬೆಟ್ಟದ ಪ್ರಾದೇಶಿಕ ಕೇಂದ್ರದಲ್ಲಿ ಪ್ರವೇಶಾತಿಯು ಸಮರ್ಪಕವಾಗಿಲ್ಲದೇ ಇರುವ ಕಾರಣದಿಂದ ಅದನ್ನು ಕೊಳ್ಳೆಗಾಲ ಪಟ್ಟಣಕ್ಕೆ ಸ್ಥಳಾಂತರಿಸುವ ಬಗ್ಗೆ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಗೆ ಮಂಡಿಸಿದೆ ಎಂದು ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು, ರಾಜ್ಯದ ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಮತ್ತು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ಕ.ರಾ.ಮು.ವಿ.ಯ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಮತ್ತು ಮಲೈಮಹದೇಶ್ವರ ಬೆಟ್ಟದ ಪ್ರಾದೇಶಿಕ ಕೇಂದ್ರದಲ್ಲಿ ಪ್ರವೇಶಾತಿಯು ಸಮರ್ಪಕವಾಗಿಲ್ಲದೇ ಇರುವ ಕಾರಣದಿಂದ ಅದನ್ನು ಕೊಳ್ಳೆಗಾಲ ಪಟ್ಟಣಕ್ಕೆ ಸ್ಥಳಾಂತರಿಸುವ ಬಗ್ಗೆ ಸಭೆಯ ಅನುಮೋದಿಸಿತು.**

#####

**ವಿಷಯ ಸಂಖ್ಯೆ: 175.20**

**ವಿಷಯ: Admission to Examination End to End ERP ತಂತ್ರಾಂಶದ ವಾರ್ಷಿಕ ನಿರ್ವಹಣೆಯ ಬಗ್ಗೆ.**

– * –

ವಿಶ್ವವಿದ್ಯಾನಿಲಯದ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಾದ Admission to Examination End to End ERP Software ಅನ್ನು ಮೆ. ಕಿಯೋನಿಕ್ಸ್, ಬೆಂಗಳೂರು ರವರಿಂದ ಒಟ್ಟು ಮೊತ್ತ ರೂ.98,71,859/-(ತೊಂಬತ್ತೆಂಟು ಲಕ್ಷದ ಎಪ್ಪತ್ತೊಂದು ಸಾವಿರದ ಎಂಟುನೂರ ಐವತ್ತೊಂಭತ್ತು ಮಾತ್ರ, ಎಲ್ಲಾ ತೆರಿಗೆ ಸೇರಿದಂತೆ) ಗಳ ದರದಲ್ಲಿ ದಿನಾಂಕ: 30.09.2019 ರಂದು ಕಾರ್ಯಾದೇಶ ನೀಡಿ ಅಭಿವೃದ್ಧಿಪಡಿಸಿ ಅಳವಡಿಸಿಕೊಂಡು, ಸದರಿ ತಂತ್ರಾಂಶದ ವಾರ್ಷಿಕ ನಿರ್ವಹಣೆಯನ್ನು ನಿರ್ವಹಿಸಲು ಮೆ. ಕಿಯೋನಿಕ್ಸ್, ಬೆಂಗಳೂರು ರವರಿಗೆ ರೂ.95,22,080.80/-(ತೊಂಬತ್ತೈದು ಲಕ್ಷದ ಇಪ್ಪತ್ತೆರಡು ಸಾವಿರದ ಎಂಬತ್ತು ರೂಪಾಯಿಗಳು ಎಂಬತ್ತು ಪೈಸೆ ಮಾತ್ರ, ಎಲ್ಲಾ ತೆರಿಗೆ ಸೇರಿದಂತೆ) ಗಳಿಗೆ ದಿನಾಂಕ: 13.01.2023 ರಂದು ಕಾರ್ಯಾದೇಶ ನೀಡಿ ದಿನಾಂಕ: 29.09.2022 ರಿಂದ ಮುಂದಿನ ಒಂದು ವರ್ಷದ ಅವಧಿಗೆ ಅಥವಾ ಅವಧಿ ಪೂರ್ಣಗೊಳ್ಳುವ ಸಮಯದಲ್ಲಿ ನಡೆಯುತ್ತಿರುವ ಪ್ರವೇಶಾತಿ ಹಾಗೂ ಪರೀಕ್ಷಾ ಆವೃತ್ತಿಗಳು ಪೂರ್ಣಗೊಳ್ಳುವವರೆಗೆ ಯಾವದು ನಂತರ ಘಟಿಸುವುದೋ ಅಲ್ಲಿಯವರೆಗೂ ಕಾರ್ಯಾದೇಶ ನೀಡಿ ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ ಹಾಗೂ ಸದರಿ ಕರಾರಿನ ಅವಧಿಯು ಮುಕ್ತಾಯಗೊಂಡಿರುತ್ತದೆ. ಮೆ. ಕಿಯೋನಿಕ್ಸ್, ಬೆಂಗಳೂರು ರವರು Ref: KSEDC/ITC/PPS/321/2022-23 dated: 31.08.2023 ವಿವಿಯ ಕುಲಸಚಿವರಿಗೆ ಪತ್ರ ಸಲ್ಲಿಸಿದ್ದು, ಸದರಿ ಪತ್ರದಲ್ಲಿ The contract (MOU) which was signed to provide admission to examination end to end ERP software operation and annual maintenance successfully completed and submitted the completed data & source code to respective departments. If you wish to continue our services and looking forward, we would like to welcome your renewal of this contract on the same terms ಎಂದು ಸಲ್ಲಿಸಿರುವ ಅಂಶವನ್ನು ಅವಗಾಹನೆಗೆ ತರಲಾಗಿದೆ.

ಕುಲಪತಿಗಳು ಕುಲಸಚಿವರು

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಇ-ಕಛೇರಿ ಸಂಖ್ಯೆ: ಇಡಿ/35/ಇಜಿಓವಿ/2020 ದಿನಾಂಕ: 10.04.2023 ರಲ್ಲಿ Admission, Academic ಹಾಗೂ Examination ಕಾರ್ಯಗಳಿಗೆ UUCMS ತಂತ್ರಾಂಶವನ್ನು ಎಲ್ಲಾ ವಿಶ್ವವಿದಾಲಯಗಳಲ್ಲಿ ಅನುಷ್ಠಾನಗೊಳಿಸುವುದು ಮತ್ತು ಯಾವುದೇ ಹೊಸ software ಗಳನ್ನು ಖರೀದಿಸಬಾರದು ಮತ್ತು ಲೈಸೆನ್ಸ್ ನವೀಕರಣಗೊಳಿಸಬಾರದು ಎಂದು ಆದೇಶಿಸಿರುತ್ತಾರೆ (ಪತ್ರ ಲಗತ್ತಿಸಿದೆ-ANNEXURE-1). ಮುಂದುವರೆದು, ಕುಲಸಚಿವರು, ನಮ್ಮ ವಿಶ್ವವಿದ್ಯಾಲಯ ವರ್ಷದಲ್ಲಿ 2 ಬಾರಿಗೆ ಪ್ರವೇಶ ಪಡೆದಿದ್ದು, ODL Regulation ಪ್ರಕಾರ ಹಾಗೂ ಯು.ಜಿ.ಸಿ. ವೇಳಾಪಟ್ಟಿಯಂತೆ ನಾವು ಪ್ರವೇಶಾತಿ ಮಾಡಬೇಕಾಗಿರುತ್ತದೆ. UUCMS ತಂತ್ರಾಂಶ Customise ಆಗಿರುವುದಿಲ್ಲ. ಆದ್ದರಿಂದ ತಾತ್ಕಾಲಿಕವಾಗಿ ನಾವು GEM ಮುಖಾಂತರ ತಂತ್ರಾಂಶಗಳನ್ನು ಪಡೆಯಲು ಅನುಮೋದನೆ ಕೋರಿರುವುದಕ್ಕೆ ಮಾನ್ಯ ಕುಲಪತಿಗಳು ಅನುಮೋದಿಸಿರುತ್ತಾರೆ.

ನಂತರದಲ್ಲಿ, ವಿವಿಯ ನೋಡೆಲ್ ಅಧಿಕಾರಿ, E-Govenrance (UUCMS) unit, KSOU Mysuru ರವರು ದಿನಾಂಕ:10.11.2023ರಂದು ವಿವಿಯ ಕುಲಸಚಿವರಿಗೆ UUCMS ತಂತ್ರಾಂಶವನ್ನು ವಿವಿಯಲ್ಲಿ ಅನುಷ್ಠಾನಗೊಳಿಸದಿರುವ ಬಗ್ಗೆ ವರದಿ ಪತ್ರ ಸಲ್ಲಿಸಿರುತ್ತಾರೆ. ಸದರಿ ಪತ್ರದಲ್ಲಿ, In KSOU we have admission in two cycles per year & the admission procedure is entirely different from the coneventional University. The customized admission module is not yet fully prepared for deployment as it currently faces a few technical issues. However, "the HED team has urged us to proceed with the implementation of the UUCMS admission module at KSOU. However, if any issues arise during live admission, they assure simultaneous resolution. It's important to note that addressing escalated issues may take time, potentially leading to a temporary suspension of the student admission process. This could cause inconvenience for the students." Also, our students are dispersed globally; reaching out to them for admission process poses a significant challenge leading to a decrease in admission ಎಂದು ಸೂಚಿಸಿರುತ್ತಾರೆ. (ಪತ್ರ ಲಗತ್ತಿಸಿದೆ-ANNEXURE-2).

ಈ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ವಿವಿಯ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಾದ ಸೇವೆಯನ್ನು ಪಡೆಯುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಕುಲಸಚಿವರು ಮಾತನಾಡಿ, ಸದರಿ ವಿಷಯದ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಪ್ರಸ್ತುತ ವಿಶ್ವವಿದ್ಯಾನಿಲಯದ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಾದ Admission to Examination End to End ERP Software ಅನ್ನು ಮೆ. ಕಿಯೋನಿಕ್ಸ್, ಬೆಂಗಳೂರು ರವರಿಂದ ಅಭಿವೃದ್ಧಿ ಪಡಿಸಿಕೊಂಡು ವಾರ್ಷಿಕ ನಿರ್ವಹಣೆಯನ್ನು ನಿರ್ವಹಿಸಲಾಗುತ್ತಿದೆ. ಮುಂದುವರೆದಂತೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಇ-ಕಛೇರಿ ಸಂಖ್ಯೆ: ಇಡಿ/35/ಇಜಿಓವಿ/2020 ದಿನಾಂಕ: 10.04.2023ರಲ್ಲಿ Admission, Academic ಹಾಗೂ Examination ಕಾರ್ಯಗಳಿಗೆ UUCMS ತಂತ್ರಾಂಶವನ್ನು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಅನುಷ್ಠಾನಗೊಳಿಸುವುದು ಮತ್ತು ಯಾವುದೇ ಹೊಸ software

ಕುಲಪತಿಗಳು                                                            ಕುಲಸಚಿವರು

ಗಳನ್ನು ಖರೀದಿಸಬಾರದು ಮತ್ತು ಲೈಸೆನ್ಸ್ ನವೀಕರಣಗೊಳಿಸಬಾರದು ಎಂದು ಆದೇಶಿಸಿರುತ್ತಾರೆ (ಪತ್ರ ಲಗತ್ತಿಸಿದೆ-ANNEXURE-1). ನಮ್ಮ ವಿಶ್ವವಿದ್ಯಾನಿಲಯದಲ್ಲಿ ODL Regulation ಪ್ರಕಾರ ಹಾಗೂ ಯು.ಜಿ.ಸಿ. ವೇಳಾಪಟ್ಟಿಯಂತೆ ನಾವು ಪ್ರವೇಶಾತಿ ಮಾಡಬೇಕಾಗಿದ್ದು, ಈ ಹಿನ್ನಲೆಯಲ್ಲಿ ಟೆಂಡರ್ ಕರೆದು ನಮ್ಮ ವಿಶ್ವವಿದ್ಯಾನಿಲಯಕ್ಕೆ ಅನುಸರಿಸುವ ತಂತ್ರಾಂಶವನ್ನು ವಿವಿಯಲ್ಲಿ ಅನುಷ್ಠಾನಗೊಳಿಸುವುದರಿಂದ ಅನುಕೂಲವಾಗುತ್ತದೆಂದು ಸಭೆಗೆ ವಿವರಿಸಿದರು.

ಮಾನ್ಯ ಸದಸ್ಯರಾದ ಶ್ರೀ. ಅಡಗೂರು ಹೆಚ್. ವಿಶ್ವನಾಥ್ ರವರು ಮಾತನಾಡಿ UUCMS ತಂತ್ರಾಂಶವು ಸರ್ಕಾರದ ವತಿಯಿಂದ ಅಭಿವೃದ್ಧಿಪಡಿಸಿರುವುದರಿಂದ, ಸದರಿ ತಂತ್ರಾಂಶವನ್ನೇ ಉಪಯೋಗಿಸಬಹುದಲ್ಲವೇ ಎಂದು ಅಭಿಪ್ರಾಯಿಸಿದರು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಇ-ಕಛೇರಿ ಸಂಖ್ಯೆ: ಇಡಿ/35/ಇಜಿಒವಿ /2020 ದಿನಾಂಕ: 10.04.2023ರಲ್ಲಿ Admission, Academic ಹಾಗೂ Examination ಕಾರ್ಯಗಳಿಗೆ UUCMS ತಂತ್ರಾಂಶವನ್ನು ಎಲ್ಲಾ ವಿಶ್ವವಿದಾಲಯಗಳಲ್ಲಿ ಅನುಷ್ಠಾನಗೊಳಿಸುವುದು ಮತ್ತು ಯಾವುದೇ ಹೊಸ softwareಗಳನ್ನು ಖರೀದಿಸಬಾರದು ಮತ್ತು ಲೈಸೆನ್ಸ್ ನವೀಕರಣಗೊಳಿಸಬಾರದು ಎಂದು ಆದೇಶಿಸಿರುವುದು ಸರಿಯಷ್ಟೆ. ಆದರೆ, ನಮ್ಮ ವಿಶ್ವವಿದ್ಯಾನಿಲಯದ ಪ್ರವೇಶಾತಿ ಮತ್ತು ಪರೀಕ್ಷಾ ಪ್ರಕ್ರಿಯೆಗಳಿಗೂ ಮತ್ತು ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳ ಪ್ರವೇಶಾತಿ ಮತ್ತು ಪರೀಕ್ಷಾ ಪ್ರಕ್ರಿಯೆಗಳಿಗೂ ವ್ಯತ್ಯಾಸಗಳಿರುತ್ತದೆ. ಕರಾಮುವಿಯಲ್ಲಿ ವರ್ಷದಲ್ಲಿ 2 ಆವೃತ್ತಿಯಲ್ಲಿ ಪ್ರವೇಶಾತಿ ಮತ್ತು ಪರೀಕ್ಷಾ ಕಾರ್ಯಗಳು ನಡೆಯುತ್ತಿದ್ದು, ODL Regulation ಪ್ರಕಾರ ಹಾಗೂ ಯು.ಜಿ.ಸಿ. ನಿಯಮಗಳನ್ವಯ ಕ್ರಮವಹಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಪ್ರವೇಶಾತಿ ಮತ್ತು ಪರೀಕ್ಷಾ ಕಾರ್ಯಕ್ಕೆ UUCMS ತಂತ್ರಾಂಶವು ಅನುಕೂಲವಾಗುತ್ತಿಲ್ಲ ಎಂದು ಕುಲಸಚಿವರು ಸಭೆಗೆ ತಿಳಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, UUCMS ತಂತ್ರಾಂಶವು ಕರಾಮುವಿಯ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳಿಗೆ ಪೂರಕವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಾದ Admission to Examination End to End ERP Softwareನ ವಾರ್ಷಿಕ ನಿರ್ವಹಣೆ, Operational support ಹಾಗೂ Server hosting ಅನ್ನು ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ / GEM Portal ಮೂಲಕ ಟೆಂಡರ್ ಕರೆದು ಮುಂದಿನ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 175.21**

**ವಿಷಯ: ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.**

– * –

ದಿನಾಂಕ: 16.11.2023 ರಂದು ನಡೆದ 62ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿಯನ್ನು ದಿನಾಂಕ: 01.12.2023 ರಂದು ನಡೆಯಲಿರುವ ವ್ಯವಸ್ಥಾಪನಾ ಮಂಡಳಿಯ 175ನೇ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*****

ಕುಲಪತಿಗಳು ಕುಲಸಚಿವರು

ಮಾನ್ಯ ಕುಲಪತಿಗಳು ಮಾತನಾಡಿ ಡೀನ್(ಶೈಕ್ಷಣಿಕ) ರವರು ಸಭೆಯಲ್ಲಿ ಇರುವುದರಿಂದ ವಿವರಗಳನ್ನು ಸಭೆಗೆ ತಿಳಿಸಬೇಕೆಂದು ತಿಳಿಸಿದರು.

ಡೀನ್(ಶೈಕ್ಷಣಿಕ)ರವರು ಮಾತನಾಡಿ ಕರಾಮುವಿಯ ಶೈಕ್ಷಣಿಕ ಮಂಡಳಿಯ 62ನೇ ಸಾಮಾನ್ಯ ಸಭೆಯ ವಿಷಯಗಳನ್ನು ಸಭೆಗೆ ವಿವರಿಸಿದರು.

*****

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು, ಶೈಕ್ಷಣಿಕ ಮಂಡಳಿಯ 62ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಅನುಮೋದಿಸಿತು.**

#####

<u>ವಿಷಯ ಸಂಖ್ಯೆ: 175.22</u>

**ವಿಷಯ: ಡಾ. ಎ.ರಂಗಸ್ವಾಮಿ, ಪ್ರಾಧ್ಯಾಪಕರು (ನಿವೃತ್ತ), ಕನ್ನಡ ಅಧ್ಯಯನ ವಿಭಾಗ, ಕರಾಮುವಿ, ಇವರಿಗೆ ನಿವೃತ್ತಿ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಿರುವ ಕ್ರಮವನ್ನು ಅನುಸಮರ್ಥನೆ ಕೋರಿರುವ ಬಗೆಗೆ.**

– * –

ಡಾ. ಎ. ರಂಗಸ್ವಾಮಿ, ಪ್ರಾಧ್ಯಾಪಕರು (ನಿವೃತ್ತ) ಕನ್ನಡ ಅಧ್ಯಯನ ವಿಭಾಗ, ಕರಾಮುವಿ, ಇವರು ದಿನಾಂಕ :28.07.2023 ರಂದು ವಯೋನಿವೃತ್ತಿ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತಿ ಹೋದಿರುತ್ತಾರೆ ಡಾ.ಎ. ರಂಗಸ್ವಾಮಿ ಪ್ರಾಧ್ಯಾಪಕರು (ನಿವೃತ್ತ), ಕನ್ನಡ ಅಧ್ಯಯನ ವಿಭಾಗ, ಕರಾಮುವಿ, ಇವರಿಗೆ ಸಂಬಂಧಿಸಿದಂತೆ.

ಹಣಕಾಸು ಅಧಿಕಾರಿಗಳು ಸದರಿ ಪ್ರಾಧ್ಯಾಪಕರಿಂದ ವೈಯುಕ್ತಿಕವಾಗಿ 1997–98 ರಿಂದ 2016–17ನೇ ಸಾಲಿನವರೆಗೆ ಆಡಿಟ್ ವರದಿಯಲ್ಲಿ ರೂ.6,04,192/–(ರೂ ಆರು ಲಕ್ಷದ ನಾಲ್ಕು ಸಾವಿರದ ನೂರ ತೊಂಬತ್ತೆರಡು ಮಾತ್ರ)ಗಳನ್ನು ವಸೂಲಿಸ ಬೇಕಾಗಿರುತ್ತದೆ. 2020–21,2021–22 ನೇ ಸಾಲಿನ ಲೆಕ್ಕ ತಪಾಸಣೆ ಬಾಕಿಯಿರುತ್ತದೆ ಎಂದು ತಿಳಿಸಿರುತ್ತಾರೆ.

ಉಪಕುಲಸಚಿವ ಸಿದ್ದಪಾಠ ವಿಭಾಗ, ಇವರು ಸದರಿಯವರ ಸಂಬಂಧಿಸಿದಂತೆ 2003–04 ರಿಂದ 2008–09ನೇ ಸಾಲಿನವರೆಗೂ ರೂ.2,94,52,053/– (ಎರಡು ಕೋಟಿ ತೊಂಬತ್ತನಾಲ್ಕು ಲಕ್ಷದ ಐವತ್ತೆರಡು ಸಾವಿರದ ಐವತ್ಮೂರು ಮಾತ್ರ) ಗಳು ಆಡಿಟ್ ಅಕ್ಷೇಪಣೆಯಾಗಿರುತ್ತದೆ ಎಂದು ಹಣಕಾಸು ಅಧಿಕಾರಿಗಳು ಕಡತದಲ್ಲಿ ದಾಖಲಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

ಕುಲಸಚಿವ (ಪರೀಕ್ಷಾಂಗ) ರವರು ಡಾ. ಎ. ರಂಗಸ್ವಾಮಿ, ಪ್ರಾಧ್ಯಾಪಕರು (ನಿವೃತ್ತ), ರವರು ದಿನಾಂಕ: 23.06.2017 ರಿಂದ 17.11.2018 ಮತ್ತು 06.06.2019 ರಿಂದ 10.10.2019 ರವರೆಗೆ ಎರಡು ಅವಧಿಯಲ್ಲಿ ಕುಲಸಚಿವ (ಪರೀಕ್ಷಾಂಗ) ರಾಗಿ ಕರ್ತವ್ಯ ನಿರ್ವಹಿಸಿದ್ದು, ಲೆಕ್ಕ ತನಿಖಾ ವಿಚಾರಣ ಕಂಡಿಕೆ ಸಂಖ್ಯೆ:119/2018–19 ದಿನಾಂಕ:24.07.2019 ರಲ್ಲಿ ಸಹಭಾಗಿತ್ವ ಸಂಸ್ಥೆಯಾದ ಶ್ರೀದೇವಿ ಟ್ರಸ್ಟ್ ಬೆಂಗಳೂರು, ಇವರಿಗೆ ರೂ.8,00,500/– (ಎಂಟು ಲಕ್ಷದ ಐದು ನೂರು ಮಾತ್ರ) ಗಳನ್ನು ಪಾವತಿಸಿದ್ದು, ಈ ಸಂಬಂಧ ಲೆಕ್ಕ ತಪಾಸಣೆ ವರದಿ ಬಂದ ನಂತರ ಬೇಬಾಕಿ ನೀಡಲು ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ.

ಕುಲಪತಿಗಳು                                                                 ಕುಲಸಚಿವರು

ಡಾ. ಎ. ರಂಗಸ್ವಾಮಿ, ಪ್ರಾಧ್ಯಾಪಕರು (ನಿವೃತ್ತ), ಇವರಿಗೆ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿಯಲ್ಲಿ ವಹಿಸಲಾದ ಯೋಜನೆ-1 ಮತ್ತು ಯೋಜನೆ-2 ಗೆ ಸಂಬಂಧಿಸಿದಂತೆ ರಚಿತ ಗೊಂಡಿರುವ ಪರಶೀಲನಾ ಸಮಿತಿ ಸಭೆ ನಡೆಸಿ ಕೂಲಂಕಷವಾಗಿ ಪರೀಶಿಲಿಸಿ ಸದರಿಯವರು ಖರೀದಿಸಿದ ಉಪಕರಣಗಳಲ್ಲಿ (Laptop and Cemera) ಪಡೆಯಲು ಕ್ರಮವಹಿಸುವುದು, ಇಲ್ಲದಿದ್ದಲ್ಲಿ ಬದಲಾಗಿ ಪ್ರಸ್ತುತ ಮಾರುಕಟ್ಟೆಯ ದರದನ್ವಯ ಮೊತ್ತವನ್ನು ವಸೂಲಿಸಬಹುದಾಗಿದೆ ಎಂದು ವರದಿ ನೀಡಿರುತ್ತಾರೆ.

ವಿ.ವಿ ನಿಲಯದ ಪರೀಕ್ಷಾ ವಿಭಾಗದ ಕೆಲವು ದಾಖಲಾತಿಗಳನ್ನು ತೆಗೆದುಕೊಂಡು ಹೋಗಿರುವ ಸಂಬಂಧ ಸದರಿಯವರ ವಿರುದ್ಧ ಷೋಕಾಸ್ ನೋಟೀಸ್ ಜಾರಿಗೊಳಿಸಿ ಇಲಾಖಾ ವಿಚಾರಣೆಯನ್ನು ನಡೆಸಲು ಉದ್ದೇಶಿಸಲಾಗಿತ್ತು. ಈ ಸಂಬಂಧ ಪ್ರೊ ಎ. ರಂಗಸ್ವಾಮಿ ಇವರು ಮಾನ್ಯ ಉಚ್ಚನ್ಯಾಯಾಲಯ ಬೆಂಗಳೂರು ಇಲ್ಲಿ ದಾಖಲಿಸಿದ್ದ ರಿಟ್ ನಂ: 9613/2020 ರ ದಿನಾಂಕ:30.05.2023 ರ ಆದೇಶದನ್ವಯ ಸರಿಯವರು ದಿನಾಂಕ:31.07.2023 ಪತ್ರ ಮೂಲಕ ಷೋಕಾಸ್ ನೋಟೀಸ್‌ಗೆ ಉತ್ತರವನ್ನು ಸಲ್ಲಿಸಿದ್ದು ಸದರಿಯವರು ಸಲ್ಲಿಸಿರುವ ಉತ್ತರವು ಸಮರ್ಪಕವಾಗಿರುವುದಿಲ್ಲ ಹಾಗೂ ಷೋಕಾಸ್ ನೋಟೀಸ್‌ಗೆ ಸಂಬಂಧಿಸಿದಂತೆ ಯಾವುದೇ ತೀರ್ಮಾನವಾಗಿರುವುದಿಲ್ಲ.

ಡಾ. ಎ. ರಂಗಸ್ವಾಮಿ ಪ್ರಾಧ್ಯಾಪಕರು (ನಿವೃತ್ತ), ಇವರಿಗೆ ಗಳಿಕೆ ರಜೆ ನದದೀಕರಣ, ಉಪದಾನ ಹಾಗೂ ಇನ್ನಿತರೆ ಪಿಂಚಣಿ ಸೌಲಭ್ಯಗಳನ್ನು ಹಾಗೂ ಸದರಿಯವರ ಸಂಬಂಧ ಇವರ ಆಡಿಟ್ ಆಕ್ಷೇಪಣೆಯ ಮೊತ್ತ ರೂ6,04,192/-(ಆರು ಲಕ್ಷದ ನಾಲ್ಕು ಸಾವಿರದ ಒಂದು ನೂರು ತೊಂಬತ್ತೆರಡು ರೂ.ಗಳು ಮಾತ್ರ) ಗಳನ್ನು ಕಟಾಯಿಸಿ, ಮುಂದಿನ ಲೆಕ್ಕ ತಪಾಸಣೆಯ ಆಕ್ಷೇಪಣೆಯ ಷರತ್ತಿಗೊಳಪಟ್ಟು ನಿಯಮಾನುಸಾರ ಪಿಂಚಣಿ, ನಿವೃತ್ತಿ ಉಪದಾನ ಹಾಗೂ ಇನ್ನಿತರೆ ಪಿಂಚಣಿ ಸೌಲಭ್ಯಗಳ ಮತ್ತು ಇತರೆ ವಿಷಯಗಳ ಬಗ್ಗೆ ಆಕ್ಷೇಪಣೆ ಬಂದಲ್ಲಿ ಡಾ. ಎ ರಂಗಸ್ವಾಮಿ, ಪ್ರಾಧ್ಯಾಪಕರು (ನಿವೃತ್ತ), ಇವರೇ ಪಾವತಿಸಲು ಬದ್ದರಿರುತ್ತೀರಿ ಎಂಬುದರ ಬಗ್ಗೆ ರೂ.200/- ಛಾಪಾ ಕಾಗದದಲ್ಲಿ ಮುಚ್ಚಳಿಕೆಯನ್ನು ಪಡೆದು ಪಾವತಿಸಲು ಮಾನ್ಯ ಕುಲಪತಿಗಳು ಅನುಮೋದಿಸಿರುತ್ತಾರೆ.

ಡಾ. ಎ. ರಂಗಸ್ವಾಮಿ, ಪ್ರಾಧ್ಯಾಪಕರು(ನಿವೃತ್ತ), ಕನ್ನಡ ಅಧ್ಯಯನ ವಿಭಾಗ, ಕರಾಮುವಿ ಇವರಿಗೆ ನಿವೃತ್ತಿ ಆರ್ಥಿಕ ಸೌಲಭ್ಯಗಳಾದ ಗಳಿಕೆ ರಜೆ ನಗದೀಕರಣ, ಉಪದಾನ ಹಾಗೂ ಇನ್ನಿತರೆ ಪಿಂಚಣಿ ಸೌಲಭ್ಯವನ್ನು, ಆಡಿಟ್ ಆಕ್ಷೇಪಣೆಯ ಮೊತ್ತ ರೂ6,04,192/-ಗಳನ್ನು, ಕಟಾಯಿಸಿ ನಿಯಮಾನುಸಾರ ಬಿಡುಗಡೆಗೊಳಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ (ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/42/2023-24, ದಿನಾಂಕ:27.10.2023) ಕಛೇರಿ ಆದೇಶ ಹೊರಡಿಸಲಾಗಿರುತ್ತದೆ.

ಪ್ರಸ್ತುತ ಸದರಿ ನಿವೃತ್ತ ಪ್ರಾಧ್ಯಾಪಕರಿಗೆ ಮಂಜೂರು ಮಾಡಿರುವ ನಿವೃತ್ತಿ ಆರ್ಥಿಕ ಸೌಲಭ್ಯಗಳ ಆಕ್ಷೇಪಣೆಯ ಮೊತ್ತವನ್ನು ಹಣಕಾಸು ವಿಭಾಗದಿಂದ ಮತ್ತಮ್ಮೆ ಪರಿಶೀಲಿಸಿ ದಿನಾಂಕ:04.11.2023ರಂದು ಟಿಪ್ಪಣಿಯನ್ನು ನೀಡಿರುತ್ತಾರೆ. ಸದರಿ ಟಿಪ್ಪಣಿಯಲ್ಲಿ 1997-98 ರಿಂದ 2020-21 ನೇ ಸಾಲಿನವರೆಗೆ ಒಟ್ಟು ರೂ 9,10,266/- ವಸುಲಾತಿಗೆ ಬಾಕಿಯಿದ್ದು 6 ನೇ ವೇತನದ ಬಾಕಿಯಲ್ಲಿ ಹೆಚ್ಚುವರಿ ಪಾವತಿಸಲಾಗಿದ್ದ ಮೊತ್ತದ ಬಾಬ್ತು ರೂ.1,49,226/- ಗಳನ್ನು ಮತ್ತು ರೂ 9,000/-ಗಳನ್ನು 7ನೇ ವೇತನದ ಹಿಂಬಾಕಿಯಲ್ಲಿ ಕಡಿತಗೊಳಿಸಲಾಗಿದೆ. ಹಾಗೂ 7ನೇ ವೇತನದ ಬಾಕಿಯಲ್ಲಿ ಹೆಚ್ಚುವರಿ ಪಾವತಿಸಲಾಗಿದ್ದ. ಮೊತ್ತದ ಬಾಬ್ತು ಸದರಿಯವರ ವೇತನದಲ್ಲಿ ರೂ2,64,771/- ಗಳನ್ನು ಕಡಿತಗೊಳಿಸಿರುವ ಮೊತ್ತವು ಸೇರಿ ಒಟ್ಟಾರೆ ರೂ 4,22,997/- ಗಳನ್ನು ಕಟಾಯಿಸಿದ್ದು, ಬಾಕಿ ವಸೂಲಿಸಬೇಕಾಗಿರುವ ಮೊತ್ತ ರೂ 4,87,269/- ಗಳಾಗಿರುತ್ತದೆ. ಹಾಗೂ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿಯಲ್ಲಿ ಖರೀದಿಸಿದ ಉಪಕರಣಗಳಲ್ಲಿ 01 Laptop and 01 Cemera ಪಡೆಯಲು ಕ್ರಮವಹಿಸುವುದು, ಇಲ್ಲದಿದ್ದಲ್ಲಿ ಪ್ರಸ್ತುತಮಾರುಕಟ್ಟೆಯ ದರದನ್ವಯ ಮೊತ್ತವನ್ನು ನಿಗದಿಪಡಿಸಿ ಪಿಂಚಣಿ ಸೌಲಭ್ಯಗಳ ಆದೇಶದಲ್ಲಿ ವಸೂಲಾತಿ ಮೊತ್ತವನ್ನು ಪರಿಷ್ಕರಿಸಿ ನೀಡಿದ್ದಲ್ಲಿ ಮುಂದಿನ ಕ್ರಮವಹಿಸಲಾಗುವುದು ಮುಂದುವರಿದು, 2021-2022 ನೇ ಸಾಲಿನ ಲೆಕ್ಕ ತಪಾಸಣೆ ಪೂರ್ಣಗೊಂಡಿದ್ದು ವರದಿ ಬಾಕಿಯಿರುತ್ತದೆ ಎಂದು ತಿಳಿಸಿರುತ್ತಾರೆ.

ಕುಲಪತಿಗಳು

ಕುಲಸಚಿವರು

ಟಿಪ್ಪಣಿಯನುಸಾರ ಡಾ.ಎ ರಂಗಸ್ವಾಮಿ, ನಿವೃತ್ತ ಪ್ರಾಧ್ಯಾಪಕರು, ಇವರಿಗೆ ಆಡಿಟ್ ಆಕ್ಷೇಪಣೆಯ ಮೊತ್ತ ರೂ.4,87,269/- (ನಾಲ್ಕು ಲಕ್ಷದ ಎಂಬತ್ತೇಳು ಸಾವಿರದ ಎರಡು ನೂರ ಅರವತ್ತೊಬತ್ತು ಮಾತ್ರ) ಗಳನ್ನು ಮಾತ್ರ ತಡೆಹಿಡಿದ, (01 Laptop and 01 Cemera 'ಹೋರತುಪಡಿಸಿ) ಮುಂದಿನ ಲೆಕ್ಕ ತಪಾಸಣೆಯ ಆಕ್ಷೇಪಣೆಯ ಷರತ್ತಿಗೊಳಪಟ್ಟು ನಿಯಮಾನುಸಾರಪಿಂಚಣಿ, ನಿವೃತ್ತಿ ಉಪಾದಾನ ಹಾಗೂ ಇನ್ನಿತರೆ ಪಿಂಚಣಿ ಸೌಲಭ್ಯಗಳನ್ನು ಬಿಡುಗಡೆಗೊಳಿಸಲು ಮಾನ್ಯ ಕುಲಪತಿಗಳ ಆದೇಶಿಸಿರುವ ಹಿನ್ನೆಲೆಯಲ್ಲಿ (ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-1/42/2023-24) ಪರಿಷ್ಕೃತ ಕಚೇರಿ ಆದೇಶವನ್ನು ಹೊರಡಿಸಲಾಗಿದೆ.

ಡಾ. ಎ. ರಂಗಸ್ವಾಮಿ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ ಇವರಿಗೆ ಪಿಂಚಣಿ,ನಿವೃತ್ತಿ ಉಪದಾನ ಹಾಗೂ ಇನ್ನಿತರೆ ಪಿಂಚಣಿ ಸೌಲಭ್ಯಗಳನ್ನು ಬಿಡುಗಡೆಗೊಳಿಸಿರುವ ಕ್ರಮವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆ ಕೋರಿ ವಿಷಯವನ್ನು ಮಂಡಿಸಿದೆ.

*****

ಮಾನ್ಯ ಕುಲಪತಿಗಳು ಮಾತನಾಡಿ ಯಾವುದೇ ವಿಶ್ವವಿದ್ಯಾನಿಲಯದ ನೌಕರರ ಮೇಲೆ ಆಕ್ಷೇಪಣೆಗಳು ಇದ್ದಲ್ಲಿ ಮತ್ತು ಕೋರ್ಟ್‌ನಲ್ಲಿ ವ್ಯಾಜ್ಯಗಳಿದ್ದರೆ ಅಂತಹ ನೌಕರರಿಗೆ ನಿವೃತ್ತಿ ನಂತರ ಪಿಂಚಣಿ ಸೌಲಭ್ಯವನ್ನು ನೀಡುವುದಿಲ್ಲ. ಆದರೆ ನಮ್ಮ ವಿಶ್ವವಿದ್ಯಾನಿಲದಲ್ಲಿ ಯಾವುದೇ ನೌಕರರು ನಿವೃತ್ತಿ ನಂತರ ಜೀವನ ನಿರ್ವಹಣೆಗೆ ಅನುಕೂಲವಾಗುವಂತೆ ಪೂರ್ಣ ಪ್ರಮಾಣದ ಪಿಂಚಣಿ ಸೌಲಭ್ಯವನ್ನು ಇವರಿಗೆ ನೀಡಲಾಗಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಡಾ.ಎ.ರಂಗಸ್ವಾಮಿ, ನಿವೃತ್ತ ಪ್ರಾಧ್ಯಾಪಕರು, ಇವರಿಗೆ ಆಡಿಟ್ ಆಕ್ಷೇಪಣೆಯ ಮೊತ್ತ ರೂ.4,87,269/- (ನಾಲ್ಕು ಲಕ್ಷದ ಎಂಬತ್ತೇಳು ಸಾವಿರದ ಎರಡು ನೂರ ಅರವತ್ತೊಂಬತ್ತು ಮಾತ್ರ) ಗಳನ್ನು ಮಾತ್ರ ತಡೆಹಿಡಿದು (01 laptop and Camera ಹೊರತುಪಡಿಸಿ) ಮುಂದಿನ ಲೆಕ್ಕ ತಪಾಸಣೆಯ ಆಕ್ಷೇಪಣೆಯ ಷರತ್ತಿಗೊಳಪಟ್ಟು ನಿಯಮಾನುಸಾರ ಪಿಂಚಣಿ, ನಿವೃತ್ತಿ ಉಪದಾನ ಹಾಗೂ ಇನ್ನಿತರೆ ಪಿಂಚಣಿ ಸೌಲಭ್ಯಗಳನ್ನು ಬಿಡುಗಡೆಗೊಳಿಸಲು ಮಾನ್ಯ ಕುಲಪತಿಗಳು ಆದೇಶಿಸಿರುವ ಹಿನ್ನಲೆಯಲ್ಲಿ ಸದರಿಯವರಿಗೆ ಎಲ್ಲಾ ಸವಲತ್ತುಗಳನ್ನು ನೀಡಲಾಗಿರುತ್ತದೆಂದು ಸಭೆಗೆ ತಿಳಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು, ಡಾ.ಎ.ರಂಗಸ್ವಾಮಿ, ನಿವೃತ್ತ ಪ್ರಾಧ್ಯಾಪಕರು, ಇವರಿಗೆ ಸಂಬಂಧಪಟ್ಟಂತೆ ಮುಂದಿನ ಲೆಕ್ಕ ತಪಾಸಣೆಯ ಆಕ್ಷೇಪಣೆಯ ಷರತ್ತಿಗೊಳಪಟ್ಟು ನಿಯಮಾನುಸಾರ ಪಿಂಚಣಿ, ನಿವೃತ್ತಿ ಉಪದಾನ ಹಾಗೂ ಇನ್ನಿತರೆ ಪಿಂಚಣಿ ಸೌಲಭ್ಯಗಳನ್ನು ಬಿಡುಗಡೆಗೊಳಿಸಿರುವ ಕ್ರಮವನ್ನು ಸಭೆಯು ಅನುಸಮರ್ಥಿಸಿತು.**

#####

**ವಿಷಯ ಸಂಖ್ಯೆ: 175.23**

**ವಿಷಯ: ವಿವಿಧ ಶಿಕ್ಷಣಕ್ರಮಗಳ ಪ್ರವೇಶಾತಿ ಸಂಬಂಧದಲ್ಲಿ ವ್ಯಯಿಸಲಾಗಿರುವ ಜಾಹೀರಾತು ವೆಚ್ಚದ ಪ್ರಕ್ರಿಯೆಗೆ ಅನುಸಮರ್ಥನೆ ಕೋರುವ ಬಗೆಗೆ.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು UGC ಯ ODL ಮಾರ್ಗಸೂಚಿಯನ್ವಯ ಆಯಾ ಶೈಕ್ಷಣಿಕ ಸಾಲುಗಳಲ್ಲಿ ಎರಡು ಆವೃತ್ತಿಗಳಲ್ಲಿ(ಜುಲೈ ಹಾಗೂ ಜನವರಿ) ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಕರಾಮುವಿ ಕೇಂದ್ರ ಕಛೇರಿ ಮೈಸೂರು, ವಿವಿಧ ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ಪ್ರವೇಶಾತಿಯನ್ನು ಮಾಡಲಾಗುತ್ತಿದೆ.

ಕುಲಪತಿಗಳು ಕುಲಸಚಿವರು

ಪ್ರವೇಶಾತಿಯ ನೀತಿ ನಿಯಮಗಳು ಹಾಗೂ ವಿವರಗಳನ್ನು ವಿದ್ಯಾರ್ಥಿಗಳು ಹಾಗೂ ಆಸಕ್ತರಿಗೆ ತಿಳಿಸುವ ನಿಟ್ಟಿನಲ್ಲಿ ಪ್ರತಿ ಆವೃತ್ತಿಯ ಪ್ರವೇಶಾತಿ ಸಮಯದಲ್ಲಿ ದೈನಂದಿನ ಕನ್ನಡ & ಆಂಗ್ಲ ದಿನಪತ್ರಿಕೆಗಳು, ಸುದ್ದಿ ಮಾಧ್ಯಮ, ದೃಶ್ಯ ಮಾಧ್ಯಮ, ಖಾಸಗಿ ರೇಡಿಯೋ FM ಗಳ ಮೂಲಕ ಜಾಹೀರಾತು ಹಾಗೂ ವಿಶೇಷ ಸಂದರ್ಭದಲ್ಲಿ ಪ್ರಕಟಿಸಲ್ಪಡುವ Magzines ಗಳಲ್ಲಿ ಪ್ರಾಯೋಜಕತ್ವದ ಮೂಲಕ ಪ್ರವೇಶಾತಿಯ ವಿವರಗಳನ್ನು ಪ್ರಕಟಿಸಲಾಗುತ್ತದೆ. ಅದರಂತೆ,

**1.** 2023–24ರ ಶೈಕ್ಷಣಿಕ ಸಾಲಿನ ಜುಲೈ–ಆಗಸ್ಟ್ ಆವೃತ್ತಿಯ ಪ್ರವೇಶಾತಿಯು ದಿನಾಂಕ:30–06–2023ರಲ್ಲಿ ಪ್ರಾರಂಭಗೊಂಡು ದಿನಾಂಕ:30–10–2023ಕ್ಕೆ ಕೊನೆಗೊಂಡಿರುತ್ತದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಗಮನಕ್ಕೆ ತರುವ ಸಂಬಂಧ ವಿವಿಧ ದಿನಾಂಕಗಳಲ್ಲಿ ವಿವಿಧ ಆಂಗ್ಲ & ಕನ್ನಡ ದೈನಂದಿನ ಪತ್ರಿಕೆಗಳಲ್ಲಿ ರಾಜ್ಯ ಆವೃತ್ತಿಯಲ್ಲಿ ಜಾಹೀರಾತನ್ನು ಹಾಗೂ ದೃಶ್ಯ ಮಾಧ್ಯಮದ ಮೂಲಕ 'Banner With Voice Over' ಮೂಲಕ ಹಾಗೂ ವಿವಿಧ Magzines ಗಳಲ್ಲಿ ಜಾಹೀರಾತನ್ನು ಸರ್ಕಾರದ DIP ದರದಲ್ಲಿಯೂ ಜಾಹೀರಾತನ್ನು ಹಾಗೂ ಆಯಾ ಪತ್ರಿಕೆಗಳು/ Magzines ನೀಡುವ ವಿಶೇಷ ದರದಲ್ಲಿ ಪ್ರಾಯೋಜಕತ್ವವನ್ನು ನೀಡಲಾಗಿ, ಈ ಸಂಬಂಧ ಒಟ್ಟಾರೆ ರೂ.41,23,072/–(ನಲವತ್ತೊಂದು ಲಕ್ಷದ ಇಪ್ಪತ್ತ ಮೂರು ಸಾವಿರದ ಎಪ್ಪತ್ತೆರಡು ರೂಗಳು ಮಾತ್ರ) ಗಳನ್ನು ಪಾವತಿಸಲಾಗಿರುತ್ತದೆ.

ಈ ಪ್ರವೇಶಾತಿ ಸಂಬಂಧದಲ್ಲಿ ವ್ಯಯಿಸಿರುವ ಜಾಹೀರಾತು/ಪ್ರಾಯೋಜಕತ್ವದ ವೆಚ್ಚದ ಪ್ರಕ್ರಿಯೆಗೆ ಅನುಸಮರ್ಥನೆ ಕೋರಿದೆ.

**2.** ಇದೇ ರೀತಿ 2022–23ರ ಜುಲೈ ಆವೃತ್ತಿಯಲ್ಲಿ ರೂ.13,78,357/–(ಹದಿಮೂರು ಲಕ್ಷದ ಎಪ್ಪತ್ತೆಂಟು ಸಾವಿರದ ಮುನ್ನೂರ ಐವತ್ತೇಳು ರೂಗಳು ಮಾತ್ರ) ಹಾಗೂ ಜನವರಿ ಆವೃತ್ತಿಯ ಪ್ರವೇಶಾತಿಯಲ್ಲಿ ರೂ.16,82,271/–(ಹದಿನಾರು ಲಕ್ಷದ ಎಂಭತ್ತೆರಡು ಸಾವಿರದ ಇನ್ನೂರ ಎಪ್ಪತ್ತೊಂದು ರೂಗಳು ಮಾತ್ರ) ಗಳನ್ನು ಜಾಹೀರಾತು ವೆಚ್ಚವಾಗಿ ವ್ಯಯಿಸಲಾಗಿದ್ದು, ಈ ಪ್ರಕ್ರಿಯೆಗೂ ಅನುಸಮರ್ಥನೆ ಕೋರಿದೆ.

ಪ್ರವೇಶಾತಿ ಸಂಬಂಧದಲ್ಲಿ ಕ್ರಮವಾಗಿ 2022–23ರ ಜುಲೈ, ಜನವರಿ ಹಾಗೂ 2023–24 ರ ಜುಲೈ ಆವೃತ್ತಿಗಳಲ್ಲಿ ಜಾಹೀರಾತು/ಪ್ರಾಯೋಜಕತ್ವದ ವೆಚ್ಚವನ್ನು ವ್ಯಯಿಸಿರುವ ಮೇಲಿನ ಪ್ರಕ್ರಿಯೆಗೆ ಅನುಸಮರ್ಥನೆ ಪಡೆಯುವ ಸಂಬಂಧ ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

*****

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು, ವಿಷಯ ಸಂಖ್ಯೆ: 175,23ರಲ್ಲಿ ತಿಳಿಸಿರುವ (1) ಹಾಗೂ (2)ರ ಅಂಶಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಪಾವತಿಸಿರುವ ಜಾಹೀರಾತು ವೆಚ್ಚ/ಪ್ರಾಯೋಜಕತ್ವದ ವೆಚ್ಚದ ಪ್ರಕ್ರಿಯೆಗೆ ಸಭೆಯು ಅನುಸಮರ್ಥಿಸಿತು.**

#####

<u>ವಿಷಯ ಸಂಖ್ಯೆ: 175.24</u>

**ವಿಷಯ: ಪದೋನ್ನತಿ ಸಂಬಂಧ ಅಧ್ಯಾಪಕರುಗಳಿಗೆ 'ಕುಂದು ಕೊರತೆ ನಿವಾರಣಾ ಸಮಿತಿ' ಯಲ್ಲಿನ ಶಿಫಾರಸ್ಸಿನನ್ವಯ ಕ್ರಮವಹಿಸಿರುವ ಬಗೆಗೆ.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರು ಹಾಗೂ ಇತರೆ ತತ್ಸಮಾನ ವೃಂದದವರಿಗೆ ಮುಂದಿನ ಹಂತದ ಪದೋನ್ನತಿ ನೀಡುವ ಸಂಬಂಧ ದಿನಾಂಕ: 25.07.2023 ಮತ್ತು

ಕುಲಪತಿಗಳು ಕುಲಸಚಿವರು

26.07.2023ರಂದು "Screening-cum-Evaluation Committee and Selection Committee" ಯ ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಭೆಯ ನಡವಳಿಯನ್ನು ದಿನಾಂಕ: 27.07.2023ರಂದು ನಡೆದ 173ನೇ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಲಾಗಿ, ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನದನ್ವಯ ಅಧ್ಯಾಪಕರು ಹಾಗೂ ಇತರೆ ತತ್ಸಮಾನ ವೃಂದದವರಿಗೆ ಮುಂದಿನ ಹಂತದ ಪದೋನ್ನತಿ ನೀಡಿ ದಿನಾಂಕ: 08.08.2023ರಂದು ಆದೇಶ ಹೊರಡಿಸಲಾಗಿರುತ್ತದೆ.

ಪದೋನ್ನತಿಗೆ ಸಂಬಂಧಿಸಿದಂತೆ ಯಾವುದಾದರೂ ಅಹವಾಲುಗಳಿದ್ದಲ್ಲಿ ದಿನಾಂಕ: 09.09.2023ರ ಒಳಗಾಗಿ ಸಲ್ಲಿಸುವಂತೆ ದಿನಾಂಕ: 30.08.2023ರ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ಈ ಸಂಬಂಧ 08 ಅಧ್ಯಾಪಕ ಹಾಗೂ ಇತರೆ ತತ್ಸಮಾನ ವೃಂದದವರುಗಳು ತಮ್ಮ ಅಹವಾಲುಗಳನ್ನು ಸಲ್ಲಿಸಿದ್ದು, ಸದರಿ ಅಹವಾಲುಗಳನ್ನು ಪರಿಶೀಲಿಸಲು ದಿನಾಂಕ: 11.09.2023ರ ಆದೇಶದನ್ವಯ ಕುಂದು ಕೊರತೆ ಸಮಿತಿಯನ್ನು ರಚಿಸಲಾಗಿತ್ತು (ಪ್ರತಿ ಲಗತ್ತಿಸಿದೆ). ಸದರಿ ಸಮಿತಿಯು ಅಧ್ಯಾಪಕರುಗಳು ಹಾಗೂ ಇತರೆ ತತ್ಸಮಾನ ವೃಂದದವರುಗಳು ಸಲ್ಲಿಸಿರುವ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿಯನ್ನು ಸಲ್ಲಿಸಿರುತ್ತಾರೆ.

ಕುಂದು ಕೊರತೆ ನಿವಾರಣಾ ಸಮಿತಿಯ ಶಿಫಾರಸ್ಸು ಈ ಕೆಳಗಿನಂತಿರುತ್ತದೆ:

| ಕ್ರ.ಸಂ | ಅಧ್ಯಾಪಕರ ಹೆಸರು ಮತ್ತು ವಿಭಾಗ | ಕುಂದು ಕೊರತೆ ನಿವಾರಣಾ ಸಮಿತಿಯ ಶಿಫಾರಸ್ಸು |
|---|---|---|
| 01 | ಡಾ. ಎಸ್. ನಿರಂಜನ್ ರಾಜ್, ಸಹಾಯಕ ಪ್ರಾಧ್ಯಾಪಕರು, ಮೈಕ್ರೊಬಯಾಲಜಿ ಅಧ್ಯಯನ ವಿಭಾಗ | The candidate claim of counting the past services is considered. Consequently his CAS from Academic level 10 to 11 becomes effective from 3.11.2009 and CAS from **Academic level 11 to 12 becomes effective form 3.11.2014**.<br>Thus, the committee unanimously recommends for placement for **Dr. Niranjan Raj. S under CAS from Academic Level 11 to 12 with effect from 3.11.2014** |
| 02 | ಡಾ. ಎನ್. ಜಿ. ರಾಜು, ಸಹಾಯಕ ಪ್ರಾಧ್ಯಾಪಕರು, ಜೈವಿಕತಂತ್ರಜ್ಞಾನ ಅಧ್ಯಯನ ವಿಭಾಗ | The candidate claim of counting the past services is considered. Consequently his CAS from Academic level 10 to 11 becomes effective from 09.08.2008 and CAS from **Academic level 11 to 12 becomes effective form 09.08.2013.**<br>Thus, the committee unanimously recommends for placement for **Dr. N.G. Raju under CAS from Academic Level 11 to 12 with effect from 09.08.2013.** |
| ೦3 | ಡಾ. ಎಂ. ಉಮಾಶಂಕರ್, ಸಹಾಯಕ ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ | The committee recommends seeking clarification from the UGC regarding the candidate's eligibility for counting the past services and based on the UGC's clarification further action may be considered. |
| 04 | ಡಾ. ಎಂ.ಎಸ್. ಹೇಮಲತಾ, ಸಹಾಯಕ ಪ್ರಾಧ್ಯಾಪಕರು, ಆಹಾರ ಮತ್ತು ಪೌಷ್ಟಿಕತೆ ಅಧ್ಯಯನ ವಿಭಾಗ | The committee recommends seeking clarification from the UGC regarding the candidate's eligibility for counting the past services, and based on the UGC's clarification further action may be considered. |
| 05 | ಡಾ. ಎಂ. ಗೋಪಾಲಸ್ವಾಮಿ, ಉಪಗ್ರಂಥಪಾಲಕರು, ಗ್ರಂಥಾಲಯ ವಿಭಾಗ | The Candidate is eligible for Deputy Librarian to Librarian Academic Level 13A to 14. Thus, the committee unanimously recommends for placement of **Dr. Gopalaswamy M. under UGC CAS from Academic Level 13A to 14 (AGP 9000 to 10000) with effect from 29.11.2013** |

ಕುಲಪತಿಗಳು ಕುಲಸಚಿವರು

| | | |
|---|---|---|
| 06 | ಡಾ. ವಿ. ಶೀಲಾ,<br>ಸಹಾಯಕ ಗ್ರಂಥಪಾಲರು,<br>ಗ್ರಂಥಾಲಯ ವಿಭಾಗ | The Candidate is eligible for Assistant Librarian Academic Level 11 to 12. Thus, the committee unanimously recommends for placement of **Dr. V.Sheela under UGC CAS from Academic Level 11 to 12 (AGP 7000 to 8000) with effect from 29.11.2017** |
| 07 | ಡಾ. ನಟರಾಜು ಅಂಗಸ್ವಾಮಿ,<br>ಸಹಾಯಕ ಪ್ರಾಧ್ಯಾಪಕರು,<br>ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ | ಸದರಿಯವರ ಪದೋನ್ನತಿಗೆ ಸಂಬಂಧಿಸಿದಂತೆ ಕುಂದು ಕೊರತೆ ಸಮಿತಿಯಲ್ಲಿ ಯಾವುದೇ ತೀರ್ಮಾನವಾಗಿರುವುದಿಲ್ಲ. |
| 08 | ಡಾ. ಟಿ.ಎಂ. ಗೀತಾಂಜಲಿ,<br>ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | |

ಕುಂದು ಕೊರತೆ ನಿವಾರಣಾ ಸಮಿತಿಯ ವರದಿಯನ್ನು ದಿನಾಂಕ: 17.09.2023ರಂದು ನಡೆದ 174ನೇ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಲಾಗಿ, ಸದರಿ ಸಭೆಯಲ್ಲಿ " ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯ ಅಧ್ಯಾಪಕ ವೃಂದದ ಪದೋನ್ನತಿ ಸಂಬಂಧ ಕುಂದು-ಕೊರತೆ ನಿವಾರಣಾ ಸಮಿತಿಯ ವರದಿಯ ಅನುಸಾರ ಅವರುಗಳು ಖಾಯಂ ಅಧ್ಯಾಪಕ ವೃಂದದಲ್ಲಿ ಈಗಾಗಲೇ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ / ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡಿರುವ ದಾಖಲಾತಿಗಳನ್ವಯ ಅವರುಗಳ ನೇಮಕ ಸಂದರ್ಭದಲ್ಲಿ ಇವುಗಳನ್ನು ಗಣನೆಗೆ ಪರಿಗಣಿಸಿದ್ದರೆ ಅಂತಹುಗಳನ್ನು ವೃತ್ತಿ ಪದೋನ್ನತಿ ಯೋಜನೆಯಡಿ ಅರ್ಹ ಅಭ್ಯರ್ಥಿಗಳಿಗೆ 2018ರ ಯುಜಿಸಿ ನಿಯಮಾವಳಿಗಳ ಅನುಸಾರ ಅರ್ಹತೆಗಳಿದ್ದಲ್ಲಿ ಮುಂದಿನ ಕ್ರಮವಹಿಸಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು" ಎಂದು ತೀರ್ಮಾನವಾಗಿರುತ್ತದೆ.

ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನವನ್ನು ಅನುಷ್ಠಾನಗೊಳಿಸುವ ಸಂಬಂಧ ಕಡತವನ್ನು ಮಂಡಿಸಲಾಗಿ, ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ತೀರ್ಮಾನದಲ್ಲಿ ಸ್ಪಷ್ಟತೆ ಇಲ್ಲದ ಕಾರಣ "Expert Committee" ಯ ತೀರ್ಮಾದಂತೆ ಕ್ರಮವಹಿಸಲು ಮಾನ್ಯ ಕುಲಸಚಿವರು ಆದೇಶ ಕೋರಿದ್ದು, ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುತ್ತಾರೆ.

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಕುಂದು ಕೊರತೆ ನಿವಾರಣಾ ಸಮಿತಿ ಸಭೆಯ ತೀರ್ಮಾದಂತೆ ಡಾ. ಎಸ್. ನಿರಂಜನ್ ರಾಜ್, ಡಾ. ಎನ್. ಜಿ. ರಾಜು, ಡಾ. ಎಂ. ಗೋಪಾಲಸ್ವಾಮಿ ಮತ್ತು ಡಾ. ವಿ. ಶೀಲಾ ಇವರುಗಳಿಗೆ ಪದೋನ್ನತಿ ದಿನಾಂಕವನ್ನು ಪರಿಷ್ಕರಿಸಿ, ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/598/2023-24, ದಿನಾಂಕ: 06.11.2023 ರಂದು ಪರಿಷ್ಕೃತ ಆದೇಶ ಹೊರಡಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮದ ವರದಿಯನ್ನು ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

*****

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಅಧ್ಯಾಪಕರುಗಳ ಪದೋನ್ನತಿ ಸಂಬಂಧ 'ಕುಂದು ಕೊರತೆ ನಿವಾರಣಾ ಸಮಿತಿ' ಯ ಶಿಫಾರಸ್ಸಿನ ವರದಿಗಳನ್ವಯ, ಡಾ. ಎಸ್. ನಿರಂಜನ್ ರಾಜ್, ಸಹಾಯಕ ಪ್ರಾಧ್ಯಾಪಕರು, ಡಾ. ಎನ್.ಜಿ.ರಾಜು, ಸಹಾಯಕ ಪ್ರಾಧ್ಯಾಪಕರು, ಡಾ. ಎಂ.ಗೋಪಾಲಸ್ವಾಮಿ, ಉಪಗ್ರಂಥಪಾಲಕರು ಮತ್ತು ಡಾ. ವಿ. ಶೀಲಾ, ಸಹಾಯಕ ಗ್ರಂಥಪಾಲಕರು ಇವರಿಗೆ ಪದೋನ್ನತಿಗೆ ಪರಿಗಣಿಸಿ "ಪರಿಷ್ಕೃತ ಆದೇಶ" ಹೊರಡಿಸಿ ನಿಗದಿಪಡಿಸಿದ ದಿನಾಂಕಕ್ಕೂ ಅನುಸಮರ್ಥಿಸಲಾಯಿತು.**

#####

ಕುಲಪತಿಗಳು

ಕುಲಸಚಿವರು

ವಿಷಯ ಸಂಖ್ಯೆ: 175.25

**ವಿಷಯ: ಹಣಕಾಸು ವಿಭಾಗದ ದಿನನಿತ್ಯ ಹಣಕಾಸು ಲೆಕ್ಕ ವ್ಯವಹಾರಣೆಯನ್ನು ಡಿಜಿಟಲೀಕರಣಗೊಳಿಸಲು ತಂತ್ರಾಂಶವನ್ನು ಅಳವಡಿಸಿಕೊಡುವಂತೆ ಕೋರಿರುವ ಬಗ್ಗೆ.**

******

ಹಣಕಾಸು ವಿಭಾಗದಲ್ಲಿ ದಿನನಿತ್ಯ ನಡೆಯುವ ಹಣಕಾಸು ವಿವರಣೆಯ ಎಲ್ಲಾ ಲೆಕ್ಕಪತ್ರವನ್ನು ಇಂದಿನವರೆಗೂ computer and Manual ಮುಖಾಂತರ ನಿರ್ವಹಿಸುತ್ತಿದ್ದು, ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಮತ್ತು ಪರೀಕ್ಷಾ ವಿಭಾಗಗಳು ತಂತ್ರಾಂಶವನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದು ಹಣಕಾಸು ವಿಭಾಗದಲ್ಲಿ ಯಾವುದೇ ತಂತ್ರಾಂಶದ ಸೌಲಭ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಹಣಕಾಸು ವಿಭಾಗದಲ್ಲಿ ದಿನನಿತ್ಯದ ಕೆಲಸಗಳು ವಿಳಂಬ ಮತ್ತು ಕೆಲಸದ ಒತ್ತಡ ಹೆಚ್ಚಾಗಿದ್ದು ಪ್ರಮುಖವಾಗಿ ವಾಸ್ತವಿಕ ಆದಾಯ ಮತ್ತು ವೆಚ್ಚಗಳನ್ನು ಸಮರ್ಪಕವಾಗಿ ಲೆಕ್ಕ ಸಮನ್ವಯಗೊಳಿಸಲು ವಿಳಂಬವಾಗುತ್ತಿದ್ದು, ಲೆಕ್ಕ ತಪಾಸಣೆ ವೇಳೆಯಲ್ಲಿ ಕೋರುವ ಮಾಹಿತಿಗಳನ್ನು ನಿಗದಿತ ಸಮಯದಲ್ಲಿ ಒದಗಿಸಲು ಸಾಧ್ಯವಾಗದೆ ಆಡಿಟ್ ಆಕ್ಷೇಪಣೆ ವ್ಯಕ್ತಪಡಿಸುವುದರಿಂದ ಹಣಕಾಸು ವಿಭಾಗಕ್ಕೆ ತಂತ್ರಾಂಶ ಅವಶ್ಯಕತೆಯಿದ್ದು, ಅಳವಡಿಸಿಕೊಡಬೇಕೆಂದು ಹಣಕಾಸು ಅಧಿಕಾರಿಗಳು ಪತ್ರ ಸಂಖ್ಯೆ ಕರಾಮುವಿ/ಹವಿ–05/ತಂತ್ರಾಂಶ/2023–24 ದಿನಾಂಕ 29.11.2023ರಂತೆ ಕೋರಿರುತ್ತಾರೆ. (ಪತ್ರ ಲಗತ್ತಿಸಿದೆ– ANNEXURE-1).

ಸದರಿ ತಂತ್ರಾಂಶದ ಸಂಬಂಧ M/s. M3I Solutions, Bengaluru ರವರಿಂದ ಪ್ರಸ್ತಾವನೆಯನ್ನು ಪಡೆದಿದ್ದು, ಅದರ ಪ್ರಕಾರ Online Accounting Module ಅನ್ನು ಅಭಿವೃದ್ಧಿಪಡಿಸಿ ವಿವಿಯಲ್ಲಿ ಅಳವಡಿಸಲು ಮೊತ್ತ ರೂ.54,60,000/– (ತೆರಿಗೆಗಳು ಹೊರತುಪಡಿಸಿ) ವೆಚ್ಚ ತಗಲುತ್ತದೆ ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ.

ಮುಂದುವರೆದು, ಈ ಸಂಬಂಧ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಇ–ಕಛೇರಿ ಸಂಖ್ಯೆ: ಇಡಿ/35/ಇಜಿಒವಿ/2020 ದಿನಾಂಕ: 10.04.2023 ರಲ್ಲಿ UUCMS ತಂತ್ರಾಂಶದಲ್ಲಿ Financial Planning and Monitoring module ಅನ್ನು ದಿನಾಂಕ: 23.03.2023 ರಂದು ವಿಶ್ವವಿದ್ಯಾನಿಲಯಗಳ ಬಳಕೆಗೆ ಲೋಕಾರ್ಪಣೆಮಾಡಿದ್ದು ಸದರಿ module ಅನ್ನು ಕಡ್ಡಾಯವಾಗಿ ಬಳಸಬೇಕೆಂದು ನಿರ್ದೇಶಿಸಿ ಆದೇಶಿಸಿರುತ್ತಾರೆ (ಪತ್ರ ಲಗತ್ತಿಸಿದೆ–ANNEXURE-2).

ಮೇಲಿನ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ ಸದರಿ ತಂತ್ರಾಂಶವನ್ನು ವಿವಿಯಲ್ಲಿ ಅಳವಡಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಕುಲಸಚಿವರು ಮಾತನಾಡಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಇ–ಕಛೇರಿ ಸಂಖ್ಯೆ: ಇಡಿ/35/ಇಜಿಒವಿ/2020 ದಿನಾಂಕ: 10.04.2023 ರಲ್ಲಿ UUCMS ತಂತ್ರಾಂಶದಲ್ಲಿ Financial Planning and Monitoring module ಅನ್ನು ದಿನಾಂಕ: 23.03.2023 ರಂದು ವಿಶ್ವವಿದ್ಯಾನಿಲಯಗಳ ಬಳಕೆಗೆ ಲೋಕಾರ್ಪಣೆ ಮಾಡಿದ್ದು, ಸದರಿ module ಅನ್ನು ಕಡ್ಡಾಯವಾಗಿ ಬಳಸಬೇಕೆಂದು ನಿರ್ದೇಶಿಸಿ ಆದೇಶಿಸಿರುವ ಹಿನ್ನಲೆಯಲ್ಲಿ, ಹಣಕಾಸು ವಿಭಾಗದ ದಿನನಿತ್ಯ ಹಣಕಾಸು ಲೆಕ್ಕ ವ್ಯವಹಾರಣೆಯನ್ನು ಡಿಜಿಟಲೀಕರಣಗೊಳಿಸಲು ತಂತ್ರಾಂಶವನ್ನು ಅಳವಡಿಸಿಕೊಡುವಂತೆ ತಿಳಿಸಿರುತ್ತಾರೆ. ಆದರೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ವಿವರಣೆಯ ಎಲ್ಲಾ ಲೆಕ್ಕಪತ್ರವನ್ನು ಇಂದಿನವರೆಗೂ computer and Manual ಮುಖಾಂತರ ನಿರ್ವಹಿಸುತ್ತಿದ್ದು, UUCMS ತಂತ್ರಾಂಶವು ನಮ್ಮ ವಿಶ್ವವಿದ್ಯಾನಿಲಯದ ಹಣಕಾಸಿನ ಮತ್ತು ಲೆಕ್ಕ ವರದಿಗೆ ಪೂರಕವಾಗಿರುವುದಿಲ್ಲವೆಂದು ಸಭೆಗೆ ವಿವರಿಸಿದರು.

ಕುಲಪತಿಗಳು ಕುಲಸಚಿವರು

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯ ಹಣಕಾಸು ಲೆಕ್ಕ ವ್ಯವಹಾರಣೆಯನ್ನು ಡಿಜಿಟಲೀಕರಣಗೊಳಿಸಲು Online Accounting Module ತಂತ್ರಾಂಶವನ್ನು ಅಂದಾಜು ಮೊತ್ತ ರೂ.54,60,000/- (ತೆರಿಗೆಗಳು ಹೊರತುಪಡಿಸಿ) ಗಳಲ್ಲಿ ಒಂದು ಬಾರಿಗೆ ಅಭಿವೃದ್ಧಿಪಡಿಸಿ ವಿ.ವಿಯಲ್ಲಿ ಅಳವಡಿಸಿಕೊಳ್ಳಲು ನಿಯಮಾನುಸಾರ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ / GEM Portal ಮೂಲಕ ಟೆಂಡರ್ ಕರೆದು ಮುಂದಿನ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**<u>ವಿಷಯ ಸಂಖ್ಯೆ: 175.26</u>**

**ವಿಷಯ: ವಿವಿಗೆ ಅವಶ್ಯವಿರುವ ಅಧಿಕೃತ ವೆಬ್‌ಸೈಟ್ಸ್‌ಗಳನ್ನು ಅಭಿವೃದ್ಧಿಪಡಿಸಿ ಅಳವಡಿಸಿಕೊಳ್ಳುವ ಬಗ್ಗೆ.**

– * –

a) ವಿವಿಯಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ವಿವಿಯ ಶೈಕ್ಷಣಿಕ ಕಾರ್ಯಚಟುವಟಿಕೆಗಳ ಮಾಹಿತಿಗಳು ಹಾಗೂ ವಿವಿಯ ಇನ್ನಿತರೆ ಮಾಹಿತಿಗಳನ್ನು ಸಾರ್ವಜನಿಕರಿಗೆ ಲಭ್ಯವಾಗಿ ವಿವಿಯ ಪ್ರವೇಶಾತಿ ಹೆಚ್ಚಿಸಲು ವಿವಿಯ ಅಧಿಕೃತ ವೆಬ್‌ಸೈಟ್ ಅವಶ್ಯವಿದ್ದ ಕಾರಣ ಈಗಾಗಲೇ ಮೆ.ಕಿಯೋನಿಕ್ಸ, ಬೆಂಗಳೂರು ಅವರಿಂದ ಒಂದು ವರ್ಷದ ಅವಧಿಗೆ ಅಧಿಕೃತ ವೆಬ್‌ಸೈಟ್‌ನೊಂದಿಗೆ, Cloud storage/ Repository ಹಾಗೂ e-Commerce site for Prasaranga ವೆಬ್‌ಸೈಟ್ಸ್‌ಗಳನ್ನು ಅಭಿವೃದ್ಧಿಪಡಿಸಿ ಅಳವಡಿಸಿಕೊಳ್ಳಲು ದಿನಾಂಕ 10.11.2023 ರಂದು ಒಂದು ವರ್ಷದ ನಿರ್ವಹಣೆ ಸೇರಿದಂತೆ ಕಾರ್ಯಾದೇಶ ನೀಡಿ ಸದರಿ ಸೇವೆಯ ಅವಧಿಯು ದಿನಾಂಕ 09.11.2023 ರಂದು ಮುಕ್ತಾಯಗೊಂಡಿರುತ್ತದೆ.

ಮುಂದುವರೆದು, ವಿವಿಯ ಪ್ರಸ್ತುತ ಅವಶ್ಯಕತೆಗನುಸಾರ ಈ ಕೆಳಕಂಡ ವೆಬ್‌ಸೈಟ್ಸ್‌ಗಳು ಅವಶ್ಯವಿದ್ದು ಸದರಿ ವೆಬ್‌ಸೈಟ್ಸ್‌ಗಳನ್ನು ಅಭಿವೃದ್ಧಿಪಡಿಸಿ ಅಳವಡಿಸಲು M/s. KK Infosystem, Mysuru ರವರಿಂದ ಪ್ರಸ್ತಾವನೆಯನ್ನು ಪಡೆದಿದ್ದು, ಅದರ ಪ್ರಕಾರ ವೆಬ್‌ಸೈಟ್ಸ್‌ಗಳನ್ನು ಅನ್ನು ಅಭಿವೃದ್ಧಿಪಡಿಸಿ ವಿವಿಯಲ್ಲಿ ಅಳವಡಿಸಲು ಮೊತ್ತ ರೂ.62,48,100/- (ಅರವತ್ತೆರಡು ಲಕ್ಷದ ನಲವತ್ತೆಂಟು ಸಾವಿರದ ಒಂದು ನೂರು ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ವೆಚ್ಚ ತಗಲುತ್ತದೆ ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ.

| Sl. No. | Description |
|---|---|
| 1 | Design and Development of Dynamic website with Content management system and security for University |
| 2 | Design and Development of Cloud storage/ Repository |
| 3 | Design and Development of e-Commerce site for Prasaranga |

b) ವಿವಿಯ ಹಿರಿಯ ವಿದ್ಯಾರ್ಥಿಗಳ ಸಂಘಕ್ಕೆ ಅವಶ್ಯವಿದ್ದ Alumni Portal ಅನ್ನು M/s. Coronas Multitech Pvt., Ltd., Bengaluru ರವರಿಂದ ದಿನಾಂಕ: 18.10.2022ರ ಕಾರ್ಯಾದೇಶದಂತೆ ಒಂದು ವರ್ಷದ ವಾರ್ಷಿಕ ನಿರ್ವಹಣೆಯಲ್ಲಿ ಅಭಿವೃದ್ಧಿಪಡಿಸಿ ಅಳವಡಿಸಿಕೊಂಡಿದ್ದು ಸದರಿ ಸೇವೆಯ ಅವಧಿಯು ದಿನಾಂಕ 17.10.2023 ರಂದು ಮುಕ್ತಾಯಗೊಂಡಿರುತ್ತದೆ.

ಕುಲಪತಿಗಳು ಕುಲಸಚಿವರು

ಮುಂದುವರೆದು, ವಿವಿಯ ಪ್ರಸ್ತುತ ಅವಶ್ಯಕತೆಗನುಸಾರ Alumni Portal ಅನ್ನು ಅಭಿವೃದ್ಧಿಪಡಿಸಿ ಅಳವಡಿಸಲು M/s. KK Infosystem, Mysuru ರವರಿಂದ ಪ್ರಸ್ತಾವನೆಯನ್ನು ಪಡೆದಿದ್ದು, ಅದರ ಪ್ರಕಾರ Alumni Portal ಅನ್ನು ಅಭಿವೃದ್ಧಿಪಡಿಸಿ ವಿವಿಯಲ್ಲಿ ಅಳವಡಿಸಲು ಮೊತ್ತ ರೂ.37,58,300/- (ಮೂವತ್ತೇಳು ಲಕ್ಷದ ಐವತ್ತೆಂಟು ಸಾವಿರದ ಮುನ್ನೂರು ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ವೆಚ್ಚ ತಗಲುತ್ತದೆ ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ.

ಮೇಲಿನ a) ಹಾಗೂ b) ಅಂಶಗಳನ್ನು ಅವಗಾಹನೆಗೆ ತರುತ್ತಾ ವಿವಿಗೆ ಅವಶ್ಯವಿರುವ ವೆಬ್‌ಸೈಟ್ಸ್‌ಗಳನ್ನು ಒಂದು ಬಾರಿಗೆ ಅಭಿವೃದ್ಧಿಪಡಿಸಿ ಅಳವಡಿಸಿಕೊಳ್ಳಲು ಅವಶ್ಯ ವಿಶೇಷಣಗಳನ್ನು ವಿವಿಯ ತಾಂತ್ರಿಕ ಪರಿಣಿತರ ಸಲಹಾ ಸಮಿತಿ ಸಭೆಯು ಚರ್ಚಿಸಿದ ನಂತರ ನಿಯಮಾನುಸಾರ ಕ್ರಮವಹಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಷಯದಲ್ಲಿ ಉಲ್ಲೇಖಿಸಲಾಗಿರುವ a) ಹಾಗೂ b) ಅಂಶಗಳ ಅನುಸಾರ ವಿವಿಗೆ ಅವಶ್ಯವಿರುವ ವೆಬ್‌ಸೈಟ್ಸ್‌ಗಳನ್ನು ಒಂದು ಬಾರಿಗೆ ಅಭಿವೃದ್ಧಿಪಡಿಸಿ ಅಳವಡಿಸಿಕೊಳ್ಳಲು ಅವಶ್ಯ ವಿಶೇಷಣಗಳನ್ನು ವಿವಿಯ ತಾಂತ್ರಿಕ ಪರಿಣಿತರ ಸಲಹಾ ಸಮಿತಿ ಸಭೆಯು ಚರ್ಚಿಸಿದ ನಂತರ ನಿಯಮಾನುಸಾರ ಕ್ರಮವಹಿಸಲು ಸಭೆಯು ಅನುಮೋದನೆ ನೀಡಿತು.**

#####

<u>**ವಿಷಯ ಸಂಖ್ಯೆ: 175.27**</u>

**ವಿಷಯ: ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕರುಗಳಾದ ಡಾ. ತೇಜಸ್ವಿ ನವಿಲೂರು, ಡಾ. ಎಂ.ಎಸ್. ರಮಾನಂದ ಹಾಗೂ ಡಾ. ಶಂಕರನಾರಾಣಪ್ಪ ಇವರುಗಳಿಗೆ ಪ್ರಾಧ್ಯಾಪಕ ಹುದ್ದೆಯ ಪದೋನ್ನತಿಗೆ ಸಂಬಂಧಿಸಿದಂತೆ ವಿಷಯ ಮಂಡಿಸುತ್ತಿರುವ ಕುರಿತು.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರುಗಳಾದ ಡಾ. ತೇಜಸ್ವಿ ನವಿಲೂರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಡಾ. ಎಂ.ಎಸ್. ರಮಾನಂದ, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಡಾ. ಶಂಕರನಾರಾಣಪ್ಪ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಇವರುಗಳು ಮುಂದಿನ ಹಂತದ ಪದೋನ್ನತಿಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸಹ ಪ್ರಾಧ್ಯಾಪಕರುಗಳಾದ ಡಾ. ತೇಜಸ್ವಿ ನವಿಲೂರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಡಾ. ಶಂಕರನಾರಾಣಪ್ಪ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಡಾ. ಎಂ.ಎಸ್. ರಮಾನಂದ, ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರುಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ: 17.10.2019ರ ಸರ್ಕಾರದ ನಿರ್ದೇಶನದನ್ವಯ ವಿಶ್ವವಿದ್ಯಾನಿಲಯವು ದಿನಾಂಕ: 18.10.2017ರಂದು ಷೋಕಾಸ್ ನೋಟೀಸ್ ಜಾರಿಗೊಳಿಸಲಾಗಿತ್ತು. ವಿವಿ. ನಿಲಯವು ನೀಡಿರುವ ಷೋಕಾಸ್ ನೋಟೀಸ್‌ಅನ್ನು ಪ್ರಶ್ನಿಸಿ ಸದರಿಯವರುಗಳು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಕ್ರಮವಾಗಿ WP.No.52225/2019, WP.No.52302/2019, WP.No.52325 /2019 ಪ್ರಕರಣಗಳನ್ನು ದಾಖಲಿಸಿದ್ದು, ಈ ಸಂಬಂಧ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 12.09.2023ರ ಆದೇಶದಲ್ಲಿ – ". . . . . I am therefore, of the view that the impluged orders and the subsequent Show cause Notices cannot be sustained and the same are therefore, set aside. The writ petitions are accordingly allowed . . . ."ಎಂದು ಆದೇಶಿಸಿರುತ್ತದೆ.

ಕುಲಪತಿಗಳು                                                                 ಕುಲಸಚಿವರು

ಸದರಿ ಕಾನೂನು ಅಭಿಪ್ರಾಯವನ್ನು ಶ್ರೀ ಸಂತೋಷ್ ಎಸ್. ನಗರಾಳೆ, ವಕೀಲರು, ಇವರಿಂದ ಕಾನೂನು ಅಭಿಪ್ರಾಯ ಪಡೆಯುಂತೆ ಮಾನ್ಯ ಕುಲಪತಿಗಳು ಆದೇಶಿಸಿದ್ದ ಹಿನ್ನೆಲೆಯಲ್ಲಿ, ಸದರಿಯವರಿಂದ ಕಾನೂನು ಅಭಿಪ್ರಾಯ ಪಡೆಯಲಾಗಿದ್ದು,

ದಿನಾಂಕ: 30.10.2023ರಂದು ಈ ಕೆಳಕಂಡಂತೆ ಕಾನೂನು ಅಭಿಪ್ರಾಯವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ". . . . . The Hon'ble High Court has set aside the umpugned order and show cause notice seeking explanation from the petitioner. In view of the same. I am of the view that the University may restrain from taking further action against the said individual petitioners and grant the benefits as in accordance with the law if there are no further legal impediments".

ಮೇಲ್ಕಂಡ ಮೂವರು ಸಹ ಪ್ರಾಧ್ಯಾಪಕರು ಹಾಗೂ ಗ್ರಂಥಪಾಲಕರಿಗೆ ಸಂಬಂಧಿಸಿದಂತೆ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಇಡಿ 3 ಯುಎನ್ಇ 2020, ದಿನಾಂಕ: 25.09.2023ರಲ್ಲಿ "ಕರಾಮುವಿ ಅಧಿನಿಯಮ 1992ರ ಅಧ್ಯಾಯ III ರ ಪ್ರಕರಣ 8(2)ರ ನಿಯಮದಡಿ ಆಡಳಿತ ಮತ್ತು ಹಣಕಾಸಿಗೆ ಸಂಬಂಧಿಸಿದಂತೆ ಮಾನ್ಯ ರಾಜ್ಯಪಾಲರಿಗೆ /ಸರ್ಕಾರಕ್ಕಿರುವ ನಿರ್ದೇಶನ ನೀಡುವ ಅಧಿಕಾರವಿರುತ್ತದೆ. ಅದರನ್ವಯ ಪ್ರಸ್ತಾಪಿತ ಪ್ರಕರಣದಲ್ಲಿ ಯುಜಿಸಿ ನಿಯಮಬಾಹಿರ ನೇಮಕಾತಿ (ಆಡಳಿತಾತ್ಮಕ ನಿರ್ವಹಣೆ) ಹಾಗೂ ವೇತನ ವಿತರಣೆ (ಹಣಕಾಸು) ಯಾಗಿರುವುದರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ 1992ರ ಅಧ್ಯಾಯ III ರ ಪ್ರಕರಣ 8(2)ರನ್ವಯ ರಾಜ್ಯಪಾಲರಿಗೆ/ಸರ್ಕಾರಕ್ಕಿರುವ ಅಧಿಕಾರ ಹಾಗೂ ಸಿಎಜಿ ರವರು ನೀಡಿರುವ ವರದಿಯನುಸಾರ ಕ್ರಮವಹಿಸಿ ವರದಿ ಸಲ್ಲಿಸುವಂತೆ" ತಿಳಿಸಿರುತ್ತಾರೆ.

ಅಧ್ಯಾಪಕರುಗಳು ಸಲ್ಲಿಸಿರುವ ಅರ್ಜಿಗಳನ್ನು ಪ್ರಾರ್ಥಮಿಕ ಹಂತವಾಗಿ ಪರಿಶೀಲಿಸುವ ಸಂಬಂಧ ರಚಿತಗೊಂಡಿರುವ ಪರಿಶೀಲನಾ ಸಮಿತಿಯ ಸದಸ್ಯರುಗಳು ಮಾನ್ಯ ಕುಲಾಧಿಪತಿಗಳಿಂದ ಅಂಕಿತ ಪಡೆದ ಕರಾಮುವಿಯ ಪರಿನಿಯಮ ಹಾಗೂ ಯುಜಿಸಿ ನಿಯಮದನ್ವಯ ಮುಂದಿನ ಹಂತದ ವಿಷಯವಾರು ಪದೋನ್ನತಿ ಅರ್ಜಿಗಳ ಪ್ರಾರ್ಥಮಿಕ ಹಂತವಾಗಿ ಪರಿಶೀಲನಾ ಕಾರ್ಯವನ್ನು ಪೂರ್ಣಗೊಳಿಸಿರುತ್ತಾರೆ. ಸ್ಕೋರ್ ಕಾರ್ಡ್‌ಗಳನ್ನು ಸಿದ್ಧಪಡಿಸಿ ಕುಲಸಚಿವರಿಗೆ ಸಲ್ಲಿಸಿರುತ್ತಾರೆ ಹಾಗೂ ಪರಿಶೀಲನಾ ಸಮಿತಿಯ ನಡಾವಳಿಯನ್ನು ಸಿದ್ಧಪಡಿಸಿ ವಿವಿ ನಿಲಯಕ್ಕೆ ಸಲ್ಲಿಸಿರುತ್ತಾರೆ.

ಪರಿಶೀಲನಾ ಸಮಿತಿಯವರು ಪರಿಶೀಲಿಸಿ ಸಲ್ಲಿಸಿರುವ ಅರ್ಜಿಗಳನ್ನು ಮುಂದಿನ ಹಂತದ ಪದೋನ್ನತಿಗೆ ಪರಿಗಣಿಸುವ ಸಂಬಂಧ Selection Committeeಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: 08.11.2023ರಂದು ಆಯ್ಕೆ ಮಂಡಳಿ ಸಭೆಯನ್ನು ನಡೆಸಿ ಸಭೆಯ ನಡಾವಳಿಯನ್ನು ಕುಲಸಚಿವರಿಗೆ ಸಲ್ಲಿಸಿರುತ್ತಾರೆ.

**ಆಯ್ಕೆ ಮಂಡಳಿ ಸಭೆಯು ಈ ಕೆಳಗಿನಂತೆ ಶಿಫಾರಸ್ಸು ಮಾಡಿರುತ್ತದೆ:**

| Sl. No | Name of the Associate Professor | Subject | Eligible Date of Promotion to Professor | Remarks |
|---|---|---|---|---|
| 01 | Dr. Shakranaranappa | Political Science | - | Selection Committee has not recommend the eligibility date for CAS promotion |
| 02 | Dr. Tejaswi Naviloor | Jounalism and Mass Communication | 11.12.2015 | - |
| 03 | Dr. M.S. Ramananda | Economics | 15.12.2015 | - |

ಕುಲಪತಿಗಳು

ಕುಲಸಚಿವರು

ಮೇಲಿನ ಅಂಶಗಳನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರಾದ ಶ್ರೀ. ಅಡಗೂರು ಹೆಚ್. ವಿಶ್ವನಾಥ್ ರವರು ಮಾತನಾಡಿ ಸದರಿ ಬಡ್ತಿಯನ್ನು ಯಾವ ದಿನಾಂಕದಿಂದ ನೀಡುತ್ತೀರೆಂದು ಕೇಳಿದರು.

ಕುಲಸಚಿವರು ಮಾತನಾಡಿ ಸದರಿ ನೌಕರರಿಗೆ ಹಿಂದಿನ ದಿನಾಂಕದಿಂದ ಜಾರಿಗೆ ಬಂದಂತೆ ಆದೇಶ ನೀಡಲಾಗುವುದೆಂದು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಯುಜಿಸಿ ನಿಯಮದನ್ವಯ ಪದೋನ್ನತಿಗೆ ಪರಿಗಣಿಸುವ ಸಂಬಂಧ Selection Committeeಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ನೀಡಿರುವ ತೀರ್ಮಾನದನ್ವಯ ಮುಂದಿನ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ಮಾನ್ಯ ಶ್ರೀ. ಬಿ.ಜಿ. ಪಾಟೀಲ್, ವ್ಯವಸ್ಥಾಪನಾ ಮಂಡಳಿ ಸದಸ್ಯರು ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಮಂಡನೆ.**

**1. ಕಲಬುರಗಿಯಲ್ಲಿನ ಪ್ರಾದೇಶಿಕ ಕೇಂದ್ರದ ಕಟ್ಟಡವನ್ನು ನಿರ್ಮಾಣ ಮಾಡುವುದು.**

– * –

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು, ಕಲಬುರಗಿ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕಟ್ಟಡ ನಿರ್ಮಾಣದ ಬಗ್ಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ನಿಗಮದೊಂದಿಗೆ ಕಟ್ಟಡ ನಿರ್ಮಾಣದ ಅನುದಾನದ ಬಗ್ಗೆ ವ್ಯವಹರಿಸಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**2. ಕಲಬುರಗಿಯಲ್ಲಿ ನೂತನವಾಗಿ ನೋಂದಣಿಗೊಂಡಿರುವ ನಿವೇಶನಕ್ಕೆ ಬೇಲಿ ಹಾಕುವುದು.**

– * –

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕಲಬುರಗಿಯಲ್ಲಿ ಇತ್ತೀಚೆಗೆ 30 ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೋಂದಣಿ ಮಾಡಿಕೊಂಡಿರುವ ನಿವೇಶನಕ್ಕೆ ಬೇಲಿಯನ್ನು ನಿರ್ಮಿಸುವುದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

#####

**3. ಗುಲಬರ್ಗಾ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ನಿವೇಶನದ ಸಲುವಾಗಿ ಸರ್ಕಾರದ ಹಂತದಲ್ಲಿ ಮಾತನಾಡುವುದು.**

– * –

ಕುಲಪತಿಗಳು ಕುಲಸಚಿವರು

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಗುಲಬರ್ಗಾ ವಿಶ್ವವಿದ್ಯಾನಿಲಯದ ಗೇಟ್ ಪಕ್ಕದಲ್ಲಿ ಉಚಿತವಾಗಿ ನೀಡಿರುವ 1 ಎಕರೆ ಜಾಗದಲ್ಲಿ ಪ್ರಾದೇಶಿಕ ಕಟ್ಟಡ ನಿರ್ಮಾಣದ ಬಗ್ಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ನಿಗಮದೊಂದಿಗೆ ಕಟ್ಟಡ ನಿರ್ಮಾಣದ ಅನುದಾನದ ಬಗ್ಗೆ ವ್ಯವಹರಿಸಿ ಅನುದಾನ ಪಡೆದ ನಂತರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

4. ಎಂ.ಎಸ್ಸಿ., ಪ್ರಾಯೋಗಿಕ ಪರೀಕ್ಷೆ ಕಲಬುರಗಿ ಮಟ್ಟದಲ್ಲಿ ನಡೆಸುವುದು.

– * –

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಎಂ.ಎಸ್ಸಿ. ಪ್ರಾಯೋಗಿಕ ಪರೀಕ್ಷೆಯನ್ನು ಕಲಬುರಗಿಯಲ್ಲಿ ನಡೆಸಲು ಆ ಕೇಂದ್ರದಲ್ಲಿ 20 ವಿದ್ಯಾರ್ಥಿಗಳಿಗಿಂತ ಹೆಚ್ಚಿದ್ದಲ್ಲಿ ಅಂತಹ ಕಡೆ ಪ್ರಾಯೋಗಿಕ ಪರೀಕ್ಷೆ ನಡೆಸಲು ವಿಶ್ವವಿದ್ಯಾನಿಲಯವು ಕ್ರಮವಹಿಸುವುದೆಂದು ತೀರ್ಮಾನಿಸಲಾಯಿತು.

#####

ಮಾನ್ಯ ಶ್ರೀ. ಡಿ. ರವಿಶಂಕರ್, ವ್ಯವಸ್ಥಾಪನಾ ಮಂಡಳಿ ಸದಸ್ಯರು ಸಭೆಯಲ್ಲಿ ಚರ್ಚಿಸಲು ಮಂಡಿಸಿದ ವಿಷಯ.

1. ಕರಾಮುವಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ "ಡಿ" ಗ್ರೂಪ್ ನೌಕರರು ವಯೋನಿವೃತ್ತಿ ಹಂತದಲ್ಲಿರುವ ನಮ್ಮಗಳಿಗೆ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ ಮನವಿಯನ್ನು ಎಲ್ಲಾ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಿಗೆ ಸಲ್ಲಿಸಿರುತ್ತಾರೆಂದು ಸಭೆಗೆ ತಿಳಿಸಿದರು.

– * –

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಈ ಕಾರ್ಯಗಳನ್ನು ಮಾಡುವ ಮುನ್ನ ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ, ಅವುಗಳಲ್ಲಿ ವಿಶ್ವವಿದ್ಯಾನಿಲಯದಲ್ಲಿ ಎಷ್ಟು ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳು ಖಾಲಿ ಇರುತ್ತದೆ ಹಾಗೂ ಖಾಲಿ ಇರುವ ಹುದ್ದೆಗಳಲ್ಲಿ ಪದೋನ್ನತಿ ನೀಡುವ ಹುದ್ದೆಗಳೆಷ್ಟು ಎಂಬ ಅಂಕಿ–ಅಂಶಗಳನ್ನು ಸಿದ್ಧಪಡಿಸಿ, ಅವುಗಳಲ್ಲಿ ಪರಿಚಾರಕ ಹುದ್ದೆಗಳಲ್ಲಿ ಹೆಚ್ಚು ವರ್ಷಗಳ ಕಾಲ ಸೇವೆ ಸಲ್ಲಿಸಿ ವಯೋನಿವೃತ್ತಿ ಹಂತದಲ್ಲಿರುವ ನೌಕರರುಗಳನ್ನು ಪರಿಗಣಿಸಬೇಕಾಗಿದ್ದು, ಇವುಗಳ ವಿವರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸಭೆಯಲ್ಲಿ ಸದಸ್ಯರುಗಳು ತಿಳಿಸಿದರು.

*****

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ, ಅದರಲ್ಲಿ ಎಷ್ಟು ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳು ಖಾಲಿ ಇರುತ್ತದೆ ಹಾಗೂ ಖಾಲಿ ಇರುವ ಹುದ್ದೆಗಳಲ್ಲಿ ಪದೋನ್ನತಿ ನೀಡುವ ಹುದ್ದೆಗಳೆಷ್ಟು ಎಂಬ ಅಂಕಿ–ಅಂಶಗಳನ್ನು ಸಿದ್ಧಪಡಿಸಿ, ಜೇಷ್ಠತಾ ಪಟ್ಟಿಯೊಂದಿಗೆ Vacancy Registar ಗಳೊಂದಿಗೆ ಸಿದ್ಧಪಡಿಸಿ, ಅವುಗಳಲ್ಲಿ ಪರಿಚಾರಕ ಹುದ್ದೆಗಳಲ್ಲಿ ಹೆಚ್ಚು ವರ್ಷಗಳ ಕಾಲ ಸೇವೆ ಸಲ್ಲಿಸಿ ವಯೋನಿವೃತ್ತಿ ಹಂತದಲ್ಲಿರುವ ನೌಕರರುಗಳನ್ನು ಪರಿಗಣಿಸಬೇಕಾಗಿರುವುದರಿಂದ ಇವುಗಳ ವಿವರಗಳೊಂದಿಗೆ ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಲು ತೀರ್ಮಾನಿಸಲಾಯಿತು.

#####

ಕುಲಪತಿಗಳು

ಕುಲಸಚಿವರು

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಗಳು:

1. ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಖಾಯಂ ಅಧ್ಯಾಪಕರುಗಳ ಸಂಬಂಧ ನಡೆದ ಕುಂದು-ಕೊರತೆ ನಿವಾರಣಾ ಸಮಿತಿ ವರದಿಯ ಬಗ್ಗೆ.

– * –

ತೀರ್ಮಾನ:

ದಿನಾಂಕ: **08.11.2023**ರಂದು ಕರಾಮುವಿಯ ಖಾಯಂ ಅಧ್ಯಾಪಕರುಗಳ ಸಂಬಂಧ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಕುಂದು-ಕೊರತೆ ನಿವಾರಣಾ ಸಮಿತಿಯಲ್ಲಿ ಕೈಗೊಂಡ ಶಿಫಾರಸ್ಸಿನ ಅನ್ವಯ ಡಾ.ಎಂ. ಉಮಾಶಂಕರ್, ಸಹಾಯಕ ಪ್ರಾಧ್ಯಾಪಕರು ಮತ್ತು ಡಾ.ಎಂ.ಎಸ್. ಹೇಮಲತ, ಸಹಾಯಕ ಪ್ರಾಧ್ಯಾಪಕರು ಇವರಿಗೆ ಹಿಂದಿನ ಸೇವೆಯನ್ನು ಪರಿಗಣಿಸಿ ಪದೋನ್ನತಿ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

2. ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಇರುವ ಖಾಯಂ ಅಧ್ಯಾಪಕರು ಮತ್ತು ಅಧ್ಯಾಪಕೇತರ ನೌಕರರಿಗೆ ಸರ್ಕಾರದಿಂದ ಅನುದಾನ ಪಡೆಯುವ ಬಗ್ಗೆ.

– * –

ತೀರ್ಮಾನ:

ಈ ವಿಷಯದ ಬಗ್ಗೆ ಮಾನ್ಯ ಶ್ರೀ. ಅಡಗೂರು ಹೆಚ್. ವಿಶ್ವನಾಥ್ ರವರು ಮಾತನಾಡಿ ಈ ಬಗ್ಗೆ ಯಾವ ಯಾವ ಶ್ರೇಣಿಯಲ್ಲಿ ಎಷ್ಟು ಖಾಯಂ ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಅವರ ವೇತನದ ಲೆಕ್ಕಾಚಾರಗಳನ್ನು ಪಟ್ಟಿಮಾಡಿ ವಾರ್ಷಿಕ ಎಷ್ಟು ಅನುದಾನ ಅವಶ್ಯಕತೆ ಇರುತ್ತದೆ ಎಂಬ ಬಗ್ಗೆ ಮಾಹಿತಿ/ವಿವರಗಳೊಂದಿಗೆ ಪತ್ರವನ್ನು ಸಿದ್ಧಪಡಿಸಿ ಸಭೆಗೆ ಮಂಡಿಸಿದಲ್ಲಿ ಅದಕ್ಕೆ ಎಲ್ಲಾ ಸದಸ್ಯರು ಸಹಿ ಮಾಡಿ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಉನ್ನತ ಶಿಕ್ಷಣ ಸಚಿವರಿಗೆ, ಹಣಕಾಸು ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ಉನ್ನತ ಶಿಕ್ಷಣ ಇಲಾಖೆಯ (ವಿಶ್ವವಿದ್ಯಾಲಯ) ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ನೀಡಿ ಅವರೊಂದಿಗೆ ಚರ್ಚಿಸಿ, ಈ ಬಗ್ಗೆ ಮುಂದಿನ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

3. ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕೆಲವು ಅಧ್ಯಾಪಕರು ಸಂಚಾರಿ ದೂರವಾಣಿಗಳಲ್ಲಿ ವಿಶ್ವವಿದ್ಯಾನಿಲಯದ ವಿರುದ್ಧ ಮತ್ತು ಅವಾಚ್ಯ ಪದಗಳನ್ನು ಉಪಯೋಗಿಸಿ ಸಂದೇಶಗಳನ್ನು ರವಾನಿಸುತ್ತಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಮತ್ತು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೆಲವು ಅಧ್ಯಾಪಕೇತರ ನೌಕರರು ವಿಶ್ವವಿದ್ಯಾನಿಲಯದ ಕೆಲವು ತಪ್ಪು ಮಾಹಿತಿಯನ್ನು ಸಂಚಾರಿ ದೂರವಾಣಿಗಳಲ್ಲಿ ಸಂದೇಶಗಳನ್ನು ಮತ್ತು ವ್ಯಾಟ್ಸಾಪ್‌ನಲ್ಲಿ ವಿವರಗಳನ್ನು ಸರ್ಕಾರದ ಅಧಿಕಾರಿಗಳಿಗೆ ಕಳುಹಿಸುತ್ತಿರುವುದನ್ನು ಸಭೆಯ ಗಮನಕ್ಕೆ ತಂದರು.

– * –

ಕುಲಪತಿಗಳು ಕುಲಸಚಿವರು

ತೀರ್ಮಾನ:

ಸದರಿ ವಿಷಯದ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಘನತೆ, ಗೌರವಕ್ಕೆ ಧಕ್ಕೆ ಬರುವಂತೆ ನಡೆದುಕೊಳ್ಳುವ ಸಿಬ್ಬಂದಿಗಳ ಮೇಲೆ (ಅಧ್ಯಾಪಕರು ಮತ್ತು ಅಧ್ಯಾಪಕೇತರ ನೌಕರರು) ಕಠಿಣ ಶಿಸ್ತು ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ಸಭೆಯಲ್ಲಿ ತೀರ್ಮಾನಿಸಲಾಯಿತು.

#####

4. ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೆಲವು ಖಾಯಂ ಅಧ್ಯಾಪಕ ವೃಂದದವರು ಬೇರೆ ವಿಶ್ವವಿದ್ಯಾನಿಲಯಗಳಿಗೆ ವರ್ಗಾವಣೆ ಕೋರಿರುವ ಬಗ್ಗೆ.

– * –

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯ ಖಾಯಂ ಅಧ್ಯಾಪಕ ವೃಂದದವರಾದ(1)ಡಾ.ವಿ.ಮಹೇಶ್, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ರವರು ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಹಾಗೂ (2) ಡಾ. ಆರ್.ಹೆಚ್.ಪವಿತ್ರ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ರವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಕೋರಿದ್ದು, ಅವರುಗಳ ಹುದ್ದೆಯನ್ನು **Without Post** ಅಂತರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಗೆ ಪರಿಗಣಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

5. ವಿಷಯ: ವಿಶ್ವವಿದ್ಯಾನಿಲಯದ ಬೋಧಕೇತರ ನೌಕರರುಗಳ "ಕುಂದು ಕೊರತೆ ಸಮಿತಿ" ಸಭೆಯ ನಡಾವಳಿ ಬಗ್ಗೆ.

– * –

ವಿಷಯ ಸಂಖ್ಯೆ: 10ಕ್ಕೆ ಸಂಬಂಧಿಸಿದಂತೆ –

ಶ್ರೀ ರವಿ ಕೆ, ವಿನುತ ಕೆ ಆರ್, ಲೋಕೇಶ್ ಮತ್ತು ಚನ್ನಬಸಪ್ಪ ಡಿ ಎಸ್, ಗ್ರೇಡೆಡ್ ಪೇ ನೌಕರರು ಇವರುಗಳು ಸೇವಕ ಹುದ್ದೆಯಿಂದ ಪರಿಚಾರಕ ಹುದ್ದೆಗೆ ಹಾಗೂ ಹೆಚ್.ಆರ್.ಎ ಸೌಲಭ್ಯವನ್ನು ನೀಡುವಂತೆ ಕೋರಲಾಗಿದ್ದು, ಈ ಹಿಂದಿನ ಸಭೆಯಲ್ಲಿ ಇವರುಗಳ ಸೇವಾನುಭವ ಆಧಾರದ ಮೇಲೆ ಸೇವಕ ಹುದ್ದೆಯಿಂದ ಪರಿಚಾರಕ ಹುದ್ದೆಗೆ ಪರಿಗಣಿಸಲಾಗಿರುತ್ತದೆ. ಆದರೆ ಹೆಚ್.ಆರ್.ಎ ಸೌಲಭ್ಯವನ್ನು ಮಂಜೂರು ಮಾಡಿರುವುದಿಲ್ಲ ಸಭೆಯಲ್ಲಿ ಚರ್ಚಿಸಿನಂತರ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ.

*****

ತೀರ್ಮಾನ: ಸೇವಾನುಭವವನ್ನು ಪರಿಶೀಲಿಸಿದ ನಂತರ ಶ್ರೀ. ರವಿ ಕೆ, ಇವರಿಗೆ ಹೆಚ್.ಆರ್.ಎ ಸೌಲಭ್ಯವನ್ನು ಮಂಜೂರು ಮಾಡಲು ತೀರ್ಮಾನಿಸಲಾಯಿತು.

#####

ವಿಷಯ ಸಂಖ್ಯೆ: 11ಕ್ಕೆ ಸಂಬಂಧಿಸಿದಂತೆ –

ಶ್ರೀ ಜಿ. ಕಿರಣ್ ರಾವ್, ದ್ವಿದ.ಗು, ಇವರು ಕರಾಮುವಿ ನಿಲಯಕ್ಕೆ 2011ರಲ್ಲಿ ಕಂಪ್ಯೂಟರ್ ಎ.ಎಂ.ಸಿ. ಕಾರ್ಯವನ್ನು ವಹಿಸಿಕೊಂಡಿದ್ದ ಖಾಸಗಿ ಸಂಸ್ಥೆಯ ವತಿಯಿಂದ ಬಂದು ಕಾರ್ಯನಿರ್ವಹಿಸುತ್ತಾ, ದಿನಾಂಕ: 20.09.2016ರಲ್ಲಿ

ಕುಲಪತಿಗಳು ಕುಲಸಚಿವರು

ವಿಶ್ವವಿದ್ಯಾನಿಲಯದ ಆದೇಶದಂತೆ ಗಣಕ ಯಂತ್ರಗಳ ರಿಪೇರಿ ಕಾರ್ಯಕ್ಕೆ ನೇಮಕಗೊಂಡಿರುತ್ತೇನೆ. ಅದರಂತೆ ಸದರಿ ಕಾರ್ಯವನ್ನು ನಿರ್ವಹಿಸುತ್ತಿದ್ದು ದಿನಾಂಕ: 04.10.2016ರ ವಿಶ್ವವಿದ್ಯಾನಿಲಯದ ಆದೇಶದಲ್ಲಿ ಗಣಕಯಂತ್ರ ರಿಪೇರಿ ಕಾರ್ಯನಿರ್ವಹಿಸುತ್ತಿರುವ ನನಗೆ ದಿನ ಒಂದಕ್ಕೆ ರೂ.249.55/–ಗಳ ವೇತನವನ್ನು ನಿಗಧಿಪಡಿಸಲಾಗಿರುತ್ತದೆ.

*****

ತೀರ್ಮಾನ: ಶ್ರೀ ಜಿ. ಕಿರಣ್ ರಾವ್, ದ್ವಿ.ದ.ಗು, ಇವರು ಕರಾಮುವಿ ನಿಲಯಕ್ಕೆ 2011ರಲ್ಲಿ ಖಾಸಗಿ ಸಂಸ್ಥೆಯೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದು, ಸದರಿ ಸಂಸ್ಥೆಯ ಅವಧಿ ಮುಕ್ತಾಯಗೊಂಡ ನಂತರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ತಮ್ಮ ಸೇವೆಯನ್ನು ದಿನಾಂಕ: 20.09.2016 ರಿಂದ ಗಣಕ ಯಂತ್ರಗಳ ರಿಪೇರಿಕಾರ್ಯ, ಗಣಕಯಂತ್ರ ಸಾಫ್ಟ್‌ವೇರ್ ಅಪ್‌ಡೇಟ್ ಕಾರ್ಯ, ಸರ್ವರ್, ಮತ್ತು ನೆಟ್‌ವರ್ಕಿಂಗ್ ಕಾರ್ಯವನ್ನು ನಿರ್ವಹಿಸುತ್ತಿದ್ದು, ಸದರಿಯವರು ಲ್ಯಾಬ್ ಇನ್‌ಸ್ಟ್ರಕ್ಟರ್ ಹುದ್ದೆಗೆ ಪರಿಗಣಿಸಿ ವೇತನ ಪರಿಷ್ಕರಣೆ ಮಾಡಿಕೊಡುವಂತೆ ಕೋರಿರುತ್ತಾರೆ, ಇವರಿಗೆ ಹುದ್ದೆ ಬದಲಾವಣೆಗೆ ಹಾಗೂ ವೇತನ ಪರಿಗಣಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚಿಸಿ ಕ್ರಮವಹಿಸಬಹುದಾಗಿದೆ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ, ಸದರಿಯವರು ವಿ.ವಿ.ನಿಲಯದ ಕಾರ್ಯಕ್ಕೆ ಯಾವುದೇ ತೊಂದರೆಯಾಗದಂತೆ ಕರ್ತವ್ಯ ನಿರ್ವಹಿಸಿರುವುದರಿಂದ ಶ್ರೀ ಜಿ. ಕಿರಣ್ ರಾವ್, ದ್ವಿ.ದ.ಗು, ಇವರನ್ನು ಲ್ಯಾಬ್ ಇನ್‌ಸ್ಟ್ರಕ್ಟರ್ ಹುದ್ದೆಗೆ ಪರಿಗಣಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

#####

<u>ವಿಷಯ ಸಂಖ್ಯೆ: 18ಕ್ಕೆ ಸಂಬಂಧಿಸಿದಂತೆ –</u>

ಅಂದಾನಿ, ಸೇವಕ, ರಮೇಶ್ ಡಿ, ಸೇವಕ ಮತ್ತು ಮಾದಪ್ಪ ಸೇವಕ ಗ್ರೇಡೆಡ್ ಪೇ ನೌಕರರು ಇವರು ವಿದ್ಯಾರ್ಹತೆ ಹಾಗೂ ಸೇವಾ ಅನುಭವ ಆಧಾರದ ಮೇಲೆ ಪರಿಚಾರಕ ಹುದ್ದೆಗೆ ಪರಿಗಣಿಸುವಂತೆ ಸಲ್ಲಿಸಿರುವ ಮನವಿ ಬಗ್ಗೆ.

– * –

ತೀರ್ಮಾನ: ಅಂದಾನಿ, ಸೇವಕ, ರಮೇಶ್ ಡಿ, ಸೇವಕ ಮತ್ತು ಮಾದಪ್ಪ ಸೇವಕ ಗ್ರೇಡೆಡ್ ಪೇ ಪದನಾಮದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹುದ್ದೆ ಬದಲಾವಣೆಗೆ ಪರಿಗಣಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚಿಸಿ ಕ್ರಮವಹಿಸಬಹುದಾಗಿದೆ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ, ಸದರಿಯವರುಗಳು 9 ವರ್ಷಗಳ ಸೇವೆಯನ್ನು ಪರಿಗಣಿಸಿ ವಿದ್ಯಾರ್ಹತೆ ಹಾಗೂ ಸೇವಾ ಅನುಭವ ಅಧಾರದ ಮೇಲೆ ಪರಿಚಾರಕ ಹುದ್ದೆಗೆ ಪರಿಗಣಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

#####

ಕುಲಪತಿಗಳು ಕುಲಸಚಿವರು

**<u>ವಿಷಯ ಸಂಖ್ಯೆ: 19ಕ್ಕೆ ಸಂಬಂಧಿಸಿದಂತೆ –</u>**

**ಶ್ರೀಮತಿ ರೂಪ ಎಸ್ ಎನ್ ಇವರು ದಿನಾಂಕ: 14.11.2023ರ ಪತ್ರದಲ್ಲಿ ಹಾಜರಾತಿ ಪುಸ್ತಕದಲ್ಲಿ ಅಟೆಂಡರ್ ಬದಲಾಗಿ ಸಹಾಯಕಿಯಾಗಿ ಬದಲಾಗಿರುವುದರಿಂದ ಅಟೆಂಡರ್ ಆಗಿ ಪರಿಗಣಿಸುವಂತೆ ಕೋರಿ ಸಲ್ಲಿಸಿರುವ ಮನವಿ ಬಗ್ಗೆ.**

– * –

**ತೀರ್ಮಾನ:** **ಶ್ರೀಮತಿ ರೂಪ ಎಸ್ ಎನ್ ಇವರನ್ನು ಅಟೆಂಡರ್ ಆಗಿ ಪರಿಗಣಿಸಲು ತೀರ್ಮಾನಿಸಲಾಯಿತು.**

#####

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 175ನೇ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿರುವುದಕ್ಕೆ ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಪತಿಗಳು** **ಕುಲಸಚಿವರು**